ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 14 ಭಾನುವಾರ 2022

ಸಂಪುಟ: 43 | ಸಂಚಿಕೆ: 120 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಭವ್ಯ ಭಾರತ ಕಟ್ಟಲು ಯುವ ಜನತೆ ಸನ್ನದ್ಧರಾಗಿ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ● ಹರ್ ಘರ್ ತಿರಂಗಾ ಅಭಿಯಾನಕ್ಕೆ ಚಾಲನೆ

ಬೆಂಗಳೂರು, ಆ. 13(ಕೆಎಂಶಿ)– ಭವ್ಯ ಭಾರತ ಕಟ್ಟಲು ಯುವಜನತೆ ಸನ್ನದ್ಧರಾಗಬೇಕು. ದೇಶ ಮೊದಲು, ದೇಶದ ನಂತರ ನಾವೆಲ್ಲರೂ ಎಂಬುದನ್ನು ಪ್ರತಿಪಾದಿಸಬೇಕು. ಸಂಕುಚಿತ, ಸ್ವಾರ್ಥ ಮನೋಭಾವನೆಯನ್ನು ತೊರೆದು, ದೇಶಕ್ಕಾಗಿ ನಿಲ್ಲುವ ಕರ್ತವ್ಯ ನಮ್ಮೆಲ್ಲರದ್ದಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯುವಜನತೆಗೆ ಕರೆ ನೀಡಿದರು.

ಅವರು ಇಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆಯೋಜಿಸಿದ್ದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಹರ್ ಘರ್ ತಿರಂಗಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ವಾತಂತ್ರ್ಯಪೂರ್ವದಲ್ಲಿ ಜನರು ದೇಶಕ್ಕಾಗಿ ಪ್ರಾಣ ಕೊಡುತ್ತಿದ್ದರು. ಈಗ ದೇಶಕ್ಕಾಗಿ ಬದುಕಿ, ದುಡಿಯಬೇಕು. ಭವ್ಯ ಭಾರತದ ನಿರ್ಮಾಣದಲ್ಲಿ ಯುವಕರು ತಮ್ಮ ದುಡಿಮೆಯ ಮೂಲಕ ಪಾಲನ್ನು ನೀಡಬೇಕು. ಇನ್ನು ಮುಂದಿನ 25 ವರ್ಷಗಳ ಕಾಲ ದೇಶಕ್ಕಾಗಿ ನಾನೇನು ಮಾಡಿದ್ದೇನೆ ಎಂಬುದಕ್ಕೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಯುವಕರೆಂದರೆ ಶಕ್ತಿ, ಯುವಕರೆಂದರೆ ಭವಿಷ್ಯ. ನಮ್ಮ ನಾಡಿಗೆ ನವಕರ್ನಾಟಕದಿಂದ ನವಭಾರತ ನಿರ್ಮಾಣ ಮಾಡಬೇಕಿದೆ. ಪ್ರಧಾನಮಂತ್ರಿಗಳು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಸಂಕಲ್ಪ ಮಾಡಿದ್ದು, ಅದಕ್ಕೆ ಕರ್ನಾಟಕದಿಂದ 1 ಟ್ರಿಲಿಯನ್ ಡಾಲರ್ ಆರ್ಥಿಕತೆಯ ಕೊಡುಗೆಯನ್ನು ನೀಡುವ ಗುರಿ ಇದೆ ಎಂದರು. ಯುವಕರು ಭಾರತದ ಮುಂದಿನ ಭವಿಷ್ಯವನ್ನು ನಿರ್ಮಿಸುವ ಭಾಗ್ಯಶಾಲಿಗಳು. 75 ವರ್ಷ ವ್ಯಕ್ತಿಗಾದರೆ ದೊಡ್ಡ ವಯಸ್ಸು. ಅದೇ ದೇಶಕ್ಕಾದರೆ ನವ ತರುಣನ ವಯಸ್ಸು ಯುವಕರಿಗೆ ಸೇರಿರುವ ಯುವ ದೇಶ ಭವ್ಯ ಭವಿಷ್ಯವಿರುವ ದೇಶ ನಮ್ಮದು. 46 % ಯುವಶಕ್ತಿ ಇರುವ ದೇಶ ಭಾರತ. ಸರ್ಕಾರದ ವತಿಯಿಂದ 1 ಕೋಟಿ 8 ಲಕ್ಷ ಧ್ವಜಗಳನ್ನು ನೀಡಿದ್ದೇವೆ. ಜನ ಸ್ವಪ್ರೇರಣೆಯಿಂದ ಧ್ವಜ ಕೊಂಡಿದ್ದಾರೆ. ▶ 8ನೇ ಪುಟಕ್ಕೆ


ಆ.28ರ ಜನೋತ್ಸವಕ್ಕೂ ಮುನ್ನ ಸರ್ಕಾರದಲ್ಲಿ



ಮಹತ್ತರ ಬದಲಾವಣೆ...!

● ಸಚಿವ ಸಹೋದ್ಯೋಗಿಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂಗಿತ ● ಎಲ್ಲವೂ ಗುಪ್ತ್... ಗುಪ್ತ್...

ಬೆಂಗಳೂರು, ಆ. 13(ಕೆಎಂಶಿ)–ಜನೋತ್ಸವಕ್ಕೂ ಮುನ್ನ ಸರ್ಕಾರದಲ್ಲಿ ಮಹತ್ತರ ಬದಲಾವಣೆಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ನಿನ್ನೆ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅಧಿಕಾರಿಗಳನ್ನು ಹೊರಕಳಿಸಿದ ನಂತರ ಮುಖ್ಯಮಂತ್ರಿಯವರು ತಮ್ಮ ಸಹೋದ್ಯೋಗಿಗಳಿಗೆ ಈ ವಿಚಾರ ತಿಳಿಸಿದ್ದಾರೆ. ಆಡಳಿತದಲ್ಲಿ ಯಾವ ರೀತಿ ಬದಲಾವಣೆಯಾಗುತ್ತದೆ ಎಂಬ ಬಗ್ಗೆ ಯಾವುದೇ ಮಾಹಿತಿಯನ್ನು ನೀಡದೇ ಗೌಪ್ಯತೆ ಕಾಪಾಡಿಕೊಂಡಿದ್ದಾರೆ.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಸರ್ಕಾರ ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಜುಲೈ 28 ರಂದು ದೊಡ್ಡಬಳ್ಳಾಪುರದಲ್ಲಿ ಜನೋತ್ಸವ ಕಾರ್ಯಕ್ರಮ ನಡೆಸಲು ಬಿಜೆಪಿ ನಿರ್ಧರಿಸಿತ್ತು. ಕಾರಣಾಂತರಗಳಿಂದ ಮುಂದೂಡಲ್ಪಟ್ಟ ಈ ಕಾರ್ಯಕ್ರಮವನ್ನು ಅದೇ ಸ್ಥಳದಲ್ಲಿ ಆಗಸ್ಟ್ 28 ರಂದು ನಡೆಸಲು ನಿರ್ಧರಿಸಿದೆ. ಮುಂಬರುವ ವಿಧಾನಸಭಾ ▶ 8ನೇ ಪುಟಕ್ಕೆ

ಅಂಗಾಂಗ ದಾನದಿಂದ ಸಾವಿನ ನಂತರವೂ ಬದುಕಿ

ಬೆಂಗಳೂರು, ಆ. 13(ಕೆಎಂಶಿ)– ಅಂಗಾಂಗ ದಾನ ಮಾನವೀಯತೆಯ ಕೆಲಸ. ಅಂಗಾಂಗಗಳ ದಾನಕ್ಕೆ ಸಂಕಲ್ಪ ಮಾಡುವ ಮುಖಾಂತರ ಸಾವಿನ ನಂತರವೂ ಬದುಕು ನೀಡುವ ಸಾರ್ಥಕ ಕಾರ್ಯ ಮಾಡಬಹುದಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಶ್ವ ಅಂಗಾಂಗ ದಾನ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿಜ್ಞಾನಿಗಳ, ವೈದ್ಯರ ಪರಿಶ್ರಮದಿಂದ ನಮ್ಮ ಸಾವಿನ ನಂತರ ಅಂಗಾಂಗಗಳನ್ನು ನೀಡುವ ಮೂಲಕ ಇತರರ ಜೀವವನ್ನು ಬದುಕಿಸಬಹುದಾಗಿದೆ. ಒಬ್ಬ ವ್ಯಕ್ತಿ ತನ್ನ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಎಂಟು ಜೀವಗಳನ್ನು ಉಳಿಸಬಹುದು. ಚರ್ಮದಿಂದ ಹಿಡಿದು ಎಲ್ಲ ಅಂಗಗಳನ್ನು ದಾನ ಮಾಡಬಹುದು. ಸ್ವಾಮಿ ವಿವೇಕಾನಂದರು ಹೇಳಿದಂತೆ ಸಾಧಕನಿಗೆ ಸಾವು ಅಂತ್ಯವಲ್ಲ, ಸಾವಿನ ನಂತರವೂ ▶ 8ನೇ ಪುಟಕ್ಕೆ

ನಮ್ಮ ಪರಂಪರೆ ಪಾಲಿಸದೇ ಇನ್ನೊಬ್ಬರ ಪರಂಪರೆ ವಿರುದ್ಧ ನಾವು ಮುಗಿಬೀಳುವುದು ಯಾವ ನ್ಯಾಯ?
■ ಪುಟ–2

ಮಾಸ್ಕ್ ಧರಿಸದವರಿಗೆ 250 ರೂ. ದಂಡ

ಬೆಂಗಳೂರು: ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವ ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸುವ ಮೊದಲ



ಹೆಜ್ಜೆಯಾಗಿ, ಆರೋಗ್ಯ ಸೌಧ ಮತ್ತು ಅದರ ಆವರಣದಲ್ಲಿ ಮಾಸ್ಕ್ ಧರಿಸದವರಿಗೆ 250 ರೂ. ದಂಡ ವಿಧಿಸಲು ಆರೋಗ್ಯ ಆಯುಕ್ತ ಡಿ. ರಂದೀಪ್ ಆದೇಶ ಹೊರಡಿಸಿದ್ದಾರೆ. ಆರೋಗ್ಯ ಸೌಧದ ಹೌಸ್ ಕೀಪಿಂಗ್ ಸಿಬ್ಬಂದಿ ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿಗೆ ಮತ್ತು ಸೌಧಕ್ಕೆ ಭೇಟಿ ನೀಡುವ ಇತರರಿಗೆ ಈ ನಿಯಮ ಅನ್ವಯಿಸುತ್ತದೆ.

'ರಾಜ್ಯದಾದ್ಯಂತ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಕಾಲೇಜುಗಳ ಇತರ ಎಲ್ಲಾ ಕಚೇರಿಗಳಲ್ಲಿ ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸಲು ನಾವು ನಿರ್ದೇಶನ ನೀಡಿದ್ದೇವೆ. ಪ್ರಕರಣಗಳ ಸಂಖ್ಯೆ ಹೆಚ್ಚಳದ ಆಧಾರದ ಮೇಲೆ ಸಾರ್ವಜನಿಕರಿಗೂ ದಂಡ ವಿಧಿಸುತ್ತೇವೆ' ಎಂದರು. ತಾಂತ್ರಿಕ ಸಲಹಾ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ, ಜೂನ್‌ನಲ್ಲಿ ಆರೋಗ್ಯ ಆಯುಕ್ತರು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಆರೋಗ್ಯ) ಅವರಿಗೆ ಪ್ರಸ್ತಾವನೆ ಕಳುಹಿಸಿದ್ದು, ಬಿಬಿಎಂಪಿ ವ್ಯಾಪ್ತಿ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ಮಾತ್ರ ಕಡ್ಡಾಯ ಮಾಸ್ಕ್ ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸಲು ಶಿಫಾರಸು ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಕೆಂಪುಕೋಟೆಗೆ 7,000 ಮಂದಿಗೆ ಆಹ್ವಾನ

ಭದ್ರತೆ ಹೆಚ್ಚಿಸಿದ ದೆಹಲಿ ಪೊಲೀಸರು

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಧ್ವಜಾರೋಹಣ ಮಾಡುವ ಕೆಂಪುಕೋಟೆಗೆ ಈ ಬಾರಿ 7000 ಅತಿಥಿಗಳು ಬರುವ ಸಾಧ್ಯತೆ ಇರುವುದರಿಂದ ದೆಹಲಿ ಪೊಲೀಸರು ಸರ್ಪಗಾವಲು ಹೆಚ್ಚಿಸಿದ್ದಾರೆ. ಕೆಂಪುಕೋಟೆ ಆಗಮನದ ಸ್ಥಳದಲ್ಲಿ ವಿವಿಧ



ರೀತಿಯ ಭದ್ರತಾ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ. ಮುಖ ಗುರುತಿಸುವಿಕೆ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಸೋಮವಾರ ನಡೆಯಲಿರುವ ಕಾರ್ಯಕ್ರಮಕ್ಕಾಗಿ ಸುಮಾರು 10 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಯಾವುದೇ ರೀತಿಯ ಬೆದರಿಕೆಗಳನ್ನು ಸುಲಭವಾಗಿ ಎದುರಿಸಲು ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗುತ್ತಿದ್ದು ಗಾಳಿಪಟಗಳನ್ನು ಹಿಡಿಯಲು 400 ಮಂದಿಯನ್ನು ನಿಯೋಜಿಸಲಾಗಿದೆ. ಇನ್ನು ಕಟ್ಟಡದ ಮೇಲ್ಛಾವಣಿ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕೆಂಪುಕೋಟೆಯಿಂದ ಐದು ಕಿ.ಮೀವರೆಗೆ ಗಾಳಿಪಟ ಹಾರಾಟದ ವಲಯವಲ್ಲ ಎಂದು ಘೋಷಿಸಲಾಗಿದೆ. ಡಿಆರ್‌ಡಿಒದ ಡ್ರೋಣ್ ವಿರೋಧಿ ವ್ಯವಸ್ಥೆಯನ್ನು ನಿಯೋಜಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೆಂಪುಕೋಟೆ ಸುತ್ತಲು ಹೈ ರೆಸ್ಯೂಲೆಷನ್ ಭದ್ರತಾ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು ಅಲ್ಲಿಗೆ ಬರುವವರ ಮುಖಗಳನ್ನು ಸರಿಯಾಗಿ ಗುರುತಿಸಲು ಸಾಧ್ಯವಾಗುತ್ತದೆ. ಈ ಬಾರಿ ಆಹ್ವಾನಿತರ ಸಂಖ್ಯೆ 7000ಕ್ಕೆ ಏರಿಕೆಯಾಗಿರುವುದರಿಂದ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಲಾಗಿದೆ. ಊಟದ ಬಾಕ್ಸ್, ನೀರಿನ ಬಾಟಲ್, ರಿಮೋಟ್ ಕಂಟ್ರೋಲ್ ಕಾರಿನ ಕೀಗಳು, ಸಿಗರೇಟ್ ಲೈಟರ್, ಬ್ರೀಫ್ಕೇಸ್, ▶ 8ನೇ ಪುಟಕ್ಕೆ


ಕೋರ್ಟ್ ಆವರಣದಲ್ಲೇ ಪತ್ನಿಯ ಕತ್ತು ಸೀಳಿದ ಪತಿ

● ಹೊಳೆನರಸೀಪುರದಲ್ಲಿ ಘಟನೆ ● ಚಿಕಿತ್ಸೆ ಫಲಕಾರಿಯಾಗದೆ ಪತ್ನಿ ಸಾವು ● ಆರೋಪಿಯನ್ನು ಪೊಲೀಸರಿಗೊಪ್ಪಿಸಿದ ಸಾರ್ವಜನಿಕರು

ಹಾಸನ: ಕೋರ್ಟ್ ಆವರಣದಲ್ಲೇ ಪತಿಯೇ ಪತ್ನಿಯ ಕತ್ತು ಸೀಳಿ ಕೊಲೆ ಮಾಡಲು ಯತ್ನಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಪತ್ನಿ ಆಸ್ಪತ್ರೆಯಲ್ಲೇ ಸಾವನ್ನಪ್ಪಿರುವ ಘಟನೆ ಹಾಸನ ಜಿಲ್ಲೆಯ ಹೊಳೆನರಸೀಪುರ ಪಟ್ಟಣದಲ್ಲಿ ನಡೆದಿದೆ. ಚೈತ್ರಾ (32) ಕೊಲೆಯಾದ ಮಹಿಳೆಯಾಗಿದ್ದು, ಶಿವಕುಮಾರ್ ಕೊಲೆ ಆರೋಪಿಯಾಗಿದ್ದಾನೆ. ಹೊಳೆನರಸೀಪುರ ತಾಲೂಕಿನ, ತಟ್ಟೆಕೆರೆ ಗ್ರಾಮದ ಶಿವಕುಮಾರ್ ಹಾಗೂ ಚನ್ನರಾಯಪಟ್ಟಣ ತಾಲೂಕಿನ, ನುಗ್ಗೇಹಳ್ಳಿ ಹೋಬಳಿ ಅವೇರಹಳ್ಳಿ ಗ್ರಾಮದ ಚೈತ್ರಾ ಕಳೆದ 7 ವರ್ಷದ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಎರಡು ಹೆಣ್ಣುಮಕ್ಕಳಿದ್ದು, ದಾಂಪತ್ಯ ಜೀವನದಲ್ಲಿ ಹೊಂದಾಣಿಕೆ ಇಲ್ಲದ ಕಾರಣ ಮೂರು ವರ್ಷಗಳ ಹಿಂದೆ ಶಿವಕುಮಾರ್ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದನು.

ಚೈತ್ರಾ ಜೀವನಾಂಶ ಕೋರಿ ಕೋರ್ಟ್ ಮೆಟ್ಟಿಲೇರಿದ್ದಳು. ಇಂದು ಹೊಳೆನರಸೀಪುರದ ನ್ಯಾಯಾಲಯದಲ್ಲಿ ಲೋಕ ಅದಾಲತ್ ನಡೆದಿದ್ದು, ಇಲ್ಲಿ ನ್ಯಾಯಾಧೀಶರು ದಂಪತಿ ಮನವೊಲಿಸಿ ಒಂದಾಗಿ ಬಾಳುವಂತೆ ತಿಳಿ ಹೇಳಿದ್ದರು. ನಂತರ ಇಬ್ಬರು ಪರಸ್ಪರ ಮಾತನಾಡಿಕೊಂಡು ಬರುವಂತೆ ಕಳುಹಿಸಿದ್ದರು. ಈ ವೇಳೆ ಚೈತ್ರಾ ಮಗಳನ್ನು ಶೌಚಾಲಯಕ್ಕೆ ಕರೆದುಕೊಂಡು ಹೋಗಿದ್ದಾಳೆ. ಆಕೆಯನ್ನು ಹಿಂಬಾಲಿಸಿ ಹೋದ ಶಿವಕುಮಾರ್ ಶೌಚಾಲಯದಲ್ಲೇ ಚಾಕುವಿನಿಂದ ಪತ್ನಿಯ ಕತ್ತು ಕೊಯ್ದು ಎಸ್ಕೇಪ್ ಆಗಲು ಯತ್ನಿಸಿದ್ದಾನೆ. ಚೈತ್ರಾ ಕುಸಿದು ಬಿದ್ದು ರಕ್ತಸ್ರಾವದಿಂದ ಒದ್ದಾಡುತ್ತಿದ್ದನ್ನು ಕಂಡ ವಕೀಲರು ಹಾಗೂ ಸಾರ್ವಜನಿಕರು ಕೂಡಲೇ ಆಕೆಯನ್ನು ಹೊಳೆನರಸೀಪುರ ಆಸ್ಪತ್ರೆಗೆ ದಾಖಲಿಸಿ, ತಪ್ಪಿಸಿಕೊಂಡು ಓಡುತ್ತಿದ್ದ ಶಿವಕುಮಾರ್‌ನ ಬೆನ್ನತ್ತಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಮುಂದಿನ ವರ್ಷ ಡಿಸೆಂಬರ್ ವೇಳೆಗೆ ರಾಮಮಂದಿರ ನಿರ್ಮಾಣ ಕಾರ್ಯ ಪೂರ್ಣ



ಸುಲ್ತಾನ್‌ಪುರ: ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಕಾರ್ಯ ಮುಂದಿನ ವರ್ಷ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಹೇಳಿದ್ದಾರೆ. ಶುಕ್ರವಾರ ರಕ್ಷಾ ಬಂಧನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ರೈ ಅವರು, ಮುಂದಿನ ವರ್ಷ ಡಿಸೆಂಬರ್ ವೇಳೆಗೆ ರಾಮಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ. ಆಗ ಭವ್ಯ ಮಂದಿರದಲ್ಲಿ ಜನರು ರಾಮಲಲ್ಲಾನ ದರ್ಶನ ಪಡೆಯಬಹುದು ಎಂದು ತಿಳಿಸಿದರು.

"ಸುಲ್ತಾನ್‌ಪುರ ಅಯೋಧ್ಯೆಗೆ ಸಮೀಪದಲ್ಲಿರುವುದರಿಂದ, ಮುಂದಿನ ವರ್ಷ ಡಿಸೆಂಬರ್‌ನಲ್ಲಿ ಶ್ರೀರಾಮಲಲ್ಲಾನ 'ದರ್ಶನ' ಪಡೆಯಲು ನಾನು ಇಲ್ಲಿನ ಜನರಿಗೆ ಆಹ್ವಾನ ನೀಡುತ್ತಿದ್ದೇನೆ' ಎಂದು ಅವರು ಹೇಳಿದರು.

ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದ್ದು, 2023ರ ಡಿಸೆಂಬರ್‌ನಲ್ಲಿ ಭಕ್ತಾದಿಗಳ ದರ್ಶನಕ್ಕೆ ದೇವಾಲಯ ಸಿದ್ಧವಾಗಲಿದೆ ಎಂದು ರೈ ತಿಳಿಸಿದ್ದಾರೆ. ನಿರ್ಮಾಣ ಕಾರ್ಯದಲ್ಲಿ ಕಬ್ಬಿಣವನ್ನು ಬಳಸುತ್ತಿಲ್ಲ ಎಂದು ಪ್ರತಿಪಾದಿಸಿದ ರೈ, ದೇವಾಲಯದ ವಿನ್ಯಾಸವು ಜನರನ್ನು ಆಶ್ಚರ್ಯಚಕಿತರನ್ನಾಗಿಸುವಂತಿದೆ ಎಂದಿದ್ದಾರೆ.

ಮೈಸೂರಲ್ಲಿ ಪೊಲೀಸರಿಂದ ಸಂಕಲ್ಪ ಯಾತ್ರೆ

ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದೇಶ ಪ್ರಚಾರ



ಮೈಸೂರು, ಆ. 13(ಆರ್‌ಕೆ)– ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೈಸೂರಲ್ಲಿ ಇಂದು ಸಂಕಲ್ಪ ಯಾತ್ರೆ ನಡೆಸುವ ಮೂಲಕ ನಾಗರಿಕರಿಗೆ ಸ್ವಾತಂತ್ರ್ಯದ ಸಂದೇಶ ಸಾರಿದರು.

ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ನೇತೃತ್ವದಲ್ಲಿ ನಡೆದ ಯಾತ್ರೆಯು, ಬನ್ನಿಮಂಟಪದ ಕವಾಯತು ಮೈದಾನದಿಂದ ಆರಂಭವಾಗಿ ಹೈವೇ ಸರ್ಕಲ್, ಬಂಬೂ ಬಜಾರ್, ಸರ್ಕಾರಿ ಆಯುರ್ವೇದ ಸರ್ಕಲ್, ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ಸಾಗಿ ಅರಮನೆ ಉತ್ತರ ದ್ವಾರದ ಬಳಿ ಅಂತ್ಯಗೊಂಡಿತು.

ಈ ಸಂದರ್ಭ ಮಾತನಾಡಿದ ಪೊಲೀಸ್ ಆಯುಕ್ತರು, ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವು ಮತ್ತೊಬ್ಬರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಾರದು. ಸಂವಿಧಾನದಲ್ಲಿ ಲಭ್ಯವಿರುವ ಸ್ವಾತಂತ್ರ್ಯವನ್ನು ಅನುಭವಿಸಲು ಪೊಲೀಸರು ಅವಕಾಶ ಕಲ್ಪಿಸಿದರೆ ಮಾತ್ರ ಸ್ವಾತಂತ್ರ್ಯೋತ್ಸವಕ್ಕೆ ಅರ್ಥ ಬರುತ್ತದೆ ಎಂದರು.

ತಾರತಮ್ಯ ಮಾಡದೇ ಪೊಲೀಸರು ಸಮಾಜದ ಪ್ರತಿಯೊಬ್ಬ ನಾಗರಿಕನ ಸ್ವಾತಂತ್ರ್ಯವನ್ನು ರಕ್ಷಿಸಬೇಕು. ಖಾಕಿ ಧರಿಸಿದ ನಾವು ದಿನದ 24 ಗಂಟೆ ಹಾಗೂ ವರ್ಷದ 365 ದಿನವೂ ಜನರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕಾಪಾಡಬೇಕೆಂದು ಸಲಹೆ ನೀಡಿದ ಡಾ. ಚಂದ್ರಗುಪ್ತ, ಈ ದೇಶದ ಎಲ್ಲಾ ಹಿರಿಯರು, ಮಹಿಳೆಯರು ಹಾಗೂ ಮಕ್ಕಳನ್ನು ರಕ್ಷಿಸಬೇಕು. ಅದೇ ನಮ್ಮ ಸಂಕಲ್ಪ ಎಂದು ನುಡಿದರು.

ಜನರ ಮೇಲೆ ದೌರ್ಜನ್ಯ, ದರ್ಪವೆಸಗಲು ನಮ್ಮ ಅಧಿಕಾರ, ಸ್ವಾತಂತ್ರ್ಯವನ್ನು ಬಳಸಬಾರದು. ಸಮಾಜದ ಶಾಂತಿ, ನೆಮ್ಮದಿ ಕಾಪಾಡುವ ಜವಾಬ್ದಾರಿ ಪೊಲೀಸರ ಮೇಲಿದೆ ಎಂದ ಅವರು, ಸಮಾಜ ಘಾತುಕ ಶಕ್ತಿಗಳನ್ನು ಕಾನೂನಿನಡಿ ನಿಗ್ರಹಿಸಿ ಸ್ವಾತಂತ್ರ್ಯ ಹಾಗೂ ಶಾಂತ, ಸಮಸ್ಥಿತಿಯ ಸಮಾಜ ನಿರ್ಮಾಣ ಮಾಡುವತ್ತ ಗಮನಹರಿಸಬೇಕೆಂದು ಪೊಲೀಸರಿಗೆ ಸಲಹೆ ನೀಡಿದರು. ಬನ್ನಿಮಂಟಪದ ಕವಾಯತು ಮೈದಾನದಿಂದ ಹೈವೇ ಸರ್ಕಲ್‌ವರೆಗೆ ಮೌಂಟೆಡ್ ಕಂಪನಿ ಕುದುರೆ ಏರಿ ರಾಷ್ಟ್ರಧ್ವಜ ಹಿಡಿದು ಬಂದ ಡಾ. ಚಂದ್ರಗುಪ್ತ, ಡಿಸಿಪಿ ಪ್ರದೀಪ್ ಗುಂಟಿ ಹಾಗೂ ಇತರ ಪೊಲೀಸ್ ಅಧಿಕಾರಿಗಳು, ನಂತರ ಕಾಲ್ನಡಿಗೆಯಲ್ಲಿ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ತಲುಪಿದರು.

ಮೌಂಟೆಡ್, ಕೆಎಸ್‌ಆರ್‌ಪಿ, ಸಿಎಆರ್, ಡಿಎಆರ್, ಸಿಟಿ ಸಿವಿಲ್, ಟ್ರಾಫಿಕ್, ಮಹಿಳಾ, ಹೋಂ ಗಾರ್ಡ್, ಅಗ್ನಿಶಾಮಕ ದಳ, ಅಬಕಾರಿ, ಎನ್‌ಸಿಸಿ ನೇವಿ ಮತ್ತು ಆರ್ಮಿ ತಂಡ, ಪೊಲೀಸ್ ಪಬ್ಲಿಕ್ ಶಾಲೆ, ಸ್ಕೌಟ್ಸ್ ಅಂಡ್ ಗೈಡ್ಸ್, ವಿದ್ಯಾವರ್ಧಕ ಬಿಎಂಶ್ರೀ ಶಾಲೆ, ಭಾರತ ಸೇವಾದಳದ ಬಾಲಕ, ಬಾಲಕಿಯರ ತಂಡ, ವಿಶೇಷ ಮಕ್ಕಳ ಶಾಲಾ ಮಕ್ಕಳು ಸಂಕಲ್ಪ ಯಾತ್ರೆಯಲ್ಲಿ ಭಾಗವಹಿಸಿದ್ದರು.

ನಮ್ಮ ಪರಂಪರೆ ಪಾಲಿಸದೇ ಇನ್ನೊಬ್ಬರ ಪರಂಪರೆ ವಿರುದ್ಧ ನಾವು ಮುಗಿಬೀಳುವುದು ಯಾವ ನ್ಯಾಯ?

● ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್ ● ವಿಪ್ರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ




ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಶನಿವಾರ ವಿವಿಧ ಕ್ಷೇತ್ರಗಳ ವಿಪ್ರ ಸಾಧಕರಿಗೆ ಆದರ್ಶ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮತ್ತೊಂದು ಚಿತ್ರದಲ್ಲಿ ವಿಪ್ರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಆ.13(ಪಿಎಂ)–ವಿಪ್ರರಾದ ನಾವು ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಬಂದಿದೆ. ನಮ್ಮ ಉನ್ನತ ಪರಂಪರೆ–ಸಂಸ್ಕಾರದ ಬಗ್ಗೆ ನಮಗೇ ಗೌರವ ಇಲ್ಲವಾಗುತ್ತಿದೆ. ನಮ್ಮ ಪರಂಪರೆಯನ್ನು ನಾವು ಪಾಲಿಸದೇ ಇನ್ನೊಬ್ಬರು ತಮ್ಮ ಪರಂಪರೆ ಅನುಸರಿಸಿದರೆ ಅವರ ವಿರುದ್ಧ ನಾವು ಮುಗಿಬೀಳುತ್ತಿದ್ದೇವೆ ಎಂದು ವಿಷಾದಿಸಿದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಇದು ಯಾವ ನ್ಯಾಯ? ಎಂದು ಪ್ರಶ್ನಿಸಿದರು.

ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಆದರ್ಶ ಸೇವಾ ಸಂಘ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮತ್ತು ವಿಶ್ವ ವಿಪ್ರ ಪರಿಷತ್ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಾಮಾಜಿಕ ಜಾಲತಾಣದಲ್ಲಿ ಬಂದ ಸಂದೇಶ ನನ್ನ ಮನಸ್ಸಿಗೆ ನಾಟಿತು. ಭಗವದ್ ಶಂಕರರು ಹೇಳಿದ್ದನ್ನೇ ಅನ್ಯ ಧರ್ಮೀಯರು ನಮಗೆ ಹೇಳಿಕೊಡುತ್ತಿದ್ದಾರೆ. 'ನಮ್ಮನ್ನು ಏಕೆ ದೂಷಣೆ ಮಾಡುತ್ತಿದ್ದೀರಾ? ನಮ್ಮ ಧಾರ್ಮಿಕ ಆಚರಣೆಗಳನ್ನು ಏಕೆ ವಿರೋಧಿಸುತ್ತೀರಾ? ನೀವು ನಿಮ್ಮ ಧಾರ್ಮಿಕ ಆಚರಣೆಗಳನ್ನು ಪಾಲಿಸಿ. ನೀವು ನಿಮ್ಮ ಪರಂಪರೆ ಪಾಲಿಸುವುದು ಬಿಟ್ಟು ನಮ್ಮ ಪರಂಪರೆ ಬಗ್ಗೆಯೇ ಮಾತನಾಡುತ್ತಿರುವುದು ಸರಿಯೇ?' ಎಂದು ಅವರು ಪ್ರಶ್ನಿಸಿದ್ದಾರೆ. ಇದು ನನ್ನ ಮನಸ್ಸಿಗೆ ನಾಟಿತು. ನಮ್ಮ ಪರಂಪರೆಯನ್ನು ನಾವು ಪಾಲಿಸದೇ ಇನ್ನೊಬ್ಬರು ತಮ್ಮ ಪರಂಪರೆ ಅನುಸರಿಸಿದರೆ ಅದರ ವಿರುದ್ಧ ನಾವು ಮುಗಿಬೀಳುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

'ಸಕಲ ಶಾಸ್ತ್ರಗಳನ್ನು ತಿಳಿದವನಾಗಿದ್ದರೂ ಸಂಪ್ರದಾಯಗಳನ್ನು ತಿಳಿದು ಅದರಂತೆ ನಡೆದುಕೊಳ್ಳದವನನ್ನು ಮೂರ್ಖನಂತೆ ಕಾಣಬೇಕು' ಎಂದು ಭಗವದ್ ಶಂಕರರು ಹೇಳಿದ್ದಾರೆ. ಬಹುಶಃ ಇಂದು ನಾವೆಲ್ಲಾ ಮೂರ್ಖರಾಗಿದ್ದೇವೆ. ಸಂಪ್ರದಾಯಗಳನ್ನು ಬಿಟ್ಟಿದ್ದರೆ ಅದರಲ್ಲಿ ನಾವೇ ಮೊದಲು. ಸಂಪ್ರದಾಯ ಪಾಲಿಸಿದರೆ ಕೀಳಾಗಿ ಕಾಣುತ್ತರೇನೋ ಎಂಬ ಭಾವನೆ ಬಂದಿದೆ. ನಮ್ಮ ಪರಂಪರೆ–ಸಂಸ್ಕಾರವನ್ನು ಇನ್ನಾದರೂ ತಿರುಗಿ ನೋಡಬೇಕು. ಇಂದು ಹಣೆಗೆ ವಿಭೂತಿ, ಕುಂಕುಮ ಇಟ್ಟುಕೊಳ್ಳಲು ಹಿಂಜರಿಯುತ್ತಿದ್ದೇವೆ. ಪುರುಷರು ಪಂಚೆ ಧರಿಸಲು, ಮಹಿಳೆಯರು ಸೀರೆ ಧರಿಸಲು ಹಿಂಜರಿಯುವಂತಹ ಪರಿಸ್ಥಿತಿಯಲ್ಲಿದ್ದೇವೆ ಎಂದು ಹೇಳಿದರು.

ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಮ್ಮ ಸಮುದಾಯದ ಸ್ಥಿತಿಗತಿ ಅವಲೋಕಿಸಬೇಕಿದೆ. ಜೊತೆಗೆ ಮುಂದಿನ ದಿನಗಳಲ್ಲಿ ನಮ್ಮ ಸಮಾಜದ ಬದುಕಿನ ಬಗ್ಗೆ ಗಂಭೀರ ಚಿಂತನೆ ಅಗತ್ಯವಾಗಿದೆ. ಪ್ರಸ್ತುತ ನಮ್ಮ ಸಮುದಾಯದಲ್ಲಿ ಬಹುತೇಕರು ಈ ದೇಶದಲ್ಲಿ ನಮಗೆ ಬದುಕಿದೆಯೇ? ಎಂಬ ನಿರಾಸೆ ಭಾವನೆ ಹೊಂದಿದ್ದಾರೆ. ಬುದ್ಧಿವಂತ ಜನಾಂಗ ಎಂದು ಕರೆಸಿಕೊಳ್ಳುವ ನಾವು ಸಮುದಾಯದ ಶ್ರೇಯೋಭಿವೃದ್ಧಿಗೆ ಏನಾದರೂ ಕಾರ್ಯಕ್ರಮ ರೂಪಿಸಿದ್ದೇವೆಯೇ? ನೋಡಿದರೆ ಅದು ಆಶಾದಾಯಕವಾಗಿಲ್ಲ. ಇನ್ನು ಕಾಲ ಮಿಂಚಿಲ್ಲ. ಎಚ್ಚೆತ್ತುಕೊಂಡು, ನಮ್ಮ ಪರಂಪರೆ ಮತ್ತು ಸಂಸ್ಕಾರ ಪಾಲಿಸಿದರೆ ಮುಂದಿನ ದಿನಗಳಲ್ಲಿ ಯಾವ ಸವಾಲು ಬೇಕಾದರೂ ಎದುರಿಸಬಹುದು ಎಂದು ತಿಳಿಸಿದರು.

ನಮ್ಮನ್ನು ಬುದ್ಧಿವಂತ ಜನಾಂಗ, ಮುಂದುವರೆದವರು ಎಂದು ಪರಿಗಣಿಸಿದ್ದು, ನಾವು ಮಾಡುವುದನ್ನು ಇನ್ನಿತರೆ ಸಮಾಜದವರು ಪಾಲಿಸುತ್ತಾರೆ. ಆದರೆ ನಾವು ನಮ್ಮ ಸಂಸ್ಕಾರ, ಪರಂಪರೆ ಬಿಟ್ಟಿದ್ದೇವೆ. ಹಾಗಾಗಿ ಬೇರೆ ಎಲ್ಲರೂ ಬಿಡುತ್ತಿದ್ದಾರೆ. ಇದರಿಂದ ಸನಾತನ ಧರ್ಮಕ್ಕೆ ದೊಡ್ಡ ಆಘಾತ ಉಂಟುಮಾಡಿದಂತಾಗಿದೆ. ಸನಾತನ ಧರ್ಮ ಉಳಿಯದಿದ್ದರೆ, ನಮಗೂ ಉಳಿಗಾಲವಿಲ್ಲ. ಬೇರೆ ಸಮುದಾಯವರು ಈ ಹಿಂದಿನಷ್ಟೇ ಗೌರವ ಭಾವನೆಯನ್ನು ನಮ್ಮ ಬಗ್ಗೆ ಹೊಂದಿದ್ದಾರೆ. ಆದರೆ ನಾವು ನಾವಾಗಿಲ್ಲ. ಸಂಧ್ಯಾ ವಂದನೆ ಮಾಡುತ್ತಿಲ್ಲ. ಗಾಯಿತ್ರಿ ಮಂತ್ರ ಹೇಳುವುದಿಲ್ಲ. ಬ್ರಾಹ್ಮಣ ಎಂದರೆ ಸಮಾಜದಲ್ಲಿ ಸನಾತನ ಪರಂಪರೆ ಮತ್ತು ಸಂಸ್ಕೃತಿಯ ಪ್ರತಿಬಿಂಬ. ಅದನ್ನು ಬಿಟ್ಟು ನಾವು ಕೆಟ್ಟಿದ್ದೇವೆ ಎಂದು ಹೇಳಿದರು.

> “ ಬ್ರಾಹ್ಮಣ ಸಮುದಾಯ ತ್ರಿಮತಸ್ಥ ಪದ ಕೈಬಿಟ್ಟು ಎಲ್ಲರೂ ಬ್ರಾಹ್ಮಣರು ಎಂಬ ಮನೋಭಾವ ಬೆಳೆಸಿಕೊಳ್ಳಬೇಕು. ವಾಸ್ತವವಾಗಿ ರಾಜ್ಯದಲ್ಲಿ ನಮ್ಮ ಜನಸಂಖ್ಯೆ 42 ಲಕ್ಷ ಇದೆ. ಆದರೆ ಗಣತಿ ವೇಳೆ ಉಪಪಂಗಡದ ಹೆಸರುಗಳನ್ನು ನಮೂದಿಸಿರುವ ಕಾರಣ ಸಮುದಾಯ ಸಂಖ್ಯೆಯು ಸರ್ಕಾರದ ದಾಖಲಾತಿ ಪ್ರಕಾರ 17 ಲಕ್ಷಕ್ಕೆ ಇಳಿಕೆಯಾಗಿದೆ. ಇದರಿಂದ ಸಮುದಾಯ ಸರ್ಕಾರಿ ಸೌಲಭ್ಯದಿಂದ ವಂಚಿತವಾಗಬೇಕಾಗುತ್ತದೆ. ಇನ್ನಾದರೂ ಜಾಗೃತರಾಗಿ ಎಲ್ಲರೂ ಒಂದಾಗಬೇಕು. ಅಲ್ಲದೆ, ರಾಜಕೀಯ ಕ್ಷೇತ್ರದಲ್ಲಿ ನಮ್ಮ ಯುವಜನತೆ ತೊಡಗಿಸಿಕೊಳ್ಳಬೇಕು.
> –ಎನ್.ಕುಮಾರ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕೂ ಅಧಿಕ ಅಂಕ ಗಳಿಸಿದ ರಾಜ್ಯದ ವಿವಿಧ ಭಾಗಗಳ ವಿಪ್ರ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. 820 ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಸ್ವೀಕರಿಸಿದರು. ಅಲ್ಲದೆ, 'ಮೈಸೂರು ಮಿತ್ರ' ಅಂಕಣಕಾರ ಹಾಗೂ ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್ ಸೇರಿದಂತೆ 12 ಮಂದಿ ವಿಪ್ರ ಸಮುದಾಯದ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಆದರ್ಶ ಸೇವಾ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದಲ್ಲದೆ, ಹಲವರಿಗೆ ಆದರ್ಶ ಪ್ರತಿಭಾ ರತ್ನ, ಆದರ್ಶ ಯುವ ಪ್ರತಿಭಾ ರತ್ನ ಹಾಗೂ 'ಆದರ್ಶ ಬಾಲಪ್ರತಿಭಾ ರತ್ನ' ಪುರಸ್ಕಾರಗಳನ್ನು ನೀಡಲಾಯಿತು. ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ವಿಶ್ವ ವಿಪ್ರ ಪರಿಷತ್ ರಾಜ್ಯ ಉಪಾಧ್ಯಕ್ಷರೂ ಆದ ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಎಸ್.ಸಚ್ಚಿದಾನಂದಮೂರ್ತಿ, ಮೈಸೂರು ವಿವಿ ಪ್ರಾಚ್ಯವಸ್ತು ಸಂಶೋಧನಾಲಯದ ನಿವೃತ್ತ ಉಪನಿರ್ದೇಶಕ ಡಾ.ಟಿ.ವಿ.ಸತ್ಯನಾರಾಯಣ, ಶೃಂಗೇರಿ ಮಠದ ಸಂಸ್ಕೃತ ಕೋವಿದ ಎಸ್.ಬಾಲಾಜಿ, ಆದರ್ಶ ಸೇವಾ ಸಂಘದ ಕಾರ್ಯದರ್ಶಿ ಆರ್.ರಾಮಕೃಷ್ಣ ಮತ್ತಿತರರು ಹಾಜರಿದ್ದರು.

ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸಾ ಶಿಬಿರ

ಮೈಸೂರು, ಆ. 13– ಆಜಾದಿ ಕಾ ಅಮೃತ ಮಹೋತ್ಸವದ ಪ್ರಯುಕ್ತ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಲಲಿತಾದ್ರಿಪುರ ರಸ್ತೆ, (ಹೆಲಿಪ್ಯಾಡ್ ಹತ್ತಿರ), ಆಲನಹಳ್ಳಿ, ಮೈಸೂರು ಇಲ್ಲಿ ಗ್ಯಾಸ್ಟ್ರಿಕ್/ಅಸಿಡಿಟಿ, ಚರ್ಮರೋಗ, ಕೆಮ್ಮು, ಬೆನ್ನುನೋವು, ಸೊಂಟನೋವು, ಕುತ್ತಿಗೆನೋವು, ಮಂಡಿನೋವು, ಮಕ್ಕಳ ಹಾಗೂ ಸ್ತ್ರೀಯರ ಆರೋಗ್ಯ ತಪಾಸಣೆ, ಕಣ್ಣಿನ ಅಲರ್ಜಿ ಮತ್ತು ಅರ್ಧತಲೆನೋವು, ಬಂಜೆತನ, ಮೂತ್ರಕೋಶದ ಸೋಂಕು, ಉರಿಮೂತ್ರ, ಉಸಿರಾಟದ ತೊಂದರೆ, ಕೀಲುನೋವು, ಆರ್ಥ್ರೈಟಿಸ್, ಮಧುಮೇಹ (ಸಕ್ಕರೆ ಕಾಯಿಲೆ), ಗ್ರಹಣೀರೋಗ (ಹೊಟ್ಟೆನೋವು, ಮಲಬದ್ಧತೆ, ಆಮಶಂಕೆ...) ಮೂಲವ್ಯಾಧಿ/ಮೊಳೆರೋಗ, ಭಗಂದರ, ಫಿಶರ್, ವಾಸಿಯಾಗದ ಗಾಯಗಳು, ಮುಟ್ಟಿನಲ್ಲಿ ಏರುಪೇರು, ಸ್ಥೌಲ್ಯಹರ (ಬೊಜ್ಜು ನಿರ್ಹರಣ), ಥೈರಾಯಿಡ್ ತೊಂದರೆಗಳಿಗೆ ಉಚಿತ ಚಿಕಿತ್ಸಾ ಶಿಬಿರವನ್ನು ಆ.31ರವರೆಗೆ ಹಮ್ಮಿಕೊಳ್ಳಲಾಗಿದೆ. ಈ ಶಿಬಿರವು ಬೆಳಗ್ಗೆ 9ರಿಂದ 4 ಗಂಟೆಯವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಹೆಸರನ್ನು ನೋಂದಾಯಿಸಿಕೊಳ್ಳಲು ದೂರವಾಣಿ ಸಂಖ್ಯೆ: 9741513392, 9448584801 ಸಂಪರ್ಕಿಸುವುದು.



ಇಳಿವಯಸ್ಸಿನಲ್ಲೂ ಕುಗ್ಗದ ಮಾಜಿ ಪ್ರಧಾನಿ ದೇವೇಗೌಡರ ಉತ್ಸಾಹ...

ಪ್ರಧಾನಿ ನರೇಂದ್ರ ಮೋದಿ ಅವರ ಕರೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಕೂಡ ಸ್ಪಂದಿಸಿದ್ದಾರೆ. ಇಳಿವಯಸ್ಸಿನಲ್ಲೂ ತಮ್ಮ ನಿವಾಸದ ಮಹಡಿ ಮೇಲೆ ತ್ರಿವರ್ಣ ಧ್ವಜ ಹಾರಿಸಿದ್ದಾರೆ. ಇದಕ್ಕೆ ಎಲ್ಲೆಡೆ ಭಾರೀ ಮೆಚ್ಚುಗೆ ವ್ಯಕ್ತವಾಗಿದೆ.

ಮೈಸೂರು ರೈಲ್ವೇ ನಿಲ್ದಾಣದಲ್ಲಿ ಹರ್ ಘರ್ ತಿರಂಗ ಅಭಿಯಾನ

ಮೈಸೂರು, ಆ.13(ಆರ್‌ಕೆ)–ನೈರುತ್ಯ ರೈಲ್ವೇ ಮೈಸೂರು ವಿಭಾಗದಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಶನಿವಾರ 'ಹರ್ ಘರ್ ತಿರಂಗ' ಅಭಿಯಾನದ ಮೂಲಕ ಜನ ಜಾಗೃತಿ ಮೂಡಿಸಲಾಯಿತು.



ಮೈಸೂರು ರೈಲು ನಿಲ್ದಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರೈಲ್ವೇ ನೌಕರರು, ಅಧಿಕಾರಿಗಳಿಗೆ ತ್ರಿವರ್ಣ ಧ್ವಜಗಳನ್ನು ವಿತರಿಸಲಾಯಿತು. ರಾಷ್ಟ್ರಧ್ವಜದ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ದೇಶಭಕ್ತಿ ಮೂಡಿಸಲು ಪ್ರತೀ ಮನೆಗಳಲ್ಲಿ ಧ್ವಜ ಹಾರಿಸಬೇಕೆಂದು ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ ಅಧ್ಯಕ್ಷೆ ಪೂಜಾ ಅಗರ್‌ವಾಲ್ ಕರೆ ನೀಡಿದರು. ಮೈಸೂರು, ಹಾಸನ, ಸುಬ್ರಹ್ಮಣ್ಯ, ಅರಸೀಕೆರೆ, ಶಿವಮೊಗ್ಗ, ದಾವಣಗೆರೆ ಸೇರಿದಂತೆ ನೈರುತ್ಯ ರೈಲ್ವೇ ವಿಭಾಗದ 10 ರೈಲು ನಿಲ್ದಾಣಗಳಲ್ಲಿ 'ಆಜಾದಿ ಕಾ ಅಮೃತ ಮಹೋತ್ಸವ' ಮತ್ತು 'ಹರ್ ಘರ್ ತಿರಂಗ' ಕುರಿತ ಸೆಲ್ಫಿ ಸ್ಟ್ಯಾಂಡ್‌ಗಳನ್ನು ಸ್ಥಾಪಿಸಿರುವುದಲ್ಲದೆ, ಎಲ್ಲಾ ರೈಲುಗಳ ಇಂಜಿನ್ ಮತ್ತು ಬೋಗಿಗಳ ಮೇಲೆ 'ಹರ್ ಘರ್ ತಿರಂಗ'ದ ಭಿತ್ತಿಪತ್ರಗಳನ್ನು ಅಂಟಿಸಲಾಗಿದೆ. ಇದೇ ವೇಳೆ ಅಧಿಕಾರಿಗಳು ಹಾಗೂ ಸಿಬ್ಬಂದಿ ತ್ರಿವರ್ಣ ಧ್ವಜ ಪ್ರದರ್ಶಿಸಿ ರಾಷ್ಟ್ರಪ್ರೇಮದ ಬಗ್ಗೆ ಪ್ರಯಾಣಿಕರಿಗೆ ಅರಿವು ಮೂಡಿಸಲಾಯಿತು. ಏಕಕಾಲದಲ್ಲಿ ನೈರುತ್ಯ ವಿಭಾಗದ ಎಲ್ಲಾ ರೈಲು ನಿಲ್ದಾಣಗಳಲ್ಲಿ 'ಹರ್ ಘರ್ ತಿರಂಗ' ಕಾರ್ಯಕ್ರಮ ನಡೆಯಿತು.



ಮೈಸೂರು ವಿಜಯನಗರ 2ನೇ ಹಂತದ ಮೇಧಾವಿ ಪಾರ್ಕ್‌ನಲ್ಲಿ ವಿಜಯನಗರ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಿ, ತಿರಂಗ ಯಾತ್ರೆ ಹಮ್ಮಿಕೊಳ್ಳಲಾಯಿತು. ಈ ವೇಳೆ ಕೆಎನ್‌ಸಿ ವಿದ್ಯಾಸಂಸ್ಥೆ ಮುಖ್ಯಸ್ಥ ಕೆ.ಎನ್.ಚಂದ್ರಶೇಖರ್, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಅಧಿಕಾರಿ ಹೊನ್ನೇಗೌಡ, ನಿವೃತ್ತ ಚೀಫ್ ಇಂಜಿನಿಯರ್ ಶಂಕರ್, ಕೆಪಿಟಿಸಿಎಲ್‌ನ ಎಸ್‌ಇ ಯೋಗೇಶ್, ಕುಮಾರ್‌ಗೌಡ ಉಪಸ್ಥಿತರಿದ್ದರು.




ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆಯಿಂದ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಗಂಡುಗಲಿ ಕುಮಾರರಾಮ ಜಯಂತ್ಯೋತ್ಸವ ಆಚರಿಸಲಾಯಿತು ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಭಾಕರ್, ಮಂಜುನಾಥಪುರಂ ಮಂಜುನಾಥ್, ಚೆನ್ನನಾಯಕ, ಮಾದೇಶ್ ಇತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.13–ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ, ಮೈಸೂರು ಜಿಲ್ಲಾ ಸಮಿತಿಯಿಂದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕೂ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ಇತ್ತೀಚಿನ ಭಾವಚಿತ್ರ, ಅಂಕಪಟ್ಟಿಯನ್ನು ಆ.31ರೊಳಗೆ ಕಚೇರಿಗೆ ತಲುಪಿಸಲು ಕೋರಲಾಗಿದೆ. ಮಾಹಿತಿಗೆ 90368 25431, 9741962104 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.08.2022 ಭಾನುವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ
ತಿಥಿ: ತೃತೀಯ, ನಕ್ಷತ್ರ : ಪೂಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ದತ್ತಸ್ವಾಮಿಗೆ ತೈಲಾಭಿಷೇಕ, ಸಂಜೆ ದುರ್ಗಾದೇವಿ ಪೂಜೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ಮೈಸೂರು ಅಥ್ಲೆಟಿಕ್ಸ್ ಕ್ಲಬ್:** ಬೆಳಗ್ಗೆ 7ಕ್ಕೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಓಟ, ಉದ್ಘಾಟನೆ: ಡಿಸಿಪಿ ಪ್ರದೀಪ್ ಗುಂಟಿ, ಅಧ್ಯಕ್ಷತೆ: ಕ್ಲಬ್ ಅಧ್ಯಕ್ಷ ವಾಸು, ಬೆಳಗ್ಗೆ 9.15ಕ್ಕೆ ಬಹುಮಾನ ವಿತರಣೆ, ಉಪಸ್ಥಿತರು: ಡಿಸಿಪಿ ಗೀತಾ ಪ್ರಸನ್ನ, ಡಾ.ಮಹೇಶ್ ಶೆಣೈ, ಸ್ಥಳ: ಲಯನ್ಸ್ ಹಾಲ್ ಓವಲ್ ಮೈದಾನ ಆವರಣ.

■ **ಕೆಂಪೇಗೌಡರ ಯುವ ಸೇವಾ ಬಳಗ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಕುಂಬಾರಕೊಪ್ಪಲು, ಸಂಜೆ 4ಕ್ಕೆ.

■ **ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನ ಅಭಿವೃದ್ಧಿ ಸಮಿತಿ:** ಅರಳೀಕಟ್ಟೆ ಗಣಪತಿ ಸನ್ನಿಧಿಯಲ್ಲಿ ಪೂಜೆ, ಮಂಗಳಾರತಿ, ತೀರ್ಥ, ಪ್ರಸಾದ ವಿನಿಯೋಗ, ಸ್ಥಳ: ಬನ್ನಿಮಂಟಪ 1ನೇ ಹಂತ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಬೆಳಗ್ಗೆ 10ಕ್ಕೆ ರಾಜಬೀದಿಗಳಲ್ಲಿ ಮಹಾರಥೋತ್ಸವ, ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಶ್ರೀ ದುರ್ಗಾ ನೃತ್ಯ ಶಾಲೆ ಹಾಗೂ ಶ್ರೀ ಗೌರಿ ಸಂಗೀತ ಶಾಲೆ ಇವರಿಂದ ಶ್ರೀ ರಾಘವೇಂದ್ರ ವೈಭವ ನೃತ್ಯ ರೂಪಕ, ರಾತ್ರಿ 8ರಿಂದ ಅನಸೂಯ ಸುದರ್ಶನ್‌ರಿಂದ ದಾಸವಾಣಿ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ,

■ **ರಂಗಯಾನ ಟ್ರಸ್ಟ್ ಮೈಸೂರು:** ಭರತರಂಗ–22, ರಂಗಗೀತೆಗಳು, ನಾಟಕಗಳು, ಜಾನಪದ ನೃತ್ಯ, ನೃತ್ಯ ರೂಪಕ, ಸಂಜೆ 6ಕ್ಕೆ ಜಾನಪದ ನೃತ್ಯ, ಸಂಜೆ 6.30ಕ್ಕೆ ಸಂಚಲನ ಕಲಾವಿದರಿಂದ ಸೂಫೀ ಗೀತ ಗಾಯನ, ಸಂಜೆ 7ಕ್ಕೆ ಅಪರ್ಯಾಪ್ತ ತಂಡದಿಂದ ವಿಶ್ವಾಮಿತ್ರ ಮತ್ತು ಮೇನಕೆ ಡ್ಯಾನ್ಸ್ ಮಾಡೋದು ಏನಕೆ? Ask Mr. YNK ನಾಟಕ ಪ್ರದರ್ಶನ, ರಚನೆ: ಜೋಗಿ, ನಿರ್ದೇಶನ: ಉದಯ್ ನುಸ್ರತ್ ಸಾಬ್ರಿ, ಸ್ಥಳ: ಕಿರು ರಂಗಮಂದಿರ.

■ **ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ವಿಜಯನಗರ 1ನೇ ಹಂತದ ಮನೆ ಮನೆಗಳಲ್ಲಿ ತ್ರಿವರ್ಣ ಧ್ವಜಾರೋಹಣ.

■ **ಸಂಸ್ಕೃತ ಭಾರತಿ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನಂ :** ಉಪನಿಷತ್, ಸಂಸ್ಕೃತ ಸಪ್ತಾಹ–2022, ಡಾ. ಟಿ.ಎನ್. ಪ್ರಭಾಕರ ಅವರಿಂದ ಸಂಸ್ಕೃತಜ್ಞ ಸ್ವಾತಂತ್ರ್ಯ ಯೋಧರು ಕುರಿತು ಪ್ರವಚನ, ಸ್ಥಳ: ವಿಶ್ವಂ ಸಭಾಂಗಣ, 8ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 5.50ಕ್ಕೆ.

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಯುವ ನಿಸರ್ಗ ಚಿತ್ರ ಕಲಾವಿದರಿಂದ ವರ್ಷಧಾರೆ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ ಟ್ರಸ್ಟ್:** ಡಾ. ಆರ್. ಶಿವಕುಮಾರ್ ಅವರ ವಚನ : ವರ್ತಮಾನದ ಅನುಸಂಧಾನ ಪುಸ್ತಕ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಹಿರಿಯ ಪತ್ರಕರ್ತ ರಂಜಾನ್ ದರ್ಗಾ, ಅಧ್ಯಕ್ಷತೆ : ಕೆಪಿಟಿಸಿಎಲ್ ಮುಖ್ಯ ಇಂಜಿನಿಯರ್ ಶಂಕರ್ ದೇವನೂರು, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶಿವಕುಮಾರ ದಂಡಿನ, ಎಸ್. ನಾಗರಾಜು, ಕೃತಿ ಕುರಿತು ಮಾತನಾಡುವವರು: ಸಹಾಯಕ ಪ್ರಾಧ್ಯಾಪಕ ತೇಜ ಎಸ್.ಬಿ., ಉಪಸ್ಥಿತರು : ಕೃತಿಕಾರ ಡಾ. ಆರ್. ಶಿವಕುಮಾರ್, ಸ್ಥಳ: ಕಿರುರಂಗ ಮಂದಿರ, ಬೆಳಗ್ಗೆ 11ಕ್ಕೆ.

■ **ಶ್ರುತಿಮಂಜರಿ ಪ್ರತಿಷ್ಠಾನ :** 23ನೇ ಶ್ರಾವಣ ಯುವ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಅಂಜನ ಪಿ.ರಾವ್ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನ್‌ಕುಮಾರ್–ಪಿಟೀಲು, ವಿದ್ವಾನ್ ಕಾರ್ತಿಕ್ ರವಿಕುಮಾರ್–ಮೃದಂಗ, ವಿದ್ವಾನ್ ಸುಧೀಂದ್ರ ಆಪ್ಟೆ–ಘಟಂ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 6ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 7ರಿಂದ ಮಹಾಪಂಚಾಮೃತ ಅಭಿಷೇಕ, 8ರಿಂದ ಕನಕಾಭಿಷೇಕ, ಸರ್ವಸೇವೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 12.30ರಿಂದ ಪ್ರಸಾದ ವಿನಿಯೋಗ, ಸಂಜೆ 7ರಿಂದ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ, ಸಂಜೆ 6.30ರಿಂದ ವಿದುಷಿ ಎನ್. ಮೇಧಾ ಭಟ್ ಅವರಿಂದ ಶಾಸ್ತ್ರೀಯ ಸಂಗೀತ, ಸ್ಥಳ:ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.

■ **ಶ್ರೀ ವಿಠ್ಠಲ ಮುಖ್ಯಪ್ರಾಣ ರಾಘವೇಂದ್ರ ಸೇವಾ ಸಮಿತಿ, ಶ್ರೀ ವಿಟ್ಠಲ ಧಾಮ, ಪೇಜಾವರ ಮಠ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 6ಕ್ಕೆ ಸುಪ್ರಭಾತ, 7 ರಿಂದ ಮಹಾಪಂಚಾಮೃತ ಅಭಿಷೇಕ, 10.30 ರಿಂದ ಕನಕಾಭಿಷೇಕ, ಸರ್ವಸೇವೆ, ಪಾದಪೂಜೆ, ಸ್ಥಳ: ಶ್ರೀ ವಿಠ್ಠಲ ಮುಖ್ಯಪ್ರಾಣ ರಾಘವೇಂದ್ರ ಸೇವಾ ಸಮಿತಿ, ಜೆ.ಪಿ.ನಗರ.

■ **ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಟ್ರಸ್ಟ್ ಅಭಿನವ ಮಂತ್ರಾಲಯ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಸುಪ್ರಭಾತ, ನಿರ್ಮಾಲ್ಯ, ಭಕ್ತರಿಂದ ಪಾದಪೂಜೆ, ಫಲ ಪಂಚಾಮೃತ, ಅಷ್ಟೋತ್ತರ, ಪುಷ್ಪಾಲಂಕಾರ, ಪುಷ್ಪಾರ್ಚನೆ, ಮಹಾಮಂಗಳಾರತಿ, ಸಂಜೆ ದೀವಿಟಿಗೆ ಸೇವೆ, ವೇದಪಾರಾಯಣ, ಡೋಲೋತ್ಸವ, ದೀಪಾರಾಧನೆ, ರಜತ ಪಲ್ಲಕ್ಕಿ, ರಜತರಥ ಸೇವೆ, ಅಷ್ಟಾವಧಾನ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಟ್ರಸ್ಟ್, ಕೃಷ್ಣಮೂರ್ತಿಪುರಂ.

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 9ಕ್ಕೆ ಷಟ್ ಪ್ರಣವ ಮಹಾ ಮೃತ್ಯುಂಜಯ ಹವನ, ಬೆಳಗ್ಗೆ 11.30ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಸಂಜೆ 6ಕ್ಕೆ ಸುಪ್ರಭಾತ, 8ರಿಂದ ರಾಘವೇಂದ್ರ ಅಷ್ಟಾಕ್ಷರ ಜಪ, 9ರಿಂದ ಶ್ರೀರಾಮರಕ್ಷಾ ಸ್ತೋತ್ರ, ಹವನ, 11 ರಿಂದ ಅಷ್ಟೋತ್ತರ ಸೇವೆ, 11.30 ರಿಂದ ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ, ಸಂಜೆ 6.30 ರಿಂದ ಪಂಡಿತ್ ಕುಮಾರ್ ಮರಡೂರ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪ್ರಭುರಾವ್–ಹಾರ್ಮೋನಿಯಂ, ಭೀಮಾಶಂಕರ್ ಬಿದನೂರು–ತಬಲಾ, ಸ್ಥಳ:ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ, ಸೋಮನಾಥನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಡಾ.ಎಂ.ಎಸ್.ಆಶಾದೇವಿ, 6.20 ಗೀತಾರಾಧನ, 6.35 “ಬದುಕು ಬದಲಿಸಿದ ಶೋಧ “ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಅರಿವಿನ ಶಿಖರ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ಸಿ.ವಿಶ್ವನಾಥ್, ವ್ಯಾಖ್ಯಾನ– ಡಾ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ “ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ”, ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ “ಹರ್ನಿಯಾ” ಕುರಿತು ಡಾ.ಪಿ.ಎಸ್.ಅರವಿಂದ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಾ–ಪಂಚತಂತ್ರದ ಕಥೆ, ಪ್ರಸ್ತುತಿ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಶಾರದ ಕಲಾ ಕೇಂದ್ರದ ಮಕ್ಕಳಿಂದ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ–ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಸಂಗೀತ ರೂಪಕ ನಡೆಸಿಕೊಡುತ್ತಾರೆ ಕಲಾ ಚಾವಡಿ ಸಂಘದ ಸದಸ್ಯರು, 12.30 ದೇವರನಾಮ–ವಿ.ಭಾಗ್ಯಲಕ್ಷ್ಮಿ, 12.45 ಜನಪದಗೀತೆ–ಚಿನ್ನಮಾದು ಮತ್ತು ತಂಡ, 1.20 ಭಾವಗೀತೆ–ಎಂ.ವಿ.ಪ್ರಭಾಮಣಿ ಮಂಜುನಾಥ್, 2.35 ಚಲನಚಿತ್ರ ಧ್ವನಿ ವಾಹಿನಿ “ಮುತ್ತಿನ ಹಾರ”, 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಮಹಿರಾವಣ ಕಾಳಗ, ಪ್ರಸ್ತುತಿ– ಪುತ್ತೂರು ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿ ಕಲಾವಿದರು, 7.00 AIR Nxt ನಮ್ಮ ಕನಸಿಗೆ ನಮ್ಮದೇ ಮಾತು, 9.05 ಚಿಣ್ಣರ ಸುದ್ದಿ ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ವಾರ್ತಾ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಪ್ರಸಾದ್ ಗುಲ್ವಾನಿ – ಗಾಯನ, 11.00 ಸವಿನೆನಪು

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ:** ಬೆಳಗ್ಗೆ 10ರಿಂದ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ಲಿಖಿತ ಯೋಗದ ರಸಪ್ರಶ್ನೆ ಸ್ಪರ್ಧೆ, ಪುಸ್ತಕ ಪ್ರದರ್ಶನ ಮಾರಾಟ, ಬಹುಮಾನ ವಿತರಣೆ, ಸಾಧಕರಿಗೆ ಸನ್ಮಾನ, ಸಾನ್ನಿಧ್ಯ: ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ಭಾಷಣ: ಮೈಸೂರು ಯೋಗ ಅಸೋಸಿಯೇಷನ್ ಉಪಾಧ್ಯಕ್ಷ ಯೋಗಪ್ರಕಾಶ್, ಮುಖ್ಯ ಅತಿಥಿಗಳು: ಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಡಿ.ಜಲೇಂದ್ರಕುಮಾರ್, ವಿವೇಕಾನಂದ ಯೋಗ ಫೆಡರೇಷನ್ ಅಧ್ಯಕ್ಷ ಡಾ.ಪಿ.ಎನ್.ಗಣೇಶ್‌ಕುಮಾರ್, ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಸಂಜೆ 4ಕ್ಕೆ ಸಮಾರೋಪ ಹಾಗೂ ಬಹುಮಾನ ವಿತರಣೆ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ: ಶ್ರೀ ಪಾತಂಜಲ ಅಷ್ಟಾಂಗ ವಿನ್ಯಾಸ ಯೋಗ ಪ್ರತಿಷ್ಠಾನ ಸಂಸ್ಥಾಪಕ ಎಸ್.ವಿ.ವೆಂಕಟೇಶಯ್ಯ, ಬಹುಮಾನ ವಿತರಣೆ: ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಪಾದಪೂಜೆ, 9ಕ್ಕೆ ಪಂಚಾಮೃತ, 12.30ಕ್ಕೆ ಅಲಂಕಾರ ಬ್ರಾಹ್ಮಣ ಸೇವೆ, ಸಂಜೆ 6.45 ರಿಂದ ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಗಾಯನ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ, ವಿ.ವಿ. ಮೊಹಲ್ಲಾ.

■ **ಗೀತಾಂಜಲಿ ಸೆಂಟರ್ ಫಾರ್ ಫರ್ಮಾರ್ಮಿಂಗ್ ಆರ್ಟ್ಸ್, ಪ್ರಣವಂ ಗೀತ ಸಂಗೀತ :** ಕನ್ನಡದಲ್ಲಿ ಸಂಪೂರ್ಣ ಜನಗಣಮನ ಲೋಕಸಮರ್ಪಣೆ ಹಾಗೂ ದೇಶಭಕ್ತಿ ಗೀತ ಗಾಯನ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 5ಕ್ಕೆ

■ **ಸ್ನೇಹ ವೃಂದ ಮೈಕ್ ಪ್ರಕಾಶ್ ಪ್ರಚಾರಕರು :** ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ವಾಕಥಾನ್, ಸ್ಥಳ: ಶಕ್ತಿನಗರ ಪಾರ್ಕ್, ಬೆಳಗ್ಗೆ 10 ರಿಂದ.

■ **ಮೈಸೂರು ಚೆಸ್ ಸೆಂಟರ್, ರೋಟರಿ ಬೃಂದಾವನ ಸ್ಕೂಲ್ :** 15ರ ಒಳಗಿನ ವಯೋಮಾನದವರಿಗೆ ಚೆಸ್ ಚಾಂಪಿಯನ್‌ಶಿಪ್ ಪಂದ್ಯಾವಳಿ, ಸ್ಥಳ: ರೋಟರಿ ಬೃಂದಾವನ ಸ್ಕೂಲ್.

■ **ಕುರುಹಿನಶೆಟ್ಟಿ ಶ್ರೀರಾಮ ಸೇವಾ ಸಂಘ :** ಶ್ರೀರಾಮ ಮಂದಿರ ನವೀಕರಣ ಕಟ್ಟಡ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಜೆ. ರಾಮಶೆಟ್ಟರು, ಮುಖ್ಯ ಅತಿಥಿಗಳು : ಅಂಬಾದಾಸ್ ವಿ. ಕಾಮೂರ್ತಿ, ಕೆ.ಎಸ್. ಮಂಜುನಾಥ್, ಎನ್.ಸೌಮ್ಯ ಉಮೇಶ್‌ಕುಮಾರ್, ಸ್ಥಳ : ಕುರುಹಿನಶೆಟ್ಟಿ ಶ್ರೀರಾಮ ಸೇವಾ ಸಂಘ, ಬೆಳಗ್ಗೆ 10.30ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಕರ್ನಾಟಕ ಸಂಸ್ಕೃತಿ ಕುರಿತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

■ **ಹೆಗ್ಡೆ ಗ್ರೂಪ್ :** ಟರ್ಮರಿಕ್ ಕಿಚನ್ ಮಲ್ಟಿ ಕ್ಯುಸೆನ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಲ್. ನಾಗೇಂದ್ರ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ. ಮಂಜುನಾಥ್, ಪ್ರೊ. ಭಾಷ್ಯಂ ಸ್ವಾಮೀಜಿ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಲಾ ಗೈಡ್ ಸಂಪಾದಕ ಹೆಚ್.ಎನ್. ವೆಂಕಟೇಶ್.

■ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ :** ಕಲಾ ವೈಭವ, ಜಿಲ್ಲಾ ಮಟ್ಟದ ಗುಡಿ ಕೈಗಾರಿಕೆಗಳ ಕರಕುಶಲ, ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಬೆಳಗ್ಗೆ 10 ರಿಂದ.

■ **ಜಗದ್ಗುರು ಶ್ರೀ ಶಿವರಾತ್ರೀಶ್ವರ ಆಟೋಚಾಲಕ–ಮಾಲೀಕರ ಸಂಘ:** 75ನೇ ಸ್ವಾತಂತ್ರ್ಯ ದಿನಾಚರಣೆ, ಧ್ವಜಾರೋಹಣ : ಮಾಜಿ ಸೈನಿಕ ರವಿ, ಉದ್ಘಾಟನೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಖ್ಯ ಅತಿಥಿಗಳು : ಪತ್ರಕರ್ತೆ ರಶ್ಮಿ ಕೋಟಿ, ಬಿಜೆಪಿ ಮುಖಂಡ ಯಶಸ್ವಿನಿ ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ಕೌಟಿಲ್ಯ ರಘು, ಎಂ.ಡಿ. ಪಾರ್ಥಸಾರಥಿ, ವೆಂಕಟೇಶ್, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಚಂದ್ರು, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಮುಂಭಾಗ, ರಾಮಾನುಜ ರಸ್ತೆ, ರಾತ್ರಿ 12 ಗಂಟೆಗೆ.

■ **ರಂಗಾಯಣ :** ರಂಗಾಯಣದ ರೆಪರ್ಟರಿ ಕಲಾವಿದರಿಂದ ಹಲಗಲಿ ಸಮರ ನಾಟಕ ಪ್ರದರ್ಶನ, ನಿರ್ದೇಶನ : ಅಡ್ಡಂಡ ಸಿ. ಕಾರ್ಯಪ್ಪ, ಸಂಗೀತ : ಧನಂಜಯ ಆರ್.ಸಿ., ಸುಬ್ರಹ್ಮಣ್ಯ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆಯ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

75ನೇ ಸ್ವಾತಂತ್ರ್ಯಕ್ಕೆ ಬಾಹ್ಯಾಕಾಶದಿಂದಲೂ ಬಂತು ಶುಭ ಹಾರೈಕೆ



ವಾಷಿಂಗ್ಟನ್: ಭಾರತ ಇದೀಗ 75ನೇ ಸ್ವಾತಂತ್ರ್ಯವನ್ನು ಆಚರಿಸುತ್ತಿದ್ದು, ದೇಶ ವಿದೇಶಗಳಿಂದ ಶುಭ ಹಾರೈಕೆ ಸಂದೇಶಗಳು ಬರುತ್ತಲೇ ಇವೆ. ಆದರೆ ಈ ಒಂದು ಸಂದೇಶ ಬಾಹ್ಯಾಕಾಶದಿಂದ ಬಂದಿದೆ. ಬಾಹ್ಯಾಕಾಶ ನಿಲ್ದಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಗಗನ ಯಾತ್ರಿ ಸಮಂತಾ ಕ್ರಿಸ್ಟೋಫೋರೆಟ್ಟಿ ಭಾರತ ಆಚರಿಸುತ್ತಿರುವ ಐತಿಹಾಸಿಕ ಕ್ಷಣಕ್ಕೆ ಅಭಿನಂದಿಸಿದ್ದಾರೆ. ವೀಡಿಯೋ ಸಂದೇಶದಲ್ಲಿ ಮಾತನಾಡಿದ ಗಗನಯಾತ್ರಿ, ಭಾರತದ 75ನೇ ವರ್ಷದ ಸ್ವಾತಂತ್ರ್ಯಕ್ಕೆ ಅಭಿನಂದಿಸಲು ಸಂತೋಷವಾಗಿದೆ. ದಶಕಗಳಿಂದ ಅಂತಾರಾಷ್ಟ್ರೀಯ ಏಜೆನ್ಸಿಗಳು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಜೊತೆಗೆ ಅನೇಕ ಬಾಹ್ಯಾಕಾಶ ಮತ್ತು ವಿಜ್ಞಾನ ಕಾರ್ಯಾಚರಣೆಗಳಲ್ಲಿ ಕೆಲಸ ಮಾಡಿದೆ ಎಂದರು.

ನಾಸಾ ಮತ್ತು ಇಸ್ರೋ ಜಂಟಿಯಾಗಿ ಅಭಿವೃದ್ಧಿಪಡಿಸುತ್ತಿರುವ ಸಾರ್ ಮಿಷನ್ ಬಗ್ಗೆ ಮಾತನಾಡಿದ ಸಮಂತಾ, ಇಸ್ರೋ ಮುಂಬರುವ ಎನ್‌ಐಎಸ್‌ಎಆರ್ ಅರ್ಥ್ ಸೈನ್ಸ್ ಮಿಷನ್‌ನ ಅಭಿವೃದ್ಧಿಯಲ್ಲಿ ಕೆಲಸ ಮಾಡುತ್ತಿದೆ. ಭಾರತ ತನ್ನ ಸಹಕಾರ ನೀಡುವುದನ್ನು ಇಂದಿಗೂ ಮುಂದುವರೆಸಿದೆ. ನಮಗೆ ವಿಪತ್ತುಗಳನ್ನು ಪತ್ತೆಹಚ್ಚಲು ಹಾಗೂ ಬದಲಾಗುತ್ತಿರುವ ಹವಾಮಾನದ ಬಗ್ಗೆ ಮಾಹಿತಿ ಪಡೆಯಲು ಸಹಾಯ ಮಾಡುತ್ತಿದೆ ಎಂದರು.

ಗಗನ್‌ಯಾನ್ ಮಿಷನ್ ಬಗ್ಗೆ ಮಾತನಾಡಿ, ಇದು ಮುಂದಿನ ವರ್ಷ ತನ್ನ ಮೊದಲ ಸಿಬ್ಬಂದಿರಹಿತ ಕಕ್ಷೆಯ ಹಾರಾಟವನ್ನು ನಡೆಸುವ ಸಾಧ್ಯತೆಯಿದೆ. ನಾಸಾ, ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆ ಹಾಗೂ ಇತರ ಎಲ್ಲಾ ಏಜೆನ್ಸಿಗಳ ಪರವಾಗಿ, ಇಸ್ರೋ ಗಗನ್‌ಯಾನ್ ಮಿಷನ್‌ಗೆ ಶುಭ ಹಾರೈಸುತ್ತೇನೆ ಎಂದು ವೀಡಿಯೋದಲ್ಲಿ ತಿಳಿಸಿದ್ದಾರೆ.

ಇಸ್ರೋ ಜೊತೆಗಿನ ಪಾಲುದಾರಿಕೆಯನ್ನು ವಿಸ್ತರಿಸುವುದು ಹಾಗೂ ಬ್ರಹ್ಮಾಂಡವನ್ನು ಒಟ್ಟಾಗಿ ಅನ್ವೇಷಿಸುವುದು ನಮ್ಮೆಲ್ಲರ ಹಾಗೂ ಭವಿಷ್ಯದ ಬಾಹ್ಯಾಕಾಶ ಪರಿಶೋಧನೆಯ ಗುರಿಯಾಗಿದೆ ಎಂದು ಹೇಳಿದರು. ಭಾರತ ಗಗನ್‌ಯಾನ್ ಮಿಷನ್ ಪರೀಕ್ಷಿಸಲು ಅಂತಿಮ ಹಂತದ ತಯಾರಿಯಲ್ಲಿದೆ.

ಮೈಸೂರಲ್ಲಿ 75ನೇ ಸ್ವಾತಂತ್ರ್ಯೋತ್ಸವ ತಾಲೀಮು





ಮೈಸೂರು, ಆ. 13(ಆರ್‌ಕೆ)– ಮೈಸೂರು ನಗರ ಹಾಗೂ ಜಿಲ್ಲಾ ಪೊಲೀಸ್ ಘಟಕದಿಂದ ಮೂರು ದಿನಗಳ 75ನೇ ಸ್ವಾತಂತ್ರ್ಯೋತ್ಸವ ಕವಾಯತು ತಾಲೀಮು ಇಂದು ಅಂತ್ಯವಾಯಿತು.

ಗುರುವಾರದಿಂದ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಿತ್ಯ ಬೆಳಗ್ಗೆ ನಡೆದ ತಾಲೀಮಿನಲ್ಲಿ ಸಿಎಆರ್, ಡಿಎಆರ್, ಕೆಎಸ್‌ಆರ್‌ಪಿ, ಸಿಟಿ ಸಿವಿಲ್, ಮಹಿಳಾ, ಸಂಚಾರ ಠಾಣೆ ಪೊಲೀಸ್ ತುಕಡಿಗಳು, ಹೋಂ ಗಾರ್ಡ್, ಸೇವಾದಳ (ಬಾಲಕ, ಬಾಲಕಿಯರು), ಅಬಕಾರಿ, ಎನ್‌ಸಿಸಿಯ ಆರ್ಮಿ, ನೇವಿ ಸ್ಕೌಟ್ಸ್ ಅಂಡ್ ಗೈಡ್ಸ್, ಪೊಲೀಸ್ ಪಬ್ಲಿಕ್ ಶಾಲೆ, ವಿಶೇಷ ಚೇತನರ ಶಾಲೆ ವಿದ್ಯಾರ್ಥಿಗಳು, ಭಾರತ್ ಸೇವಾದಳ (ಬಾಲಕ, ಬಾಲಕಿಯರ ತಂಡ), ವಿದ್ಯಾವರ್ಧಕ ಬಿಎಂಶ್ರೀ ಶಾಲಾ ಮಕ್ಕಳು ಕವಾಯತು ತಾಲೀಮಿನಲ್ಲಿ ಪಾಲ್ಗೊಂಡಿದ್ದರು. ಮೊದಲ ಎರಡು ದಿನ ಸಿಎಆರ್, ಡಿಸಿಪಿ ಶಿವರಾಜ್ ನೇತೃತ್ವದಲ್ಲಿ ತಾಲೀಮು ನಡೆದರೆ, ಅಂತಿಮ ತಾಲೀಮಿನಲ್ಲಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಭಾಗವಹಿಸಿದ್ದರು. ಅಡಿಷನಲ್ ಎಸ್‌ಪಿ ನಂದಿನಿ, ಡಿಸಿಪಿಗಳಾದ ಪ್ರದೀಪ್ ಗುಂಟಿ, ಎಂ.ಎಸ್.ಗೀತಾ ಪ್ರಸನ್ನ, ಎಸಿಪಿಗಳಾದ ಎಂ.ಶಿವಶಂಕರ್, ಎಂ.ಎನ್.ಶಶಿಧರ್, ಗಂಗಾಧರಸ್ವಾಮಿ, ಪರಶುರಾಮಪ್ಪ, ನಾರಾಯಣಸ್ವಾಮಿ, ಡಿವೈಎಸ್ಪಿ ಪೂರ್ಣಚಂದ್ರ ತೇಜಸ್ವಿ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ತಾಲೀಮಿನಲ್ಲಿ ಭಾಗವಹಿಸಿದ್ದರು.

ಆ.15ರಂದು ಬೆಳಗ್ಗೆ 9 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ 75ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಧ್ವಜಾರೋಹಣ ಮಾಡುವರು. ಎನ್‌ಆರ್ ಉಪವಿಭಾಗದ ಎಸಿಪಿ ಶಿವಶಂಕರ ನೇತೃತ್ವದಲ್ಲಿ ಎನ್‌ಆರ್, ಮಂಡಿ ಠಾಣೆ ಪೊಲೀಸರು ವ್ಯಾಪಕ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದಾರೆ.

ಬಿಜೆಪಿ ಯುವ ಮೋರ್ಚಾದಿಂದ ಬೈಕ್ ರ‍್ಯಾಲಿ



ಮೈಸೂರು,ಆ.13(ಆರ್‌ಕೆ)–ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಬಿಜೆಪಿ ಯುವ ಮೋರ್ಚಾದಿಂದ ಮೈಸೂರಲ್ಲಿ ಬೈಕ್ ರ‍್ಯಾಲಿ ನಡೆಸಿ ಹರ್ ಘರ್ ತಿರಂಗಾ ಕಾರ್ಯಕ್ರಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಯಿತು.

ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಬೈಕ್ ರ‍್ಯಾಲಿಗೆ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. 500 ಬೈಕುಗಳು, 30 ಆಟೋಗಳು ಹಾಗೂ 2 ಜೀಪ್‌ಗಳಲ್ಲಿ ನಡೆದ ರ‍್ಯಾಲಿಯು ಹಾರ್ಡಿಂಜ್ ಸರ್ಕಲ್, ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್, ಜೆಎಲ್‌ಬಿ ರಸ್ತೆ, ರೈಲು ನಿಲ್ದಾಣ, ಜೆ.ಕೆ.ಮೈದಾನದ ಮೂಲಕ ಸಾಗಿ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಅಂತ್ಯಗೊಂಡಿತು. ಯುವ ಮೋರ್ಚಾ ಕಾರ್ಯಕರ್ತರು ರಾಷ್ಟ್ರ ಧ್ವಜ ಹಿಡಿದು ಮನೆ ಮನೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸುವಂತೆ ಜನ ಜಾಗೃತಿ ಮೂಡಿಸಿದರು. ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಎಸ್.ಭರತ, ಸಂತೋಷ್ ಕುಮಾರ, ಯುವ ಮೋರ್ಚಾ ಪ್ರಭಾರಿ ಟಿ.ರಮೇಶ್, ನಿತಿನ್‌ಕುಮಾರ್, ಹರ್ಷಿತ್ ಇನ್ನಿತರರಿದ್ದರು.

ಸ್ಕೌಟ್ಸ್ ಅಂಡ್ ಗೈಡ್ಸ್: ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಇಂದು ಹುಣಸೂರು ರಸ್ತೆ, ಮೆಟ್ರೋಪೋಲ್ ಸರ್ಕಲ್, ಶಿವರಾಂಪೇಟೆ ರಸ್ತೆ, ಕೆ.ಆರ್.ಸರ್ಕಲ್ ಮೂಲಕ ಕಾಲ್ನಡಿಗೆ ಜಾಥಾ ನಡೆಸಿ ಪುರಭವನದಲ್ಲಿ ಅಂತ್ಯಗೊಳಿಸಿದರು.

ಮಹಾರಾಣಿ ಕಾಲೇಜು: ಮಹಾರಾಣಿ ಕಲಾ ಮತ್ತು ವಿಜ್ಞಾನ ಕಾಲೇಜು ವಿದ್ಯಾರ್ಥಿನಿಯರೂ ಸಹ ರಾಷ್ಟ್ರ ಧ್ವಜ ಹಿಡಿದು ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಜಾಥಾ ನಡೆಸಿ ಆಜಾದಿ ಕಾ ಅಮೃತ ಮಹೋತ್ಸವದ ಬಗ್ಗೆ ಅರಿವು ಮೂಡಿಸಿದರು. ಅದೇ ರೀತಿ ಎಲ್ಲಾ ಖಾಸಗಿ ಹಾಗೂ ಸರ್ಕಾರಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಂಘ–ಸಂಸ್ಥೆಗಳ ಸದಸ್ಯರೂ ಸಹ ರಾಷ್ಟ್ರ ಧ್ವಜ ಹಿಡಿದು ಸ್ವಾತಂತ್ರ್ಯ ಅಮೃತ್ ಮಹೋತ್ಸವದ ಅರಿವು ಜಾಥಾ ನಡೆಸಿದರು.

ಐವರು ಮಾಜಿ ಸೈನಿಕರಿಗೆ ಅಭಿನಂದನೆ



75ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಕಾಯಕ ಯೋಗಿ ಸೇವಾ ಟ್ರಸ್ಟ್‌ನಿಂದ ಐವರು ನಿವೃತ್ತ ಯೋಧರಾದ ಹೆಚ್.ಎಲ್.ಮಹೇಶ್, ಆರ್.ಹನುಮಂತಪ್ಪ, ಹೆಚ್.ಕೆ.ಶಶಿಕಿರಣ್, ಧನಂಜಯ, ಮನು ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಆ.13(ಎಂಟಿವೈ)– 75ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಕಾಯಕ ಯೋಗಿ ಸೇವಾ ಟ್ರಸ್ಟ್ ವತಿಯಿಂದ ಐವರು ನಿವೃತ್ತ ಯೋಧರನ್ನು ಗೌರವಿಸಲಾಯಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಸೇನಾನಿಗಳಾದ ಹೆಚ್.ಎಲ್.ಮಹೇಶ್, ಆರ್.ಹನುಮಂತಪ್ಪ, ಹೆಚ್.ಕೆ.ಶಶಿಕಿರಣ್, ಧನಂಜಯ ಹಾಗೂ ಮನು ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ ಮಾತನಾಡಿ, ಈಗಿನ ಪೀಳಿಗೆಯವರಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಹೆಚ್ಚಿನ ಮಾಹಿತಿ ತುಂಬುವ ಅಗತ್ಯವಿದೆ. ಸ್ವಾತಂತ್ರ್ಯ ದೊರಕಿದ ನಂತರ ದೇಶದ ಸ್ವಾತಂತ್ರ್ಯ ರಕ್ಷಣೆಯಲ್ಲಿ ಹಾಲಿ ಮತ್ತು ಮಾಜಿ ಸೈನಿಕರ ಶ್ರಮ ಮಹತ್ವದ್ದಾಗಿದೆ. ಶತ್ರುರಾಷ್ಟ್ರಗಳ ಕುಟಿಲತೆಯಿಂದ ದೇಶದ ಜನರ ರಕ್ಷಣೆ ಮಾಡುವ ಜವಾಬ್ದಾರಿಯನ್ನು ಸೈನಿಕರು ನಿಭಾಯಿಸುತ್ತಿದ್ದಾರೆ. ಸೈನಿಕರ ಸೇವೆ ಬಗ್ಗೆ ಯುವ ಪೀಳಿಗೆಗೆ ಇನ್ನಷ್ಟು ಅರಿವು ಮೂಡಿಸಬೇಕು. ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸೈನಿಕರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದರು. ನಾನು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ವೇಳೆ ಆಪರೇಷನ್ ಬ್ಲೂಸ್ಟಾರ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದೆ. ಅಂದು ನಡೆದ ಕಾರ್ಯಾಚರಣೆ ಕ್ಲಿಷ್ಟಕರವೂ, ರೋಮಾಂಚನಕಾರಿಯೂ ಆಗಿತ್ತು. ಇಂದು ಸೇನೆಯ ಬಗ್ಗೆ ಟಿವಿ ಕಾರ್ಯಕ್ರಮಗಳ ವೇಳೆ ಇಂಗ್ಲಿಷ್ ಚಲನಚಿತ್ರಗಳ ತುಣುಕು ತೋರಿಸುತ್ತಾರೆ. ಆದರೆ ಆ ಕಾರ್ಯಾಚರಣೆ ವೇಳೆ ನೆಲದಲ್ಲಿ ಕಾಲಿಟ್ಟಾಗ ರಕ್ತ ಚಿಮ್ಮುತ್ತಿದ್ದುದನ್ನು ಕಂಡ ಅನುಭವ ತಮಗಿದೆ ಎಂದು ಸ್ಮರಿಸಿದರು.

ಮಠ ಮಂದಿರ, ಸಂಘ ಸಂಸ್ಥೆಗಳಿಗೆ ಸರ್ಕಾರಗಳು ಎಕರೆಗಟ್ಟಲೇ ಜಾಗ ನೀಡುತ್ತವೆ. ಆದರೆ ಸೈನಿಕರಿಗೆ ಸುಲಭವಾಗಿ ಸಿಗುವುದಿಲ್ಲ. ಮುಡಾದಂತಹ ಸಂಸ್ಥೆಗಳಿಗೆ ಖಾತೆ ಬದಲಾವಣೆ ಸೇರಿದಂತೆ ವಿವಿಧ ದಾಖಲೆ ಪಡೆಯಲು ಸೈನಿಕರು ಹೋಗಿ ಸೆಲ್ಯೂಟ್ ಹೊಡೆದರೂ ಅಧಿಕಾರಿಗಳು ಸೌಜನ್ಯಕ್ಕೂ ಕುಳಿತುಕೊಳ್ಳಿ ಎಂದು ಹೇಳುವುದಿಲ್ಲ. ಇದು ಬೇಸರದ ಸಂಗತಿ. ಹೀಗಾಗಿ ಇಂದು ಸೈನಿಕರು ಹಾಗೂ ಮಾಜಿ ಸೈನಿಕರಿಗೆ ಅನ್ಯಾಯವಾಗುವುದನ್ನು ತಪ್ಪಿಸಬೇಕು ಎಂದರು. ಕಾಯಕಯೋಗಿ ಸೇವಾ ಟ್ರಸ್ಟ್ ಅಧ್ಯಕ್ಷ ಪುಟ್ಟಸ್ವಾಮಿ, ಮನೋಹರ್, ಮುಖಂಡ ರಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಅಮೃತ ಮಹೋತ್ಸವ: ನಟರಾಜ ಪ್ರತಿಷ್ಠಾನದಿಂದ ಮಾದರಿ ದಂಡಿಯಾತ್ರೆ

ಮೈಸೂರು,ಆ.13(ಎಂಟಿವೈ)–ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಶ್ರೀ ನಟರಾಜ ಪ್ರತಿಷ್ಠಾನ ಸಂಸ್ಥೆ ಆಯೋಜಿಸಿದ್ದ 'ಮಾದರಿ ದಂಡಿಯಾತ್ರೆ'ಯಲ್ಲಿ ಸಂಸ್ಥೆಯ ನೂರಾರು ವಿದ್ಯಾರ್ಥಿನಿಯರು ತ್ರಿವರ್ಣ ಧ್ವಜ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡು, ಗಮನ ಸೆಳೆದರು.

ಮೈಸೂರಿನ ನಟರಾಜ ಶಿಕ್ಷಣ ಸಂಸ್ಥೆಯ ಆವರಣದಿಂದ ಮೆರವಣಿಗೆ ಹೊರಟ ವಿದ್ಯಾರ್ಥಿನಿಯರು ಅಗ್ರಹಾರ ವೃತ್ತ, ಮಹಾತ್ಮಗಾಂಧಿ ರಸ್ತೆ, ಸಿದ್ದಪ್ಪ ವೃತ್ತದ ಮೂಲಕ ನ್ಯಾಯಾಲಯದ ಮುಂದಿರುವ ಮಹಾತ್ಮಗಾಂಧಿ ಪುತ್ಥಳಿ ಬಳಿ ಆಗಮಿಸಿದ್ದು. ಈ ವೇಳೆ ಮಾದರಿ ದಂಡಿಯಾತ್ರೆಗೆ ನ್ಯಾಯಾಧೀಶರಾದ ಸರಸ್ವತಿ ವಿಷ್ಣು ಕೋಸಂದರ್, ಮಹಾತ್ಮ ಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಧ್ವಜ ಹಸ್ತಾಂತರಿಸುವ ಮೂಲಕ ಚಾಲನೆಯನ್ನು ನೀಡಿ, ಶುಭ ಕೋರಿದರು. 2 ಕಿ.ಮೀ. ದೂರದವರೆಗೆ ನಡೆದ ಯಾತ್ರೆಯಲ್ಲಿ ಗಾಂಧೀಜಿ ವೇಷಧಾರಿಯಾಗಿ ಗಾಂಧಿ ಮಾರ್ಗಿ ವೇಮಗಲ್ ಸೋಮಶೇಖರ್ ಪಾಲ್ಗೊಂಡು ಗಮನ ಸೆಳೆದರು.

ಬಳಿಕ ನಟರಾಜ ಕಾಲೇಜು ಆವರಣದಲ್ಲಿ ನಡೆದ ಕಾರ್ಯಕ್ರಮವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹಾಗೂ ನಾಡೋಜ ಡಾ. ವೂಡೇ ಪಿ.ಕೃಷ್ಣ ಉದ್ಘಾಟಿಸಿ ಮಾತನಾಡಿ, ಸ್ವತಂತ್ರ ಭಾರತದಲ್ಲಿ ಹುಟ್ಟಿದ ನಾವೆಲ್ಲರೂ ಧನ್ಯರು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲಾ ಮಹನೀಯರನ್ನು 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆ ಸ್ಮರಿಸುವ ಸುಸಂದರ್ಭವಿದು. ಬ್ರಿಟಿಷರು ಉಪ್ಪಿನ ಮೇಲೆ ಹಾಕಿದ ಕರವನ್ನು ವಿರೋಧಿಸಿ ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿ ಹಮ್ಮಿಕೊಂಡರು. 79 ಜನ ಶಿಸ್ತಿನ ಸಿಪಾಯಿಗಳೊಡನೆ ಗಾಂಧೀಜಿ ಕಾಲ್ನಡಿಗೆಯ ಮೂಲಕ ಬ್ರಿಟಿಷರ ದಾಸ್ಯದ ವಿರುದ್ಧ ಹೊಸ ಸಂದೇಶವನ್ನು ನೀಡಿದರು. ಇದರಿಂದ ಜನರಲ್ಲಿ ದೇಶಾಭಿಮಾನ ಹೆಚ್ಚಾಯಿತು ಎಂದರು. ಮೇಯರ್ ಸುನಂದ ಪಾಲನೇತ್ರ ಮಾತನಾಡಿ, 75ನೇ ಸ್ವಾತಂತ್ರ್ಯೋತ್ಸವ ಸಂಭ್ರಮಾಚರಣೆಯನ್ನು ಪ್ರತಿ ಮನೆಯಲ್ಲಿಯೂ ಹಬ್ಬವಾಗಿ ಆಚರಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರವಾಗಿದೆ ಎಂದರು.

• ನೂರಾರು ವಿದ್ಯಾರ್ಥಿಗಳು ಭಾಗಿ • ಗಮನ ಸೆಳೆದ ಗಾಂಧಿ ವೇಷಧಾರಿ



> “ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ವಾತಂತ್ರ್ಯ ಪಡೆಯುವುದು ಮುಖ್ಯ. ದೇಶದಲ್ಲಿ ಕಟ್ಟ ಕಡೆಯ ವ್ಯಕ್ತಿಯ ಬದುಕು ಹಸನಾದಾಗ ಮಾತ್ರ ದೇಶದ ಉಳಿವು ಸಾಧ್ಯ. ಗಾಂಧೀಜಿಯವರು ಪಾನ ನಿಷೇಧ, ಅಸ್ಪೃಶ್ಯತೆ ವಿರುದ್ಧ ಹೋರಾಡಿ ಸೌಹಾರ್ದತೆಯತ್ತ ಸಮಾಜ ನಿರ್ಮಿಸಿದರು. ಕೋಮು ಸೌಹಾರ್ದತೆಯ ಮೂಲಕ ಅಹಿಂಸಾಯುಕ್ತ ಸಮಾಜ ನಿರ್ಮಾಣದ ಕನಸನ್ನು ಕಂಡವರು. ಅಮೃತ ಮಹೋತ್ಸವದ ಈ ಸುಸಂದರ್ಭದಲ್ಲಿ ಹೆಣ್ಣು ಮಕ್ಕಳು ಎಲ್ಲಾ ರಂಗದಲ್ಲೂ ದುಡಿಯುತ್ತಿರುವುದು ವಿಶೇಷ. ಎಲ್ಲರಿಗೂ ಸಮಾನಾವಕಾಶ ಎಂಬ ಗಾಂಧೀಜಿಯವರ ಸಂದೇಶ ಇಂದು ಸಫಲವಾಗಿರುವುದನ್ನು ಈ ಮೂಲಕ ಕಾಣಬಹುದು. ನೆರೆಯ ಚೀನಾ ದೇಶದ ಶಿಕ್ಷಣ ಪಠ್ಯಕ್ರಮದಲ್ಲಿ ಗಾಂಧೀಜಿಯವರ ವಿಚಾರಧಾರೆಗಳಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳು ಗಾಂಧಿ ಅನುಯಾಯಿಗಳಿಗೆ ಪ್ರೇರಣೆಯಾಗಲು, ಗಾಂಧೀಜಿ ಕಲ್ಪನೆಯ ಸುಸ್ಥಿರ ಸಮಾಜ ನಿರ್ಮಾಣವಾಗಲು ನಾಂದಿಯಾಗಲಿ.
>
> **–ಡಾ. ವೂಡೇ ಪಿ. ಕೃಷ್ಣ**

ಮುಖ್ಯ ಅತಿಥಿಗಳಾಗಿದ್ದ ಶ್ರೀ ವೇಮಗಲ್ ಸೋಮಶೇಖರ್, ಗಾಂಧಿ ಮಾರ್ಗಿಗಳು, ಕೋಲಾರ. ಇವರು ಮಾತನಾಡಿ, ಗಾಂಧೀಜಿಯವರು ಸರಳ ಜೀವನ, ಉದಾತ್ತ ಚಿಂತನೆಗಳಿಗೆ ಮಾದರಿಯಾಗಿದ್ದರು. ಗಾಂಧೀಜಿಯವರ ಬಗ್ಗೆ ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದಿ ತಿಳಿದುಕೊಳ್ಳಬೇಕು. ಗಾಂಧೀಜಿಯವರು ಕೈಗೊಂಡ ಸತ್ಯಾಗ್ರಹಗಳು, ಅನುಸರಿಸಿದ ತತ್ವಗಳು ಮತ್ತು ಬದುಕಿನ ಸಂದೇಶಗಳನ್ನು ಯುವ ಜನಾಂಗ ಅನುಸರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಹೊಸಮಠದ ಶ್ರೀ ಚಿದಾನಂದ ಮಹಾಸ್ವಾಮಿ ವಹಿಸಿದ್ದರು. ಅಧ್ಯಕ್ಷತೆಯನ್ನು ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಶಾರದಾ ಹಾಗೂ ಇನ್ನಿತರರ ಸಿಬ್ಬಂದಿ ಪಾಲ್ಗೊಂಡಿದ್ದರು. 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕು. ಚೂಡಾಮಣಿ ಪ್ರಾರ್ಥಿಸಿ, ಡಾ. ಜಿ.ಪ್ರಸಾದಮೂರ್ತಿ ವಂದಿಸಿದರೆ ವಿ.ಡಿ.ಸುನೀತಾರಾಣಿ ನಿರೂಪಿಸಿದರು.

ಪ್ರಧಾನಿ ಮೋದಿಯಿಂದಾಗಿ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಉನ್ನತ ಸ್ಥಾನಮಾನ

ವಿದೇಶಾಂಗ ಸಚಿವ ಎಸ್.ಜೈಶಂಕರ್ ಪ್ರತಿಪಾದನೆ



ಬೆಂಗಳೂರು, ಆ. 13(ಕೆಎಂಶಿ)– ನಾಲ್ಕು ದಶಕಗಳ ಹಿಂದೆ ನಾನು ವಿದೇಶಾಂಗ ಸೇವೆಗೆ ಸೇರಿಕೊಂಡಾಗ ಜಾಗತಿಕ ಮಟ್ಟದಲ್ಲಿ ಭಾರತದ ದನಿಯೇ ಇರಲಿಲ್ಲ. ಆದರೆ ಪ್ರಧಾನಿ ಮೋದಿಯವರ ದಕ್ಷ ನಾಯಕತ್ವದಿಂದಾಗಿ ಈಗ ನಮ್ಮ ದನಿಗೆ ಅಭೂತಪೂರ್ವ ಬೆಲೆ ಬಂದಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಪ್ರತಿಪಾದಿಸಿದ್ದಾರೆ.

ಇಲ್ಲಿನ ಜೈನ್ ವಿವಿ ಆವರಣದಲ್ಲಿ ಶನಿವಾರ ನಡೆದ ಹರ್ ಘರ್ ತಿರಂಗಾ ಮತ್ತು ಸ್ವಾತಂತ್ರ್ಯದ ಅಮೃತ ಮಹೋತ್ಸವದಲ್ಲಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ವಿದೇಶಾಂಗ ನೀತಿಯು ದೇಶದ ಜನರ ದಿನನಿತ್ಯದ ಬದುಕಿನ ಮೇಲೆ ಅಪಾರ ಪರಿಣಾಮ ಬೀರುತ್ತದೆ. ಇದರಲ್ಲಿ ಭಾರತೀಯರ ಹಿತಾಸಕ್ತಿ, ರಾಷ್ಟ್ರೀಯ ಅಭಿವೃದ್ಧಿ ಮತ್ತು ಜಾಗತಿಕ ಸಮಸ್ಯೆಗಳ ಬಗ್ಗೆ ನಾವು ತಾಳುವ ನಿಲುವು ನಿರ್ಣಾಯಕ ಪಾತ್ರ ವಹಿಸುತ್ತವೆ. 8 ವರ್ಷಗಳಿಂದ ಈಚೆಗೆ ನಮ್ಮ ಯೋಗ, ಆಹಾರ, ಅಧ್ಯಾತ್ಮ, ಸಂಸ್ಕೃತಿ ಹಾಗೂ ಪರಂಪರೆಗಳಿಗೆ ವಿಶ್ವ ಮಟ್ಟದಲ್ಲಿ ಅಪಾರ ಗೌರವ ಪ್ರಾಪ್ತಿಯಾಗಿದೆ ಎಂದರು.

ಮೋದಿ ಅವರ ನಾಯಕತ್ವವು ಜಗತ್ತಿಗೇ ಗೊತ್ತಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಜಗತ್ತಿನ ನಾನಾ ದೇಶಗಳಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ 70 ಲಕ್ಷ ಭಾರತೀಯರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ವಾಪಸ್ ಕರೆತರಲಾಗಿದೆ. ಹಾಗೆಯೇ ವಿದೇಶಗಳಲ್ಲಿ ಓದುತ್ತಿರುವ 12 ಲಕ್ಷ ಭಾರತೀಯ ವಿದ್ಯಾರ್ಥಿಗಳ ಹಿತರಕ್ಷಣೆ ಮಾಡುವುದು ಸಾಧ್ಯವಾಗಿದೆ. ಪರಸ್ಪರ ಬೆಸೆದುಕೊಂಡಿರುವ ಜಗತ್ತಿನಲ್ಲಿ ವಿದೇಶಾಂಗ ಸಚಿವರು ದೇಶದ ಹೂಡಿಕೆ, ತಂತ್ರಜ್ಞಾನ, ಮಧುರ ಬಾಂಧವ್ಯ, ಸಹಭಾಗಿತ್ವ, ಸಹಕಾರ ಇತ್ಯಾದಿಗಳನ್ನು ಗಮನಕ್ಕೆ ತೆಗೆದುಕೊಂಡು ಹೆಜ್ಜೆ ಇಡಬೇಕಾದ್ದು ಬಹಳ ಮುಖ್ಯ. ಉಕ್ರೇನ್–ರಷ್ಯಾ ಯುದ್ಧದ ಸಮಯದಲ್ಲಿ ನಾವು ಕಡಿಮೆ ಬೆಲೆಗೆ ತೈಲೋತ್ಪನ್ನಗಳನ್ನು ಪಡೆದುಕೊಂಡಿರುವುದು ಇದಕ್ಕೆ ಸೂಕ್ತ ನಿದರ್ಶನವಾಗಿದೆ ಎಂದು ನುಡಿದರು. ಭಾರತದ ವಿದೇಶಾಂಗ ನೀತಿಯು ಹಿಂದೆ ರಕ್ಷಣಾತ್ಮಕವಾಗಿತ್ತು. ಈಗ ತೀಕ್ಷ್ಣವಾಗಿದ್ದು, ಕೊರೊನಾ ಕಾಲದಲ್ಲಿ ನಮ್ಮ ಶಕ್ತಿ ಸಾಮರ್ಥ್ಯ ಕಂಡು ದೊಡ್ಡ ದೇಶಗಳು ಕೂಡ ಬೆರಗಾಗಿವೆ ಎಂದು ಅವರು ಬಣ್ಣಿಸಿದರು.

ಆನ್‌ಲೈನ್‌ನಲ್ಲಿ 30.33 ಲಕ್ಷ ವಂಚನೆ


ಮಡಿಕೇರಿ,ಆ.13–ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂದು ನಂಬಿಸಿ ವ್ಯಕ್ತಿಯೋರ್ವರಿಗೆ ಆನ್‌ಲೈನ್ ಮೂಲಕ 30.33 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮಡಿಕೇರಿಯ ಕೆ.ಎನ್. ಸಂಜಯ್ ಶೆಣೈ(29) ಇನ್‌ಸ್ಟಾಗ್ರಾಂನಲ್ಲಿ eli_raymand_officails ಎಂಬ ಐಡಿಯನ್ನು ಚೆಕ್ ಮಾಡಿದಾಗ ಅವರನ್ನು ಸಂಪರ್ಕಿಸಿದ ಎಲಿಜಬೆಲ್ ರೇಮಂಡ್, ರೀತಾ, ಮಾರ್ಗನ್ ಮತ್ತು ಮಾರ್ಕ್ ನೆಲ್ಸನ್ ಎಂಬುವರು ವಾಟ್ಸಾಪ್ ಮೂಲಕ ಸಂಪರ್ಕಿಸಿ ಸೆಕ್ಯೂರ್ಡ್ ಕ್ಯಾಪಿಟಲ್ ಇನ್‌ವೆಸ್ಟ್ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಗಳಿಸಬಹುದು ಎಂದು ನಂಬಿಸಿ ವಿವಿಧ ಅಕೌಂಟ್‌ಗಳಿಗೆ 30.33 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ. ಈ ಸಂಬಂಧ ಕೊಡಗು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಮೈಸೂರಲ್ಲಿ ಹಲಗಲಿ ಬೇಡರ ಸ್ಮರಣೋತ್ಸವ



ಮೈಸೂರು,ಆ.13–ಮೈಸೂರು ನಾಯಕರ ಪಡೆಯಿಂದ ಸುವರ್ಣ ಸ್ವಾತಂತ್ರ್ಯ ಮಹೋತ್ಸವ ಅಂಗವಾಗಿ ಆ.15 ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ಜಲದರ್ಶಿನಿ ಅತಿಥಿಗೃಹದ ಆವರಣದ ಶಾಸಕರ ಕಚೇರಿ ಬಳಿ ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ಹುತಾತ್ಮರಾದ ಹಲಗಲಿ ಬೇಡರ ಸ್ಮರಣೋತ್ಸವ ಹಮ್ಮಿಕೊಂಡಿದೆ. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಹಲಗಲಿ ಬೇಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಿದ್ದಾರೆ. ಕಾರ್ಯಕ್ರಮದಲ್ಲಿ ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಆಶ್ರಯ ಸಮಿತಿ ಸದಸ್ಯ ಎಂ.ಮಹೇಶ್, ಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು ಭಾಗವಹಿಸಲಿದ್ದಾರೆ.

ಇಂದು ಶ್ರೀ ರಾಘವೇಂದ್ರ ತೀರ್ಥರ 351ನೇ ಆರಾಧನಾ ಮಹೋತ್ಸವ



ಮೈಸೂರು ಆ.13–ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್ ವತಿಯಿಂದ ಮೈಸೂರಿನ ವಿ.ವಿ. ಮೊಹಲ್ಲಾದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನದಲ್ಲಿ ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ ಏರ್ಪಡಿಸಲಾಗಿದೆ. ಆ.14 ರಂದು ಉತ್ತರಾಧನೆ, ಬೆಳಗ್ಗೆ 7ಕ್ಕೆ ಪಾದಪೂಜೆ, 9ಕ್ಕೆ ಪಂಚಾಮೃತ, 12.30ಕ್ಕೆ ಅಲಂಕಾರ ಬ್ರಾಹ್ಮಣ ಸೇವೆ, ಸಂಜೆ 5.30ರಿಂದ ಕು. ಅನಘ ಅವರಿಂದ ದೇವರನಾಮಗಳು ನಡೆಯಲಿದೆ.

ಸಂಜೆ 6.45ರಿಂದ ವಿದ್ವಾನ್ ಎನ್.ಆರ್.ಪ್ರಶಾಂತ್ ಅವರಿಂದ ಗಾಯನವಿದೆ. ಪಕ್ಕವಾದ್ಯದಲ್ಲಿ ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ತುಮಕೂರು ಬಿ.ರವಿಶಂಕರ್–ಮೃದಂಗ ಸಹಕಾರ ನೀಡಲಿದ್ದಾರೆ. ಕಾರ್ಯಕ್ರಮದ ನಂತರ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗವಿದೆ.



ಮೈಸೂರು ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳ ವೇದಿಕೆ ಸಮಾರೋಪ ಸಮಾರಂಭ ಶನಿವಾರ ನಡೆಯಿತು. ಈ ಸಂದರ್ಭದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ರಮೇಶ್ ನರಸಯ್ಯ, ವಿದ್ಯಾವರ್ಧಕ ಸಂಸ್ಥೆಯ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಕೋಶಾಧ್ಯಕ್ಷರಾದ ಶ್ರೀಶೈಲ ರಾಮಣ್ಣ, ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಎಂ.ಕಾಂ ವಿಭಾಗದ ಮುಖ್ಯಸ್ಥೆ ಪ್ರೊ. ಎಸ್.ಪೂರ್ಣಿಮಾ ಹಾಗೂ ಇತರರು ಉಪಸ್ಥಿತರಿದ್ದರು.

ನಕಲಿ ಸುದ್ದಿ ತಯಾರಿಕೆಯೇ ದೇಶದ ಬೃಹತ್ ಉದ್ಯಮ

ಸಾಹಿತ್ಯ ವಿಮರ್ಶಕ ಪ್ರೊ.ರಾಜೇಂದ್ರ ಚೆನ್ನಿ ವಿಷಾದ



ಮಾನಸಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಸಾಹಿತ್ಯ ವಿಮರ್ಶಕ, ಸಂಸ್ಕೃತಿ ಚಿಂತಕ ಪ್ರೊ.ರಾಜೇಂದ್ರ ಚೆನ್ನಿ ಮಾತನಾಡಿದರು.

ಮೈಸೂರು, ಆ.13(ಜಿಎ)–ನಮ್ಮ ದೇಶದ ಬೃಹತ್ ಉದ್ಯಮ ಎಂದರೆ ಅದು ನಕಲಿ ಸುದ್ದಿ ತಯಾರಿಕೆಯಾಗಿದೆ. ನಕಲಿ ಸುದ್ದಿಗಳನ್ನು ನಂಬುತ್ತಿದ್ದೇವೆ ಜೊತೆಗೆ ಅದನ್ನು ಹರಡುತ್ತಿದ್ದೇವೆಯೇ ಹೊರತೆ ಅದನ್ನು ನಾಗರಿಕ ವಲಯ ಪ್ರಶ್ನಿಸುತ್ತಿಲ್ಲ ಎಂದು ಸಾಹಿತ್ಯ ವಿಮರ್ಶಕ ಮತ್ತು ಸಂಸ್ಕೃತಿ ಚಿಂತಕರೂ ಆದ ಪ್ರೊ.ರಾಜೇಂದ್ರ ಚೆನ್ನಿ ಬೇಸರ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರ ವತಿಯಿಂದ ಮಾನಸಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಸ್ವಾತಂತ್ರ್ಯ ಅಮೃತ ಮಹೋತ್ಸವ ನಡಿಗೆ... ಪ್ರಬುದ್ಧ ಭಾರತದ ಕಡೆಗೆ' ಎಂಬ ರಾಜ್ಯ ಮಟ್ಟದ ಎರಡು ದಿನಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಸಂಭ್ರಮ ಪಡುವ ಅವಶ್ಯಕತೆ ಇಲ್ಲ. ಇದು ಮನಸ್ಮೃತಿಯ ಮತ್ತೊಂದು ಆವೃತ್ತಿ ಅಷ್ಟೇ ಹಾಗೂ ಚರಿತ್ರೆಯ ವಾಸ್ತವವಾಗಿದೆ. ಇವುಗಳ ಬಗ್ಗೆ ಬಹುಜನ ಸಮಾಜದವರು ಪ್ರಶ್ನಿಸಿ ಅವರ ಹಕ್ಕುಗಳನ್ನು ಕೇಳಿದರೆ ತುಳಿಯುತ್ತಿದ್ದಾರೆ. ಇದು ಸಾವಿತ್ರಿ ಬಾಪುಲೆ ಅವರ ಕಾಲದಿಂದಲೂ ನಡೆಯುತ್ತಿದ್ದು, ಕ್ರಾಂತಿಗೆ ಮುಂದಾದರೆ ಪ್ರತಿ ಕ್ರಾಂತಿಯೂ ನಿರಂತರವಾಗಿ ನಡೆದುಕೊಂಡು ಬರುತ್ತಿದ್ದು, ದುರ್ದೈವ ಎಂದರೇ ಈ ರೀತಿ ಇಂದಿಗೂ ನಡೆಯುತ್ತಿದೆ ಎಂದರು.

ನಮ್ಮ ದೇಶದಲ್ಲಿ ರಾಜಕೀಯವಾಗಿ ನಾವು ಹೇಗೆ ಇರಬೇಕು, ಯಾವ ವರ್ಗಕ್ಕೆ ಅಧಿಕಾರ ನೀಡಬೇಕು ಎಂಬುದನ್ನು ಅಂಬೇಡ್ಕರ್ ಅವರು ತಿಳಿಸಿದರೂ ಸಾಂಸ್ಕೃತಿಕ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ನಮ್ಮ ದೇಶದಲ್ಲಿ ಚುನಾವಣೆಗಳು ಹೇಗೆ ನಡೆಯುತ್ತಿವೆ ಎಂಬುದನ್ನು ನೋಡುತ್ತಿದ್ದೇವೆ. ಯಾರಿಗೆ ಎಷ್ಟು ದುಡ್ಡು ಕೊಡುತ್ತಿದ್ದಾರೆ ಎಂಬುದನ್ನು ಪ್ರತಿ ಚುನಾವಣೆಗಳಲ್ಲಿಯೂ ನೋಡುತ್ತಿದ್ದೇವೆ. ನಾವು ನಮ್ಮ ಸಂವಿಧಾನ ಸಂಸ್ಕೃತಿಯ ಜೊತೆಗೆ ಪ್ರಭುತ್ವವನ್ನು ಕಳೆದುಕೊಳ್ಳುತ್ತಿದ್ದೇವೆ ಎಂದರು.

ಅಂಬೇಡ್ಕರ್ ಅವರ ಮೇಲೆ ವೈಚಾರಿಕ ದಾಳಿಗಳನ್ನು ನಡೆಸಿದರು. ಅವರು ವಿವೇಚನಾ ಶಕ್ತಿ, ವಾಸ್ತವಗಳನ್ನು ಅರ್ಥ ಮಾಡಿಕೊಳ್ಳುವುದನ್ನು ಕಲಿತುಕೊಂಡು ನಮಗೂ ಕಲಿಸಿಕೊಟ್ಟಿದ್ದರು. ಆದರೆ, ನಾವು ಇಂದು ಬರುತ್ತಿರುವ ನಕಲಿ ಸುದ್ದಿಗಳನ್ನು ನಂಬುತ್ತಿದ್ದೇವೆ. ಜೊತೆಗೆ ದೊಡ್ಡ ಮಟ್ಟದಲ್ಲಿ ಹರಡುತ್ತಿದ್ದೇವೆ. ಇದೇ ನಮ್ಮ ದೇಶದ ಬೃಹತ್ ಉದ್ಯಮವಾಗಿ ಹೋಗಿದೆ. ಇದನ್ನು ಪ್ರಜ್ಞಾವಂತ ನಾಗರಿಕ ವಲಯ ಪ್ರಶ್ನಿಸುತ್ತಿಲ್ಲ. ಅಪ್ರಬುದ್ಧವಾಗಿ ನಡೆದುಕೊಳ್ಳುತ್ತಿದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ನಂತರ ದೇಶದಲ್ಲಿ ಇದ್ದದ್ದು, ರಾಜಕೀಯ ವರ್ಗ ಮಾತ್ರ. ಅವರೇ ಬೇರೆ ಬೇರೆ ಬಟ್ಟೆಗಳನ್ನು ಧರಿಸಿಕೊಂಡು ನಾವು ಆ ಪಕ್ಷ ಈ ಪಕ್ಷ ಎಂದು ಹೇಳುತ್ತಾರೆ. ಬೇರೆ ಬೇರೆ ಅವತಾರಗಳನ್ನು ಪಡೆದುಕೊಂಡು ಬರುತ್ತಿದ್ದಾರೆ ಅಷ್ಟೇ ಎಂದರು. ಕ್ರಾಂತಿಗೆ ವಿರುದ್ಧವಾಗಿ ಪ್ರತಿಕ್ರಾಂತಿಯ ವರ್ಗ ಇಷ್ಟು ಪ್ರಬಲವಾಗಲು ಮುಖ್ಯ ಕಾರಣ ಮೊದಲು ದೇಶಿಯ ಬಂಡವಾಳಶಾಹಿಗಳಿದ್ದರು. ಈಗ ಅಂತರರಾಷ್ಟ್ರೀಯ ಬಂಡವಾಳಶಾಹಿಗಳ ಬೆಂಬಲವಿರುವುದರಿಂದ ಅದರ ಜೊತೆ ಜೊತೆಗೆ ಯಶಸ್ವಿಯಾಗಿ ಸಾಂಸ್ಕೃತಿಕ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದಾರೆ. ಸಾಂಸ್ಕೃತಿಕ ರಾಜಕಾರಣಕ್ಕೆ ಒಂದು ಉದಾಹರಣೆ ಎಂದರೆ ಇತ್ತೀಚೆಗೆ ಪಠ್ಯಪುಸ್ತಕ ಪರಿಷ್ಕರಣೆಯಾಗಿದೆ. ಅದನ್ನು ನಮ್ಮ ನಾಗರಿಕ ವಲಯ ವಿರೋಧ ಮಾಡಲಿಲ್ಲ. ಇದು ಮುಂದಿನ 50 ವರ್ಷಕ್ಕೆ ಒಂದು ಒಂದು ತರಗತಿಯಿಂದ 10 ಮಂದಿ ಫ್ಯಾಸಿಸ್ಟ್‌ಗಳನ್ನು ಹುಟ್ಟು ಹಾಕುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್, ಪ್ರಾಧ್ಯಾಪಕರಾದ ಡಾ.ಜೆ.ಸೋಮಶೇಖರ್, ಪ್ರೊ.ಆರ್.ಇಂದಿರಾ ಇತರರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ: "ನಾರಿ ಅಂದರೆ ಅರ್ಥವೇನು?"
ಗಂಡ : "ನಾರಿ ಅಂದರೆ ಶಕ್ತಿ"
ಹೆಂಡತಿ: "ಪುರುಷ ಅಂದರೆ?"
ಗಂಡ : "ಸಹನಾಶಕ್ತಿ!"

ಮೈಸೂರು ಮಿತ್ರ

ಭಾನುವಾರ, 14 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಚಿನ್ನದ ಪ್ರತಿ ಎಳೆಯೂ ಯಾವ ರೀತಿ ಅಮೂಲ್ಯವೋ ಹಾಗೆಯೇ ಕಾಲದ ಪ್ರತಿಯೊಂದು ನಿಮಿಷವೂ ಅಮೂಲ್ಯ –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಾಗಿಲಲ್ಲಿ ಹೋಗೋದ ಬಿಟ್ರಂತೆ. ಕಿಂಡೀಲಿ ಹೋಗೋದನ್ನು ಹಿಡುಕೊಂಡ್ರಂತೆ

ನಿಮ್ಮ ಪತ್ರಗಳು

ಕುವೆಂಪು ಜ್ಞಾನ ತಾಣ ಕೇಂದ್ರದಲ್ಲಿ ಅವ್ಯವಸ್ಥೆ

ಮಾನ್ಯರೆ,

ಮೈಸೂರು ನಗರದ ವಿಶ್ವ ಮಾನವ ಜೋಡಿ ರಸ್ತೆಯ ಸಿದ್ದ ಗಂಗಾ ಶ್ರೀಗಳ ವೃತ್ತದ ಬಳಿ ಇರುವ ಕುವೆಂಪು ಜ್ಞಾನ ತಾಣ ಸೇವಾ ಕೇಂದ್ರದ ಗ್ರಂಥಾಲಯ ಅವ್ಯವಸ್ಥೆಯಿಂದ ಬಳಲುತ್ತಿದ್ದರೆ, ಕಟ್ಟಡದ ಮೇಲುಭಾಗದಲ್ಲಿರುವ ಕುವೆಂಪು ಅವರ ಪ್ರತಿಮೆ ಸ್ಥಳ ನಿರ್ಲಕ್ಷ್ಯತೆಗೀಡಾಗಿದೆ.

ದೂರ ಹಾಗೂ ಹೊರಗಿನಿಂದ ಸುಂದರ ಹಾಗೂ ಆಕರ್ಷಕವಾಗಿ ಕಾಣುವ ಜ್ಞಾನ ತಾಣದ ಗ್ರಂಥಾಲಯ, ಒಳಹೊಕ್ಕರೆ, ಅಲ್ಲಿನ ಅವ್ಯವಸ್ಥೆ ತೀವ್ರ ಮುಜುಗರ ಮತ್ತು ಬೇಸರ ಉಂಟುಮಾಡುತ್ತದೆ. ಗ್ರಂಥಾಲಯದೊಳಗಿರುವ ಪುಸ್ತಕ, ಪತ್ರಿಕೆ ಹಾಗೂ ಪೀಠೋಪಕರಣ ಮೊದಲಾದ ವಸ್ತುಗಳಿಗೆ ಅಭದ್ರತೆ ಕಾಡುತ್ತಿದೆ. ಮಳೆ, ಚಳಿ ಮತ್ತು ಗಾಳಿಯಿಂದ ಕಟ್ಟಡ ಹಾಗೂ ಪುಸ್ತಕಗಳಿಗೆ ಹಾನಿಯಾಗುತ್ತಿದೆ.

ಗ್ರಂಥಾಲಯದ ಕಟ್ಟಡದೊಳಗೆ ಅವ್ಯವಸ್ಥೆ ತಾಂಡವವಾಡುತ್ತಿದ್ದು, ಸಮರ್ಪಕ ಬೆಳಕಿನ ಕೊರತೆ ಹಾಗೂ ವಿದ್ಯುತ್ ಸಮಸ್ಯೆಯಿಂದ ಸಂಜೆ ನಂತರ ಮಬ್ಬುಕವಿದ ವಾತಾವರಣದಲ್ಲಿ ಪತ್ರಿಕೆಗಳನ್ನು ಓದಬೇಕಾದ ಹಾಗೂ ಪುಸ್ತಕಗಳ ಆಯ್ಕೆಗೆ ತಡಕಾಡಬೇಕಾದ ಸ್ಥಿತಿ ಇದೆ. ಪಾದರಕ್ಷೆಗಳನ್ನು ಹೊರಬಿಟ್ಟು ಗ್ರಂಥಾಲಯ ಪ್ರವೇಶಿಸಬೇಕೆಂಬ ನಿಯಮವನ್ನು ಸಹ ಓದುಗರ ಮೇಲೆ ಹೇರಲಾಗಿದೆ.

ಗ್ರಂಥಾಲಯ ಕಟ್ಟಡದ ಮೇಲುಭಾಗದಲ್ಲಿರುವ ಮಂಟಪದಲ್ಲಿ ವಿಶ್ವ ಮಾನವ ಕುವೆಂಪು ಅವರ ಪ್ರತಿಮೆಯೂ ನಿರ್ಲಕ್ಷ್ಯಕ್ಕೊಳಗಾಗಿದೆ. ಪ್ರತಿಮೆ ಮೇಲೆ ಪಕ್ಷಿಗಳು ಕುಳಿತು ಪಿಕ್ಕೆ ಹಾಕಿ ಹೋಗುವುದರಿಂದ ಪ್ರತಿಮೆಯ ಸೌಂದರ್ಯಕ್ಕೆ ಧಕ್ಕೆ ಉಂಟಾಗಿದೆ. ಕುವೆಂಪು ಅವರ ಹುಟ್ಟುಹಬ್ಬದ ದಿನದಂದು ಮಾತ್ರ ಶುದ್ಧಿಯಾಗುವ ಪ್ರತಿಮೆ, ನಂತರ ವರ್ಷವಿಡೀ ಯಾರಿಗೂ ಬೇಡವಾಗಿರುತ್ತದೆ. ಉದ್ಯಾನವನ ಹಾಗೂ ಪ್ರತಿಮೆ ನಿರ್ವಹಣೆ ನಗರಪಾಲಿಕೆ ಜವಾಬ್ದಾರಿಯಾಗಿದೆ.

ಕುವೆಂಪು ಅವರ ಪ್ರತಿಮೆ ಇರುವ ಮಂಟಪದೊಳಗಿನ ಮೇಲುಭಾಗದಲ್ಲಿ ಬಲೆ ಅಳವಡಿಸುವುದರ ಮೂಲಕ ಪಕ್ಷಿಗಳು ಪಿಕ್ಕೆ ಹಾಕುವುದನ್ನು ತಪ್ಪಿಸಲು ಹಾಗೂ ಕುವೆಂಪು ಜ್ಞಾನ ತಾಣಸೇವಾ ಕೇಂದ್ರದ ಗ್ರಂಥಾಲಯ ಅವ್ಯವಸ್ಥೆಗಳನ್ನು ಸರಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕಿದೆ.

–ರವಿ, ಕುವೆಂಪುನಗರ, ಮೈಸೂರು

ಪ್ರವಾಹದ ನದಿ ತೀರಗಳಲ್ಲಿ 'ಹುಚ್ಚು ಸೆಲ್ಫಿ ಸಾಹಸ' ಬೇಡ

ಮಾನ್ಯರೆ,

ಕೊಡಗು ಮತ್ತು ವೈನಾಡಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಜೀವನಾಡಿ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದ ನೀರು ಹರಿದುಬರುತ್ತಿದೆ. ಜಲಾಶಯದಿಂದ ಹೆಚ್ಚುವರಿ ನೀರು ಬಿಡಲಾಗುತ್ತಿದ್ದು, ಅದರಂತೆಯೇ, ಪುರಾಣ ಪ್ರಸಿದ್ಧ ಟಿ.ನರಸೀಪುರದ ತ್ರಿವೇಣಿ ಸಂಗಮದ ಕಾವೇರಿ–ಕಪಿಲಾ–ಸ್ಫಟಿಕ ನದಿ ಸರೋವರವನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ಹಾಗೂ ಸ್ಥಳೀಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ.

ತಿರುಮಕೂಡಲಿನ ಶ್ರೀ ಅಗಸ್ತ್ಯೇಶ್ವರ ಹಾಗೂ ಶ್ರೀ ಗುಂಜಾನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗವಿರುವ ಸೋಪಾನಕಟ್ಟೆಗಳು ನೀರಿನಿಂದ ಜಲಾವೃತವಾಗಿವೆ. ಜಿಲ್ಲಾ ಆಡಳಿತ ಹಾಗೂ ತಾಲೂಕು ಆಡಳಿತ ನದಿಯ ತೀರದಲ್ಲಿ ಜನರು ಇಳಿಯಬಾರದು ಎಂಬ ಸೂಚನೆ ನೀಡಿದ್ದರೂ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ಆದೇಶಕ್ಕೆ ಡೋಂಟ್ ಕೇರ್ ಎಂದು ನದಿಯ ಬಳಿ ಸೆಲ್ಫಿ ತೆಗೆದುಕೊಳ್ಳಲು ವಿದ್ಯಾರ್ಥಿಗಳು, ಸಾರ್ವಜನಿಕರು, ಪ್ರವಾಸಿಗರು, ಪೋಷಕರು ತಮ್ಮ ಮಕ್ಕಳ ಜೊತೆ ಆಗಮಿಸಿ ಹುಚ್ಚು ಸೆಲ್ಫಿಗೋಸ್ಕರ ನದಿಯ ತೀರದ ಬಳಿ ಬಂದು ಪ್ರಾಣದ ಜೊತೆ ಆಟವಾಡುತ್ತಿದ್ದಾರೆ. ಅಲ್ಲದೆ ಇದರಿಂದ ಸಾವು–ನೋವುಗಳು ಇಂತಹ ಪರಿಸ್ಥಿತಿಯಲ್ಲಿ ಸಂಭವಿಸಬಹುದು. ಇದನ್ನು ಅರಿತರೂ ಅರಿಯದಂತೆ ವರ್ತಿಸುತ್ತಿರುವುದು ದುರಂತವೇ ಸರಿ!. ಆದ್ದರಿಂದ ಪ್ರವಾಸಿಗರು, ಸ್ಥಳೀಯ ನಾಗರಿಕರು ಪ್ರಕೃತಿಯ ಸೊಬಗನ್ನು ದೂರದಿಂದ ನೋಡಿ ಖುಷಿಪಡುವುದು ಉತ್ತಮ. ಒಂದು ಸಣ್ಣ ಸೆಲ್ಫಿಗಾಗಿ ಹುಚ್ಚು ಸಾಹಸ ಮಾಡದೇ ಎಚ್ಚರಿಕೆಯಿಂದ ಇರಬೇಕಾದ ಅನಿವಾರ್ಯತೆ ಇದೆ. ನದಿಗೆ ಇಳಿಯುವ ಮುನ್ನ ಪೋಷಕರು ಚಿಕ್ಕ ಮಕ್ಕಳನ್ನು ಜೋಪಾನವಾಗಿ ನೋಡಿಕೊಳ್ಳುವುದು ಉತ್ತಮ. ಇಂತಹ ಸಂದರ್ಭದಲ್ಲಿ ಸ್ಥಳೀಯ ಸಂಘ ಸಂಸ್ಥೆಗಳು, ಸ್ಥಳೀಯ ಆಡಳಿತದೊಂದಿಗೆ ಕೈಜೋಡಿಸಿ ನದಿಯ ತೀರದಲ್ಲಿ ಯಾರೂ ಇಳಿಯಬಾರದು. ಇಲ್ಲಿಗೆ ಬರುವ ಪ್ರವಾಸಿಗರು ಮತ್ತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವಂತಹ ಕಾರ್ಯವಾಗಬೇಕಾಗಿದೆ.

–ಪ್ರಕಾಶ್ ಆಲಗೂಡು, ತಿ.ನರಸೀಪುರ

ಮಾನವ ಸಂಪನ್ಮೂಲ ಸದ್ಬಳಕೆ ಮಾಡಿಕೊಳ್ಳಿ

ಮಾನ್ಯರೆ,

2023ರ ವೇಳೆಗೆ ಭಾರತವು ಚೀನಾವನ್ನು ಹಿಂದಿಕ್ಕಿ ವಿಶ್ವದ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿ ಹೊರಹೊಮ್ಮಲಿದೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ. ದೇಶದಲ್ಲಿ ಜನರಿಗೆ ಮೂಲಭೂತವಾಗಿ ಶಿಕ್ಷಣ, ವೈದ್ಯಕೀಯ, ಜೀವನ ಕೌಶಲ್ಯ, ಉದ್ಯೋಗವನ್ನು ನೀಡುವುದರ ಮೂಲಕ ಜನಸಂಖ್ಯೆಯನ್ನು ದೇಶಕ್ಕೆ ಲಾಭದಾಯಕ ಸಂಪನ್ಮೂಲವನ್ನಾಗಿ ಪರಿವರ್ತಿಸಿಕೊಳ್ಳಬೇಕು. ಹೆಚ್ಚಿನ ಸಂಖ್ಯೆಯಲ್ಲಿರುವ ಯುವಜನರು ಎಲ್ಲಾ ಕ್ಷೇತ್ರಗಳಲ್ಲಿ ಸಕ್ರಿಯವಾಗುವಂತೆ ಮಾಡಿ ಯುವ ಸಂಪತ್ತನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರಗಳು ಸರಿಯಾದ ಯೋಜನೆ ರೂಪಿಸಬೇಕು. ಈ ಮೂಲಕ ಭಾರತದ ಜನಸಂಖ್ಯೆ ದೇಶಕ್ಕೆ ಶಾಪವಲ್ಲ ವರ ಎಂದು ಪ್ರಪಂಚಕ್ಕೆ ತೋರಿಸಬೇಕು.


–ಚನ್ನಕೇಶವ ಜಿ, ಕೆ. ತರೀಕೆರೆ

ಭವ್ಯ ಕಟ್ಟಡವನ್ನೇಕೆ ಹಾಳು ಮಾಡುವಿರಿ

ಮಾನ್ಯರೆ,

ಸುಮಾರು 180 ವರ್ಷಗಳ ಇತಿಹಾಸವಿರುವ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಜ ಪದವಿ ಪೂರ್ವ ಕಾಲೇಜಿನ ಕಟ್ಟಡ ದಿನೇ ದಿನೆ ಹಾಳಾಗುತ್ತಿದೆ. ಕಾಲೇಜಿನ ಬಾಲ್ಕನಿ ಮತ್ತು ತರಗತಿಗಳಲ್ಲಿ ಪಾರಿವಾಳ ಮತ್ತು ಬಾವಲಿಗಳು ಗೂಡು ಕಟ್ಟಿಕೊಂಡು ಗಲೀಜು ಮಾಡುತ್ತಿವೆ. ಕಟ್ಟಡದ ಮೇಲೆಲ್ಲಾ ಗಿಡ ಗಂಟಿಗಳು ಬೆಳೆದಿವೆ. ಮೈಸೂರಿನ ರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿಸಿದ ಹಳೆಯ ಮತ್ತು ಸುಂದರ ಕಾಲೇಜು ಇದಾಗಿದೆ. ಇದರ ಬಗ್ಗೆ ಯಾರೂ ಗಮನ ಹರಿಸುತ್ತಿಲ್ಲ. ಹೀಗೆ ಬಿಟ್ಟರೆ ಕಾಲೇಜು ಎರಡು ವರ್ಷಗಳಲ್ಲಿಯೇ ಹಾಳಾಗುವುದು ಖಚಿತ. ಸಂಬಂಧಪಟ್ಟವರು ಇದರ ಬಗ್ಗೆ ಗಮನಹರಿಸಿ ಹಾಳಾಗುವುದನ್ನು ತಡೆಯಬೇಕೆಂದು ಮನವಿ.

–ಮಹಾಂತೇಶ್ ಬಿ, ಬಳ್ಳೂರುಹುಂಡಿ, ನಂಜನಗೂಡು ತಾ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಮಾನವೀಯತೆಯಡಿಯ ನಿಕೃಷ್ಟ ಮುಖಗಳು

ನಮ್ಮ ಈ ಹಣದ ವ್ಯಾಮೋಹ ನಮ್ಮ ಮಾನವೀಯತೆಯ ಮುಖವನ್ನೇ ಮರೆಮಾಚುತ್ತಿದೆ. ಹಣವಿದ್ದರೆ ಸರ್ವಸ್ವ ಎಂದು ಭಾವಿಸುವ ಜನ ಅದನ್ನು ಗಳಿಸಲು ಎಂತಹ ದುಷ್ಟ ಮಾರ್ಗವನ್ನಾದರೂ ಹಿಡಿಯುತ್ತಾರೆ. ಹಣಕ್ಕಾಗಿ, ಆಸ್ತಿಗಾಗಿ ಮನೆಮನೆಗಳಲ್ಲಿ ಗಲಭೆಗಳಾಗುತ್ತವೆ. ತಂದೆ ಮಗನನ್ನು ಕೊಲ್ಲಿಸುವುದು, ಮಗ ತಂದೆಯನ್ನು ಇಲ್ಲವಾಗಿಸುವುದು ಇಷ್ಟರಮಟ್ಟಿಗೆ ಇದು ಬೆಳೆದುನಿಂತಿದೆ. ಒಬ್ಬರನ್ನು ಕೊಂದಾಗ ಆ ಆಸ್ತಿ ಸಂಪೂರ್ಣ ನನಗೆ ಸಿಗುತ್ತದೆ ಎಂದು ಯೋಚಿಸುವವರು ಕೊಲೆ ಮಾಡಿದ್ದಕ್ಕಾಗಿ ತಾನು ಜೀವಾವಧಿ ಶಿಕ್ಷೆ ಅನುಭವಿಸಬೇಕಾಗುತ್ತದೆ, ಹಾಗಾದರೆ ತನ್ನ ಹಾಗೂ ತಾನು ಪಡೆದ ಆಸ್ತಿ ಪರರ ಪಾಲಾಗಬಹುದು ಎಂಬುದನ್ನೂ ಯೋಚಿಸದಂತಹ ಸ್ಥಿತಿಗೆ ತಲುಪಿದ್ದೇವೆ ಎಂದರೆ ಹಣ ನಮ್ಮನ್ನು ಅದೆಷ್ಟರಮಟ್ಟಿಗೆ ತನ್ನ ತೆಕ್ಕೆಗೆ ತೆಗೆದುಕೊಂಡಿದೆ ಎಂಬ ಬಗ್ಗೆ ಆಶ್ಚರ್ಯವಾಗುತ್ತದೆ.

ಇದು ಮನೆಯೊಳಗಿನ ಕಲಹ ಎಂಬಷ್ಟಕ್ಕೆ ನಿಲ್ಲುವುದಿಲ್ಲ. ಇದರ ವ್ಯಾಪ್ತಿ ವಿಸ್ತಾರವಾದುದು. ಅನೇಕ ಕೊಲೆ ಪ್ರಕರಣಗಳಲ್ಲಿ ಅಪರಾಧಿ ಸಿಕ್ಕಿಕೊಂಡಾಗ ಹೇಳುವ ಕಥೆಯೂ ಇದೇ ಆಗಿರುತ್ತದೆ. ಅದೇನೋ ಹಣದ ದಾಹ ನಮ್ಮನ್ನು ಈ ರೀತಿ ಪ್ರೇರೇಪಿಸುತ್ತಿದೆ ಎನಿಸುತ್ತದೆ. ಹೆಚ್ಚು ಹಣ ಕೈಸೇರಿದಾಗ ನಾವು ಮೊದಲಿನಂತೆ ಸಾಧಾರಣ ಜೀವನ ನಡೆಸಲಾಗದು ಎಂಬುದು ಇವರಿಗೆ ಅರ್ಥವಾಗುವುದಿಲ್ಲ. ಇದು ದಿನ ಕಳೆದಂತೆ ಜಾಸ್ತಿಯಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ.

ಇತ್ತೀಚೆಗೆ ಕೇಳಿದ ಕಥೆ ನೆನಪಾಗುತ್ತದೆ. ಒಂದು ರಾಜ್ಯದಲ್ಲಿ ರಾಜನಿಗೆ ಕ್ಷೌರ ಮಾಡುವ ಒಬ್ಬನಿದ್ದ. ಅವನು ಪ್ರತಿದಿನ ರಾಜನಿಗೆ ಕ್ಷೌರ ಮಾಡುತ್ತಿದ್ದ. ಇದಕ್ಕೆ ರಾಜ ಎರಡು ಕಾಸು ನೀಡುತ್ತಿದ್ದ. ಈ ವ್ಯಕ್ತಿ ಅದರಿಂದ ಸಂತುಷ್ಟನಾಗಿದ್ದ. ಸದಾ ಹುರುಪಿನಿಂದ, ಹುಮ್ಮಸ್ಸಿನಿಂದ ಓಡಾಡಿಕೊಂಡು ಎಲ್ಲರಿಗೂ ಬೇಕಾದವನಾಗಿದ್ದ. ಒಮ್ಮೆ ಅವನಿಗೆ ಕನಸಿನಲ್ಲಿ ಕೆಲವು ಶ್ರೀಮಂತ ಮಹಿಳೆಯರು ಕಂಡುಬಂದು ನಾವು ನಿಮ್ಮ ಮನೆಗೆ ಬರಬಹುದೇ? ಎಂದು ಕೇಳಿದರು. ಇವನು ಒಪ್ಪಿದ. ಅವನು ಮನೆ ಸೇರುವಷ್ಟರಲ್ಲಿ ಮನೆಯಲ್ಲಿ ಏಳು ಹಂಡೆಗಳು ಕಂಡುಬಂದವು. ಅವೆಲ್ಲದರಲ್ಲೂ ಹಣ, ಒಡವೆ ತುಂಬಿತ್ತು. ಇವನಿಗೆ ಹಾಗೂ ಪತ್ನಿಗಾದ ಆನಂದ ಹೇಳತೀರದು. ಪತಿಪತ್ನಿಯರು ಕುಳಿತು ಇದರಲ್ಲಿ ಎಷ್ಟು ಹಣ, ಒಡವೆ ಇದೆ ಎಂದು ಎಣಿಸಬೇಕು ಎಂದು ನಿರ್ಧರಿಸಿ, ಒಂದೊಂದಾಗಿ ಹಂಡೆ ತೆಗೆದು ಎಣಿಸಿದರು. ಎಲ್ಲ ಹಂಡೆಗಳೂ ಭರ್ತಿಯಾಗಿದ್ದವು. ಆದರೆ ಕೊನೆ ಹಂಡೆ ತೆರೆದಾಗ ಅದು ಕಾಲು ಭಾಗದಷ್ಟು ಖಾಲಿ ಇದ್ದುದನ್ನು ಕಂಡರು. ಇದನ್ನು ಹೇಗಾದರೂ ತುಂಬಿಸಬೇಕು ಎಂದು ಯೋಚಿಸಿದರು. ಅದಕ್ಕಾಗಿ ಮೊದಲಿಗಿಂತ ಕಷ್ಟದ ಜೀವನ ನಡೆಸಿ ಹಣ ಉಳಿಸಿ ಅದಕ್ಕೆ ಹಾಕತೊಡಗಿದರು. ಆದರೆ ಅದು ಭರ್ತಿಯಾಗಲಿಲ್ಲ. ಇಬ್ಬರಿಗೂ ಅದೇ ಚಿಂತೆಯಾಯಿತು. ಆರು ಹಂಡೆ ಭರ್ತಿ ಹಣ ಇದ್ದರೂ ಇವರ ಗಮನ ಉಳಿದ ಏಳನೇ ಹಂಡೆ ತುಂಬಿಸುವುದರೆಡೆಗಿತ್ತು. ಕೊನೆಗೆ ಕ್ಷೌರಿಕ ಚಿಂತಾಕ್ರಾಂತನಾಗ ತೊಡಗಿದ. ರಾಜ ಇದನ್ನು ಗಮನಿಸಿ ಕೇಳಿದ. ಇವನು ರಾಜನು ನೀಡುತ್ತಿರುವ ಹಣ ಸಾಕಾಗುತ್ತಿಲ್ಲ ಎಂದ. ರಾಜ ಎರಡರ ಬದಲು ಮೂರು ಕಾಸು ನೀಡಲು ಪ್ರಾರಂಭಿಸಿದ. ಕೆಲವು ಸಮಯ ಕಳೆದ ನಂತರವೂ ಇವನ ವ್ಯಾಕುಲತೆ ಕಂಡು ರಾಜ ಕೇಳಿದ? ಏನಾಯಿತು? ಏನಾದರೂ ಹಣದ ಹಂಡೆಗಳು ದೊರಕಿವೆಯೇ? ಎಂದು. ಇವನಿಗೆ ಆಶ್ಚರ್ಯವಾಗಿ ಹೌದೆಂದ. ಅದರಲ್ಲಿ ಒಂದು ಹಂಡೆ ಖಾಲಿ ಇರುವುದನ್ನು ಭರ್ತಿಮಾಡಲು ಶ್ರಮಿಸುತ್ತಿರುವುದಾಗಿ ಹೇಳಿದ. ಅದಕ್ಕೆ ರಾಜ ನನಗೂ ಈ ಹಿಂದೆ ಇದೇ ರೀತಿಯ ಕನಸಾಗಿತ್ತು. ತನ್ನ ತಂದೆ ಅದಕ್ಕೆ ಕಿವಿಗೊಡಬೇಡ, ಆ ಹಂಡೆ ತುಂಬುವುದೇ ಇಲ್ಲ ಎಂದಿದ್ದರು. ಹಾಗಾಗಿ ನಾನು ಅದಕ್ಕೆ ಉತ್ತರಿಸಲಿಲ್ಲ ಎಂದ. ಆಗ ಇವನಿಗೆ ಜ್ಞಾನೋದಯವಾಯಿತು ಎಂದು ಕಥೆ ಹೇಳುತ್ತದೆ.

ನಮ್ಮಲ್ಲಿನ ಅನೇಕ ಜನರು ಈ ಗುಂಪಿಗೆ ಸೇರುತ್ತಾರೆ. ಒಂದು ಲಕ್ಷ ಹಣ ಸಂಪಾದಿಸುವವರೆಗೆ ಆರಾಮವಾಗಿರುತ್ತಾರೆ. ಒಂದು ಲಕ್ಷದ ಸಮೀಪ ಬಂದಾಗ ಹಣ ಕೂಡಿಡುವ ಧಾವಂತಕ್ಕೆ ಒಳಗಾಗುತ್ತಾರೆ. (ಕ್ರಿಕೆಟಿಗರು ನೂರು ರನ್ ಮಾಡುವ ಹಂತದಲ್ಲಿದ್ದಂತೆ) ಅದು



ಕೋಟಿಯ ಹತ್ತಿರ ಹೋದಾಗಲೂ ಅವರು ಬಸವಳಿದು ಹಣ ತುಂಬಿಸಲು ಹೆಣಗುತ್ತಾರೆ. ಇದು ಜೀವಮಾನಪೂರ್ತಿ ನಡೆಯುತ್ತದೆ. ತಾನು ಸಂಪಾದಿಸಿದ್ದನ್ನು ಅವರು ಅನುಭವಿಸಲು ಸಾಧ್ಯವೇ ಆಗುವುದಿಲ್ಲ. ಅವನ ನಂತರ ಅವನು ಕೂಡಿಟ್ಟ ಹಣ ಪರರ ಪಾಲಾಗುತ್ತದೆ ಅಥವಾ ಆತನ ಮಕ್ಕಳು ಹಣದ ಮೌಲ್ಯ ತಿಳಿಯದೆ ಅದನ್ನು ಬೇಡದ್ದಕ್ಕೆಲ್ಲಾ ಬಳಸಿ ಕೊನೆಗೆ ಖಾಯಿಲೆಗಳಿಗೆ ದಾಸರಾಗಿ, ಬೀದಿಗೆ ಬರುತ್ತಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕು.

ಈ ಮಾತುಗಳು ನೆನಪಾದದ್ದು ಇತ್ತೀಚೆಗೆ ಪತ್ರಿಕೆಯಲ್ಲಿ ಬಂದ ಒಂದು ಸುದ್ದಿಯನ್ನು ಓದಿದಾಗ. ಆ ವರದಿಯ ಶೀರ್ಷಿಕೆ "ನಿಲ್ಲದ ನರೇಗಾ ಲೂಟಿ" ಎಂದು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ "ನರೇಗಾ" ಜಾರಿಗೆ ಬಂದಿದ್ದು 2005 ರಲ್ಲಿ. ಇದು ವಿಶ್ವದಲ್ಲೇ ಅತಿ ದೊಡ್ಡ ಉದ್ಯೋಗ ಯೋಜನೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ದೇಶದ ಎಲ್ಲ ರಾಜ್ಯಗಳ ಎಲ್ಲ ವಯಸ್ಕ ಜನರಿಗೆ ಉದ್ಯೋಗ ಒದಗಿಸುವ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಯಿತು. ವಿದ್ಯಾರ್ಹತೆ ಇಲ್ಲದ, ಆದರೆ ದುಡಿಯುವ ಶಕ್ತಿ ಇದ್ದರೂ ಉದ್ಯೋಗವಿಲ್ಲದ ಜನರನ್ನು ಗುರುತಿಸಿ ಅವರಿಗೆ ಈ ಯೋಜನೆಯಡಿ ಸೌಲಭ್ಯ ಕಲ್ಪಿಸುವುದು, ಇದರಿಂದ ಅವರಿಗೆ ದಿನಗೂಲಿ ಸಿಗಬೇಕು, ಆ ಹಣದಿಂದ ಅವರ ಕುಟುಂಬ ನೆಮ್ಮದಿಯಾಗಿ ಜೀವನ ಸಾಗಿಸಬೇಕು ಎಂಬುದು ಇದರ ಮೂಲ ಆಶಯ. ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶದ ಜನರಿಗೆ ಇದು ವರದಾನವಾಯಿತು. ಇದರಡಿ ಈಗ ವ್ಯಕ್ತಿಯೊಬ್ಬನಿಗೆ ಅವನು ಕೆಲಸ ಮಾಡುವ ಪ್ರತಿದಿನಕ್ಕೆ ರೂ.309 ಕೂಲಿ ಪಾವತಿಸಲಾಗುತ್ತಿದೆ. (ಗಂಡಸು ಹೆಂಗಸು ಇಬ್ಬರಿಗೂ ಒಂದೇ ದರ). ಅದಷ್ಟೂ ಗ್ರಾಮೀಣ ರಸ್ತೆ ಮೊದಲಾದ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೊಳ್ಳಬೇಕು. ಈ ಕೆಲಸಕ್ಕೆ ಯಂತ್ರಗಳನ್ನು ಬಳಸದೆ ಮಾನವ ದಿನಗಳನ್ನು, ಮಾನವ ಶ್ರಮವನ್ನು ಬಳಸಿ ಕೆಲಸ ಮಾಡಬೇಕು ಎಂಬುದು ನಿಯಮ.

ಆದರೆ ಇದರ ಉಸ್ತುವಾರಿ ವಹಿಸಿದ ಜನರು ಇದರಲ್ಲೂ ಹಣ ಮಾಡುವ ದಂಧೆಗೆ ಇಳಿದರು. ಅಲ್ಲಿ ಭ್ರಷ್ಟಾಚಾರ ಆರಂಭವಾಯಿತು. ಇದರ ನಿಯಂತ್ರಣಕ್ಕಾಗಿ ಸರ್ಕಾರ ಹಲವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡರೂ ಇದೊಂದು ಹಣ ಮಾಡುವ ಕಾಮಧೇನುವಾಗಿ ಬಳಸಿಕೊಳ್ಳುವುದು ನಿಂತಿಲ್ಲ. ವರ್ಷದಿಂದ ವರ್ಷಕ್ಕೆ ಅವ್ಯವಹಾರದ ಪ್ರಮಾಣ ಏರುತ್ತಲೇ ಇದೆ ಎಂದು ವರದಿ ಹೇಳುತ್ತದೆ. ವರದಿಯಲ್ಲಿ ಹೇಗೆಲ್ಲಾ ಅಕ್ರಮ ನಡೆಯುತ್ತದೆ ಎಂಬುದನ್ನು ವಿವರಿಸಲಾಗಿದೆ. ಪಂಚಾಯ್ತಿಗಳಲ್ಲಿ ನಕಲಿ ಜಾಬ್‌ಕಾರ್ಡ್ ಸೃಷ್ಟಿಸಿ ಹಣ ಪಡೆಯುವುದು, ಕಾರ್ಮಿಕರನ್ನು ಬಳಸದೇ ಯಂತ್ರೋಪಕರಣಗಳ ನೆರವಿನಿಂದ ಕಾಮಗಾರಿ ನಡೆಸುವುದು, ಇದಕ್ಕಾಗಿ ಮಾನವ ದಿನಗಳನ್ನು ಬಳಸಿರುವುದಾಗಿ ತಿಳಿಸಿ ಹಲವರ ಹೆಸರಿಗೆ ಬಿಲ್ಲು ಮಾಡುವುದು. ಈಗ ಹಣ ನೇರವಾಗಿ ಕಾರ್ಮಿಕರ ಖಾತೆಗೆ ಹೋಗುವುದರಿಂದ ಅವರ ಖಾತೆಗಳಿಗೆ ಹಣ ಹೋದ ನಂತರ ಅವರ ಬಳಿ ತೆರಳಿ ಹಣ ವಸೂಲು ಮಾಡುವುದು, ಜಾಬ್‌ಕಾರ್ಡ್‌ನವರೇ ಕೆಲಸಕ್ಕೆ ಬಂದಿದ್ದರೆಂದು ಸುಳ್ಳು ದಾಖಲು ಮಾಡುವುದು, ಒಂದೇ ಕಾಮಗಾರಿಯನ್ನು ಬೇರೆಬೇರೆಯಾಗಿ ವಿಂಗಡಿಸಿ ಪ್ರತ್ಯೇಕವಾಗಿ ಹಣ ಪಡೆದಿರುವುದು, ನಡೆಯದ ಕಾಮಗಾರಿಯ ಹೆಸರಿನಲ್ಲಿ ಹಣ ಪಡೆದಿರುವುದು, ಕಾಮಗಾರಿಗೆ ಬಳಸಿದ ಉಪಕರಣಗಳಿಗೆ ಹೆಚ್ಚಿನ ದರ ನಮೂದಿಸಿ ಬಿಲ್ ಪಡೆದಿರುವುದು, ಜಮೀನಿನ ಪಹಣಿ ಮತ್ತು ಜಾಬ್‌ಕಾರ್ಡ್ ನೀಡಿದರೆ ಹಣ ಕೊಡುವುದಾಗಿ ಜನರನ್ನು ವಂಚಿಸುವುದು ಇತ್ಯಾದಿ ವಿಧಾನಗಳನ್ನು ಅನುಸರಿಸಲಾಗುತ್ತದೆ ಎಂದು ಆ ವರದಿ ಹೇಳುತ್ತದೆ. ಕೊನೆಗೆ ನಮ್ಮ ರಾಜ್ಯದಲ್ಲಿ ಇಂತಹ ಐವತ್ತೊಂಬತ್ತು ಸಾವಿರ ಪ್ರಕರಣಗಳಿದ್ದು ಒಟ್ಟು ನೂರೆಂಭತ್ತೊಂದು ಕೋಟಿ ಹಣ ಗುಳುಂ ಮಾಡಲಾಗಿದೆ. ಈ ರೀತಿ ದೇಶದಾದ್ಯಂತ ಹಣದ ದುರುಪಯೋಗವಾಗಿದೆ ಎಂದು ತಿಳಿದುಬರುತ್ತದೆ.

ನಮ್ಮ ದೇಶ ಸ್ವಾವಲಂಬಿಯಾಗಬೇಕು, ದುಡಿಯುವ ಕೈಗೆ ಕೆಲಸ ನೀಡಬೇಕು, ಜನರು ಸೋಮಾರಿಗಳಾಗದಂತೆ ಅವರ ಶ್ರಮವನ್ನು ಬಳಸಿಕೊಂಡು ಗ್ರಾಮೀಣ ಭಾಗದ ರಸ್ತೆ, ಚರಂಡಿ, ಕೆರೆಯ ಹೂಳೆತ್ತುವುದು ಇತ್ಯಾದಿ ಕೆಲಸ ಮಾಡಿಸಬೇಕು ಎಂಬುದು ಯೋಜನೆಯ ಉದ್ದೇಶ. ಇದು ಸಮರ್ಪಕವಾಗಿ ಜಾರಿಗೆ ಬಂದರೆ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ರಸ್ತೆ, ಚರಂಡಿ ನಿರ್ಮಾಣವಾಗುತ್ತದೆ. ಹಲವು ದಶಕಗಳಿಂದ ಕೆರೆಗಳಲ್ಲಿ ಹೂಳು ತುಂಬಿರುವುದರಿಂದ ಕೆರೆಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗುತ್ತಿದೆ. ಅಂತಹ ಕೆರೆಗಳ ಹೂಳೆತ್ತಿದರೆ ಹೆಚ್ಚು ನೀರು ನಿಂತು ರೈತರಿಗೆ ವರ್ಷಪೂರ್ತಿ ನೀರು ಲಭ್ಯವಾಗುತ್ತದೆ, ಗ್ರಾಮಗಳ ಜಲಸಂಪನ್ಮೂಲ ಹೆಚ್ಚಾಗಿ ಕುಡಿಯುವ ನೀರಿನ ಸಮಸ್ಯೆಯೂ ಇತ್ಯರ್ಥವಾಗುತ್ತದೆ ಎಂಬ ಘನ ಉದ್ದೇಶದಿಂದ ಈ ಯೋಜನೆ ಜಾರಿಗೆ ತರಲಾಯಿತು.

ಆದರೆ ಹಣ ಮಾಡುವ ಧಾವಂತದಲ್ಲಿ ಅಲ್ಲಿನ ಸಣ್ಣಪುಟ್ಟ ಹುಳುಕನ್ನು ಉಪಯೋಗಿಸಿಕೊಂಡು ಈ ರೀತಿ ಮೋಸದಿಂದ ಹಣ ಮಾಡಲು ಹೊರಟರೆ ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗುತ್ತದೆ ಎಂಬುದನ್ನು ಈ ಹಣ ಮಾಡುವವರು ಆಲೋಚಿಸುವುದಿಲ್ಲ. ಒಮ್ಮೆ ಹಣ ಮಾಡುವ ಹವ್ಯಾಸ ಆರಂಭವಾದರೆ ಆರಂಭದಲ್ಲಿ ಹೇಳಿದ ಕ್ಷೌರಿಕನ ಕಥೆಯಂತೆ ಇನ್ನಷ್ಟು, ಮತ್ತಷ್ಟು ಹಣಕ್ಕಾಗಿ ಹಾತೊರೆದು ಕೊನೆಗೆ ಇರುವುದನ್ನೂ ಅನುಭವಿಸಲಾಗದ ಸ್ಥಿತಿಗೆ ಅವರು ಸಿಲುಕಿಕೊಳ್ಳುತ್ತಾರೆ. ಅವರಿಗೆ ಇದರ ಅರಿವಾಗಬೇಕು.

ಇಂತಹುದೇ ಮತ್ತೊಂದು ಕಥೆ ಇದೆ. ಇಬ್ಬರು ತುಂಟ ಹುಡುಗರು ಪ್ರಾಣ ಸ್ನೇಹಿತರು, ಆದರೆ ಅವರಿಬ್ಬರಿಗೂ ಶಾಲೆಗೆ ಹೋಗಲು ಇಷ್ಟವಾಗುತ್ತಿರಲಿಲ್ಲ. ಆದರೆ ಇವರು ಶಾಲೆಗೆ ಬರದಿದ್ದರೆ ಶಿಕ್ಷಕರು ಶಿಕ್ಷಿಸುತ್ತಿದ್ದರು. ಇದರಿಂದ ಬೇಸತ್ತ ಇಬ್ಬರೂ ಒಂದು ದಿನ ಶಿಕ್ಷಕರಿಗೆ ಪಾಠ ಕಲಿಸಲು ಒಂದು ಉಪಾಯ ಹೂಡಿದರು. ಪಕ್ಕದ ಮನೆಯ ಕೊಟ್ಟಿಗೆಯಿಂದ ಮೂರು ಕುರಿ ಮರಿಗಳನ್ನು ಕದ್ದು ತಂದು ಅವುಗಳ ಬೆನ್ನಿನ ಮೇಲೆ 1,2,4 ಎಂದು ಬರೆದು ರಾತ್ರಿ ಆ ಕುರಿಗಳನ್ನು ಶಾಲೆಯ ಆವರಣದೊಳಗೆ ಬಿಟ್ಟರು. ಬೆಳಗ್ಗೆ ಶಿಕ್ಷಕರು ಬಂದಾಗ ಅವರಿಗೆ ಕುರಿಯ ವಾಸನೆ ಬಂದಿತು. ಹುಡುಕಿದಾಗ ಮೂರು ಕುರಿಗಳು ದೊರಕಿದವು. ಆದರೆ 3ನೇ ನಂಬರಿನ ಕುರಿ ಕಾಣಿಸಲಿಲ್ಲ. ಅದನ್ನು ಹುಡುಕುವ ಪ್ರಯತ್ನ ಮಾಡಿದರು. ಅದು ಸಿಗದಿದ್ದಾಗ ಶಾಲೆಗೆ ರಜೆ ಘೋಷಿಸಿ ಕುರಿಯನ್ನು ಹುಡುಕಿಕೊಂಡು ಅಲೆದರು. ಆದರೆ ಆ ನಂಬರಿನ ಕುರಿ ಇಲ್ಲದಿದ್ದುದರಿಂದ ಹುಡುಕಾಟಕ್ಕೆ ಹೊರಟಾಗ ಉಳಿದ ಮೂರು ಕುರಿಗಳು ಅಲ್ಲಿಂದ ಕಾಣೆಯಾದವು. ಕೊನೆಗೆ ಶಿಕ್ಷಕರಿಗೆ ಯಾವ ಕುರಿಯೂ ದೊರಕಲಿಲ್ಲ. ಇದು ನಮ್ಮಲ್ಲಿನ ಹಲವರ ಮನೋಭಾವ. ಇದ್ದುದನ್ನು ಬಿಟ್ಟು ಇಲ್ಲದುದನ್ನು ಹುಡುಕಿ ಕೊನೆಗೆ ಇದ್ದುದನ್ನೂ ಕಳೆದುಕೊಳ್ಳುತ್ತಾರೆ.

ನಾವು ಗಾಂಧೀಜಿ ಕಂಡ ರಾಮರಾಜ್ಯದ ಬಗ್ಗೆ ಮಾತನಾಡುತ್ತೇವೆ. ಗ್ರಾಮ ಸ್ವರಾಜ್ಯ, ಹಳ್ಳಿಗಳು ಉದ್ಧಾರವಾದರೆ ದೇಶ ಉದ್ಧಾರವಾಗುತ್ತದೆ ಎಂದೆಲ್ಲಾ ಭಾಷಣ ಮಾಡುತ್ತೇವೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ರಸ್ತೆಯಾಗಬೇಕು, ಉತ್ತಮ ಚರಂಡಿಗಳಾಗಬೇಕು, ಹಲವಾರು ದಶಕಗಳಿಂದ ಹೂಳು ತುಂಬಿರುವ ಕೆರೆಗಳ ಹೂಳು ತೆಗೆದು ರೈತರಿಗೆ ಇಡೀ ವರ್ಷ ಕೃಷಿಗಾಗಿ ನೀರು ದೊರಕುವಂತಾಗಬೇಕು ಎಂಬುದನ್ನು ಯೋಚಿಸುವುದಿಲ್ಲ. ಈ ಕಾರಣಕ್ಕಾಗಿ ರೂಪುಗೊಂಡ ನರೇಗಾ ಬಳಸಿ ಗ್ರಾಮೀಣ ಪ್ರದೇಶಗಳಿಗೆ ಅನುಕೂಲ ಮಾಡಿಕೊಡಬಹುದಾಗಿದ್ದು, ಇಲ್ಲಿ ಹಣದ ವ್ಯಾಮೋಹ ದೇಶದ್ರೋಹದ ಕೆಲಸ ಮಾಡಿಸುತ್ತದೆ. ಮೊದಲು ದೇಶದ ಬಗ್ಗೆ ನಮಗೆ ಶ್ರದ್ಧಾಭಾವನೆ ಮೂಡಬೇಕು. ಆಗಲೇ ಇಂತಹುದಕ್ಕೆ ಕಡಿವಾಣ ಹಾಕಲು ಸಾಧ್ಯ.

ಆ.22ಕ್ಕೆ ದೆಹಲಿಯಲ್ಲಿ ರೈತರ ರ‍್ಯಾಲಿ

ಮೈಸೂರು, ಆ.13(ಎಸ್‌ಬಿಡಿ)– 'ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆ–2022' ಹಾಗೂ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾಯ್ದೆ ವಿರೋಧಿಸಿ ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ದೆಹಲಿಯಲ್ಲಿ ಆ.22 ರಂದು ರೈತರ ಬೃಹತ್ ರ‍್ಯಾಲಿ ನಡೆಸುವುದಾಗಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ನೂತನ ಕಟ್ಟಡದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆ ಮೂಲಕ ಖಾಸಗೀಕರಣಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ವ್ಯವಸ್ಥೆಯನ್ನು ನಿಲ್ಲಿಸುವ ಹುನ್ನಾರ ಇದರ ಹಿಂದಿದೆ. ಈ ಕಾಯ್ದೆಗಳು ರೈತರ ಮರಣ ಶಾಸನವಾಗಲಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಮೊಸರು, ಮಜ್ಜಿಗೆ, ಹಪ್ಪಳ, ಬೆಲ್ಲ, ಕೃಷಿ ಉಪಕರಣ, ಹನಿ ನೀರಾವರಿ ಉಪಕರಣ, ರಸಗೊಬ್ಬರ, ಕೀಟನಾಶಕಗಳ ಮೇಲೆ ವಿಧಿಸಿರುವ ಜಿಎಸ್‌ಟಿ ರದ್ದುಗೊಳಿಸಬೇಕು. ಉದ್ಯಮಿಗಳ ಸಾಲ ಮನ್ನಾ ಮಾಡಿದಂತೆ ರೈತರ ಸಾಲವನ್ನೂ ಮನ್ನಾ ಮಾಡಬೇಕು. ಹೀಗೆ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬೃಹತ್ ರ‍್ಯಾಲಿ ನಡೆಸಲಿದ್ದೇವೆ ಎಂದು ತಿಳಿಸಿದರು.

ವಿಧಾನಸೌಧ ಮುತ್ತಿಗೆ: ರಾಜ್ಯದ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಪ್ರಸಕ್ತ ತಿಂಗಳಾಂತ್ಯದೊಳಗೆ ಕಬ್ಬಿಗೆ ನ್ಯಾಯಯುತ ಬೆಲೆ ನಿಗದಿಯಾಗದಿದ್ದರೆ ಸೆಪ್ಟೆಂಬರ್ ಮೊದಲ ವಾರದಲ್ಲಿ ಕಬ್ಬು ಬೆಳೆಗಾರರೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಎಚ್ಚರಿಕೆ ನೀಡಿದರು.

ಆ.16ಕ್ಕೆ ವಿಶೇಷ ಕಾರ್ಯಕ್ರಮ

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ '75ರ ಕೃಷಿಕರ ಬದುಕು ಚರ್ಚಾ ಸಂಕಿರಣ'ವನ್ನು ಆ.16ರಂದು ಮಧ್ಯಾಹ್ನ 2 ಗಂಟೆಗೆ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ. ತೆಲಂಗಾಣ ಸರ್ಕಾರದ ರೈತಬಂಧು ಸಮಿತಿ ಛೇರ್ಮನ್ ಪಲ್ಲಂ ರಾಜಶೇಖರ ರೆಡ್ಡಿ ಉದ್ಘಾಟನೆ ನೆರವೇರಿಸಲಿದ್ದು, ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ ನರಸಿಂಹ ನಾಯ್ಡು, ತೋಟಗಾರಿಕೆ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ದಂಡಿನ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

–ಕುರುಬೂರು ಶಾಂತಕುಮಾರ್

ಹರ್ ಘರ್ ತಿರಂಗ ಅಭಿಯಾನ

ಭಯೋತ್ಪಾದಕರ ಕುಟುಂಬ ಸದಸ್ಯರಿಂದ ತ್ರಿವರ್ಣ ಧ್ವಜ ಹಾರಾಟ

ಶ್ರೀನಗರ: ಪರಾರಿಯಾಗಿರುವ ಭಯೋತ್ಪಾದಕರ ಕುಟುಂಬದ ಸದಸ್ಯರು, 75ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ತಮ್ಮ ನಿವಾಸದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದರು.

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 'ಹರ್ ಘರ್ ತಿರಂಗ' ಅಭಿಯಾನ ಕೈಗೊಂಡಿದೆ. ದೇಶದ ಪ್ರತಿಯೊಬ್ಬ ಪ್ರಜೆಯೂ ತಮ್ಮ ಮನೆಯಲ್ಲಿ ತ್ರಿವರ್ಣ ಧ್ವಜ ಹಾರಿಸಿ ಗೌರವ ಸಲ್ಲಿಸುವಂತೆ ಕೇಂದ್ರ ಸರ್ಕಾರ ಕರೆ ನೀಡಿದೆ. ಹರ್ ಘರ್ ತಿರಂಗ ಅಭಿಯಾನದ ಹಿನ್ನೆಲೆಯಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಧ್ವಜವನ್ನು ಹಾರಿಸಲಾಗುತ್ತಿದೆ. ಹೀಗಾಗಿ ಪರಾರಿಯಾಗಿರುವ ಇಬ್ಬರು ಭಯೋತ್ಪಾದಕರ ಕುಟುಂಬದವರು ದೋಡಾದಲ್ಲಿರುವ ತಮ್ಮ ನಿವಾಸದಲ್ಲಿ ತ್ರಿವರ್ಣ ಧ್ವಜ ಹಾರಿಸಿದರು. ಈ ಕುರಿತು ಪ್ರತಿಕ್ರಿಯಿಸಿರುವ ಅವರು, ನಾವು ಪ್ರತಿವರ್ಷವೂ ಸ್ವಾತಂತ್ರ್ಯ ದಿನದಂದು ತಿರಂಗವನ್ನು ಹಾರಿಸುತ್ತೇವೆ. ನನ್ನ ಸಹೋದರ ಪಾಕಿಸ್ತಾನದಲ್ಲಿ ಭಯೋತ್ಪಾದಕ. ಅವನು ಅಪ್ರಾಪ್ತನಾಗಿದ್ದಾಗಲೇ ಅಲ್ಲಿಗೆ ಹೋಗಿ ಸೇರಿಕೊಂಡಿದ್ದಾನೆ. ಅವನು ಅದೆಲ್ಲವನ್ನು ಬಿಟ್ಟು ಹಿಂತಿರುಗಬೇಕೆಂದು ನಾವು ಬಯಸುತ್ತೇವೆ ಎಂದು ಕುಟುಂಬದವರು ಆಶಯ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಶ್ರೀ ಅವಧೂತ ದತ್ತಪೀಠದಲ್ಲಿ ಆದರ್ಶ ಸೇವಾ ಸಂಘದಿಂದ ಶನಿವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಶಾಸಕ ಎಸ್.ಎ. ರಾಮದಾಸ್ ಅವರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಮಣ್ಯ ಅವರಿಗೆ 'ಆದರ್ಶ ಪ್ರತಿಭಾ ರತ್ನ' ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು ನ್ಯಾಯಾಲಯದಲ್ಲಿ ಲೋಕ್ ಅದಾಲತ್

ವಿರಸ ಮರೆತು ಸಮರಸದ ಜೀವನಕ್ಕೆ ಮುಂದಾದ 27 ಜೋಡಿ!

ಮೈಸೂರು, ಆ.13(ಎಸ್‌ಬಿಡಿ)– ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಮೈಸೂರು ನ್ಯಾಯಾಲಯದಲ್ಲಿ ಶನಿವಾರ ನಡೆದ ಲೋಕ್ ಅದಾಲತ್‌ನಲ್ಲಿ 27 ದಂಪತಿ ವಿರಸ ಮರೆತು ಒಂದಾಗಿದ್ದಾರೆ.

ಮೈಸೂರು ನಗರ ಹಾಗೂ ತಾಲೂಕು ನ್ಯಾಯಾಲಯಗಳಿಗೆ ಸಂಬಂಧಿಸಿದ ಕೌಟುಂಬಿಕ ಕಲಹ ಪ್ರಕರಣಗಳನ್ನು ಇಂದಿನ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ. ದಾಂಪತ್ಯದಲ್ಲಿ ವಿರಸ ಉಂಟಾಗಿ ವಿಚ್ಛೇದನಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಿದ್ದ ದಂಪತಿ ಮತ್ತೆ ಒಂದಾಗಿ ಬಾಳುವ ಸಂಕಲ್ಪ ಮಾಡಿದ್ದಾರೆ.




ಲೋಕ್ ಅದಾಲತ್‌ನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಮಾತನಾಡಿದರು.

ನ್ಯಾಯಾಧೀಶರ ಮಾತುಗಳಿಂದ ಜೀವನದ ಮಹತ್ವವನ್ನು ಮನದಟ್ಟು ಮಾಡಿಕೊಂಡು ಹೊಸ ಬದುಕಿನತ್ತ ಹೆಜ್ಜೆ ಹಾಕಿದರು. ಹಿಂದಿನ ಕಹಿ ಕ್ಷಣಗಳನ್ನೂ ಮರೆತು ಪರಸ್ಪರ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ಟ್ರಾಫಿಕ್ ಪ್ರಕರಣ: ಈ ಬಾರಿ ಲೋಕ್ ಅದಾಲತ್‌ನಲ್ಲಿ ಸಂಚಾರ ನಿಯಮ ಉಲ್ಲಂಘನೆಯ 31,964 ಪ್ರಕರಣಗಳನ್ನು ವಿಲೇವಾರಿಯಾಗಿರುವುದು ವಿಶೇಷ. ಈ ಮೂಲಕ 1,76,18,200 ರೂ. ದಂಡ ಸ್ವೀಕೃತವಾಗಿದೆ. ಪೊಲೀಸರು ನೋಟೀಸ್ ನೀಡಿ ಸೂಚಿಸಿದ್ದರೂ ಸಂಚಾರ ನಿಯಮ ಉಲ್ಲಂಘನೆ ಮಾಡಿದವರು ದಂಡ ಪಾವತಿಸುವಲ್ಲಿ ನಿರ್ಲಕ್ಷ್ಯ ವಹಿಸಿದ್ದರು. ಅಂತಹವರು ಲೋಕ್ ಅದಾಲತ್ ವೇಳೆಗೆ ದಂಡ ಪಾವತಿಸುವಂತೆ ಸ್ಪಷ್ಟ ಸೂಚನೆ ನೀಡಿದ್ದರ ಪರಿಣಾಮ ಸಾವಿರಾರು ಪ್ರಕರಣಗಳು ವಿಲೇವಾರಿಯಾದಂತಾಗಿದೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್, ಪ್ರಾಧಿಕಾರದ ಜಿಲ್ಲಾ ಕಾರ್ಯದರ್ಶಿ ದೇವರಾಜ್ ಭೂತೆ, ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರು, ಮೈಸೂರು ವಕೀಲರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ವಕೀಲರು ಉಪಸ್ಥಿತರಿದ್ದರು.

ಮೈಸೂರು ನಗರ ಮತ್ತು ತಾಲೂಕು ನ್ಯಾಯಾಲಯಗಳಲ್ಲಿ ಬಾಕಿಯಿರುವ ಒಟ್ಟು 1,15,893ರಲ್ಲಿ 50,811 ಪ್ರಕರಣಗಳು ರಾಜೀಯಾಗಬಲ್ಲ ಪ್ರಕರಣಗಳೆಂದು ಗುರುತಿಸಲಾಗಿದ್ದು, ಈವರೆಗೆ 33,551 ಪ್ರಕರಣಗಳ ರಾಜೀ ಸಂಧಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇದರಲ್ಲಿ 18,705 ಪ್ರಕರಣ ಹಾಗೂ 38,843 ವ್ಯಾಜ್ಯ ಪೂರ್ವ ಪ್ರಕರಣ ಸೇರಿ ಒಟ್ಟು 57,548 ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ. ಮೆಗಾ ಲೋಕ್ ಅದಾಲತ್‌ನಲ್ಲಿ ತೀರ್ಮಾನವಾದ ಪ್ರಕರಣಗಳಲ್ಲಿ ಈವರೆಗೆ ಒಟ್ಟು ರೂ.42,37,99,068 ರೂ. ಪರಿಹಾರ ನೀಡಲು ಆದೇಶಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ವಾರದ ಮಿತ್ರ

ಸಾಪ್ತಾಹಿಕ ಪುರವಣಿ

ಮತ್ತೆ ಮತ್ತೆ ಕಾಡುವ ಕವನ

ಮನೆಯಿಂದ ಮನೆಗೆ...

ರಾಘವೇಂದ್ರ ಸಿ.ಎಸ್
ಮೈಸೂರು

ಕನ್ನಡ ಸಾಹಿತ್ಯದ ಪ್ರೇಮಕವಿ, ಒಲವಿನ ಕವಿ, ಮಲ್ಲಿಗೆಯ ಕವಿ ಎಂಬಿತ್ಯಾದಿ ಬಿರುದುಗಳಿಂದ ಪ್ರಸಿದ್ಧವಾಗಿರುವ ಕೆ.ಎಸ್. ನರಸಿಂಹಸ್ವಾಮಿ(ಕಿಕ್ಕೇರಿ ಸುಬ್ಬರಾಯ ನರಸಿಂಹಸ್ವಾಮಿ) ಅವರು ಬರೆದಿರುವ ಕವನಗಳು ಎಲ್ಲಾ ಕಾಲಕ್ಕೂ ಸಲ್ಲುವಂತಹ ಗುಣವನ್ನೊಂದಿವೆ. ಅವರ ಸುಪ್ರಸಿದ್ಧ ಕವನ ಸಂಕಲನವಾದ ಮೈಸೂರು ಮಲ್ಲಿಗೆಯ ಕವನಗಳನ್ನು ಕೇಳದವರೇ ವಿರಳವೆನ್ನುವಷ್ಟರ ಮಟ್ಟಿಗೆ ಜನಪ್ರಿಯತೆಯನ್ನು ಪಡೆದುಕೊಂಡಿದೆ.

ಸಾಮಾನ್ಯವಾಗಿ ನರಸಿಂಹಸ್ವಾಮಿ ಅವರ ಕವನಗಳಲ್ಲಿ ಪ್ರೇಮ ಕವನಗಳದ್ದೇ ಸಿಂಹಪಾಲಾಗಿದ್ದರೂ ಮನೆಯಿಂದ ಮನೆಗೆ ಕವನ ಮಾತ್ರ ಸ್ವಲ್ಪ ಭಿನ್ನವಾಗಿ ನಿಲ್ಲುವ ಕವನವಾಗಿ ಕಂಡುಬರುತ್ತದೆ. ಕೆಲಸದ ಕಾರಣದಿಂದ, ಬಡತನ ಕಾರಣದಿಂದ ಬಾಡಿಗೆಗೆ ಮನೆಯಿಂದ ಮನೆಗೆ ಹೋಗುವ ಮಧ್ಯಮ ವರ್ಗದ ಕುಟುಂಬವೊಂದರ ಚಿತ್ರಣವನ್ನು ವಿವರಿಸುವ ಕವನ ಇದಾಗಿದೆ.

ವರುಷ ತುಂಬಿದರೆ ಹೊರಮನೆಯಿಂದ ಹೊರಮನೆಗೆ
ವರ್ಗ, ವರ್ಗವೆಂದರೆ ಮತ್ತೆ
ಗಂಟು ಮೂಟೆಯ ಬಿಗಿತ, ಇನ್ನಷ್ಟು ಆಯಾಸ
ತಿರುಪಿರದ ಲಾಂದ್ರಗಳು, ತಳವಿರದ ಗೂಡೆಗಳು,
ಜರಡಿ, ತೊಟ್ಟಿಲು, ಒನಕೆ – ಇವುಗಳದೆ ಮೆರವಣಿಗೆ

ವರ್ಷ, ವರ್ಷವೂ ವರ್ಗಾವಣೆಯಾಗುವ ಕುಟುಂಬದ ಚಿತ್ರಣ ಪದ್ಯದ ಮೊದಲ ಭಾಗದಲ್ಲಿ ಕಂಡುಬರುತ್ತದೆ. ವರ್ಗಾವಣೆ ಊರಿಂದ ಊರಿಗೆ ಆದಾಗ ಮನೆಯನ್ನು ಬದಲಾವಣೆ ಮಾಡಬೇಕು, ಮನೆಯ ಸರಕುಗಳನ್ನು ಒಂದು ಮನೆಯಿಂದ ಮತ್ತೊಂದು ಮನೆಗೆ ಸಾಗಿಸಬೇಕು. ಸಾಮಾನ್ಯವಾಗಿ ಮನೆ ಬದಲಾವಣೆ ಮಾಡುವ ಸಂದರ್ಭದಲ್ಲಿ ಇರುವ ಸಾಮಗ್ರಿಗಳನ್ನು ಮತ್ತೊಂದು ಮನೆಗೆ ಬದಲಿಸುವ ಕಷ್ಟ ಹೇಳತೀರದು. ಆದರೆ ಇಲ್ಲಿ ವರ್ಗ ಮಾಡೋಣ ಎಂದರೆ ಹಳೆಯ ಸರಕು, ಸಾಮಗ್ರಿಗಳು ಅದರಲ್ಲೂ ಮುಖ್ಯವಾಗಿ ತಿರುಪಿರದ ಲಾಂದ್ರಗಳು (ಲಾಟೀನು), ತಳವೇ ಇಲ್ಲದ ಗೂಡೆಗಳು(ಬುಟ್ಟಿಗಳು), ಜರಡಿ(ವಂದರಿ), ತೊಟ್ಟಿಲು, ಒನಕೆ ಇವುಗಳದ್ದೇ ಮೆರವಣಿಗೆ ಕಾಣುತ್ತದೆ ಅಂದರೆ ಬಡತನದ ಬೇಗೆಯಲ್ಲಿ ಬೆಂದಿರುವ ಕುಟುಂಬಕ್ಕೆ ಸರಕು, ಸಾಮಗ್ರಿಗಳು ಎಂದರೆ ಅದು ಕೇವಲ ಹಳೆಯ ಸರಕುಗಳ ಮೆರವಣಿಗೆಯಾಗಿ ಮಾತ್ರವೇ ಕಾಣುತ್ತದೆ ಎಂದು ಬಡತನದ ಚಿತ್ರಣವನ್ನು ತಿಳಿಸಿದ್ದಾರೆ. ಇದನ್ನು ಮತ್ತೊಂದು ಅರ್ಥದಲ್ಲೂ ಅರ್ಥೈಸಬಹುದು– ಪ್ರತಿ ವರುಷ, ವರುಷವೂ ನಾವು ನಮ್ಮ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು (ಕಲಿಕೆ ನಿರಂತರವಾದುದು. ಕಲಿಕೆಗೆ ಕೊನೆ ಎಂಬುದಿಲ್ಲ) ಇಲ್ಲದಿದ್ದರೆ ತಳವಿರದ ಗೂಡೆಯ ಹಾಗೆ, ತಿರುಪಿರದ ಲಾಂದ್ರದ ಹಾಗೆ ಹಳೆಯ ಸರಕುಗಳಾಗಿಯೇ ಉಳಿದುಕೊಳ್ಳುವ ಸಾಧ್ಯತೆ ಇರುತ್ತದೆ. ಜ್ಯೋತಿಯನ್ನು ಮತ್ತೆ ಮತ್ತೆ ಎಣ್ಣೆ ಹಾಕಿ ಮತ್ತಷ್ಟು ಪ್ರಕಾಶಮಾನವಾಗಿ ಉರಿಯುವಂತೆ ಮಾಡಿ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುವಂತೆ ಮಾಡಬೇಕು. ಒಂದು ವೇಳೆ ಈ ಕಾರ್ಯ ನಡೆಯದಿದ್ದರೆ ಜ್ಞಾನ ಎಂಬ ಜ್ಯೋತಿಯನ್ನು ಹಾಗೆಯೇ ಬಿಟ್ಟರೆ ಅದು ಉಪಯೋಗಕ್ಕೆ ಬಾರದ ಹಳೆಯ ಸರಕುಗಳ ಹಾಗೇ ಉಳಿದುಬಿಡಬಹುದು.

ಸರಕು ಸುಮ್ಮನೆ ಭಾರ, ಎಸೆಯಬಾರದೆ ಹೇಳು
ಎಸೆದರಾಯಿತೆ, ಹೇಳಿ: ಮೊದಲು ಹೊಸತನು ತನ್ನಿ'
ಸ್ಥಳವಿಲ್ಲ ಬಂಡಿಯಲಿ. 'ಹೊತ್ತು ಸಾಗಿಸಬೇಕು'
ಹೊತ್ತು ಸಾಗಿಸಬೇಕು ಅದಕೆ ಕತ್ತಲೆ ಬೇಕು!
'ಕತ್ತಲೆಗೆ ಕಾಯೋಣ'!
(ಏಳು ಮಕ್ಕಳ ತಾಯಿ, ಸ್ನೇಹಮಯಿ ನಕ್ಕಳು)
ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು: ಏಳು,
ಹೊಸಮನೆಗೆ ಹೋಗೋಣ ಮೊದಲು, ಸಂಜೆಗೆ ಬಂದು
ಸಾಗಿಸುವ ಕೆಲಸ ನನಗಿರಲಿ.
ಕಂಬನಿಗೊಳವ
ಕೆಂಗರಿಯ ಮೀನು ಕಲಕಿತ್ತು. ಗೆದ್ದಳು ಹೆಣ್ಣು!
ನಾಚಬಹುದು ಹೀಗೆ ಒಂದೊಂದು ಸಲ ಬದುಕಿನಲಿ

ಈ ಪದ್ಯಭಾಗದಲ್ಲಿ ಗಂಡನಾದವನು ತನ್ನ ಮಡದಿಗೆ ಹಳೆಯ ಸರಕುಗಳು ಏತಕ್ಕೆ ಸುಮನೆ ಭಾರವಾಗುತ್ತದೆ ಅದನ್ನು ಎಸೆಯಬಾರದೆ ಎಂದು ಪ್ರಶ್ನಿಸಿದಾಗ ತಕ್ಷಣ ಮಡದಿ ನುಡಿಯುವ ಮಾತು ಮೊದಲು ಹೊಸ ಸಾಮಗ್ರಿಯನ್ನು ತನ್ನಿ ನಂತರ ಬೇಕಿದ್ರೆ ಹಳೆಯ ಸಾಮಗ್ರಿಯನ್ನು ಎಸೆಯುವೆ ಎನ್ನುವ ಮೂಲಕ ಮಹಿಳೆಯರಿಗೆ ತಮ್ಮ ಮನೆಯ ಪಾತ್ರೆಗಳ ಮೇಲಿರುವ ಪ್ರೀತಿ ಹಾಗೂ ಬಡತನದಲ್ಲೂ ಇರುವುದರಲ್ಲೇ ಹೊಂದಿಕೊಂಡು ಬಾಳುವ ಅನಿವಾರ್ಯತೆಯನ್ನು ಈ ಸಾಲುಗಳು ವ್ಯಕ್ತಪಡಿಸಿವೆ. ಮುಂದುವರೆದು ಮಡದಿಯ ಮಾತನ್ನು ಕೇಳಿ ಗಂಡ ಕೊಡುವ ಉತ್ತರ ಮತ್ತೊಂದು ಮನೆಗೆ ಹೋಗಬೇಕಾದರೆ ಸಾಗಿಸಲು ಇರುವ ಬಂಡಿಯಲ್ಲಿ ಈ ಹಳೆಯ ಸಾಮಗ್ರಿಗಳನ್ನಿಡಲು ಸ್ಥಳವಿಲ್ಲ ಅವುಗಳನ್ನು ಹೊತ್ತು ಸಾಗಿಸಬೇಕು ಎನ್ನುತ್ತಾನೆ. ಈ ಸಾಲಿನಲ್ಲೂ ಕೂಡ ಗಂಡನಾದವನು ಹೊಸ ಸಾಮಾಗ್ರಿಗಳನ್ನು ತರಲಾಗದೇ ಹಳೆಯ ಸಾಮಗ್ರಿಗಳನ್ನೇ ಹೊತ್ತು ಸಾಗಿಸಬೇಕು ಎನ್ನುವ ಮೂಲಕ ಬಡತನ ಅನಿವಾರ್ಯತೆಯನ್ನರಿತ ಆತ ಮಡದಿಯ ಮಾತಿಗೆ ಉತ್ತರಿಸದೇ ಈ ಹಳೆಯ, ಉಪಯೋಗಕ್ಕೆ ಬಾರದ ಸರಕುಗಳನ್ನು ಬಂಡಿಯಲ್ಲಿಡಲು ಸಾಧ್ಯವಿಲ್ಲ ಅದನ್ನು ಹೊತ್ತು ಸಾಗಿಸಬೇಕು ಅದಕ್ಕೆ ಕತ್ತಲೆಬೇಕು ಎನ್ನುತ್ತಾನೆ. ಅದರರ್ಥ ಹಳೆಯ ಸರಕುಗಳನ್ನು ಹೊತ್ತು ನಡೆಯುವಾಗ ಯಾರಾದರೂ ನೋಡಿ ಆಡಿಕೊಳ್ಳುಹುದೆಂಬ ಅಳುಕು ಅವರಲ್ಲಿದೆ (ಅವರಿಗೆ ಬಡತನವಿದೆ. ನಮ್ಮ ಕಷ್ಟ ಬೇರೆಯವರಿಗೆ ಆಡಿಕೊಳ್ಳುವ ವಿಷಯವಾಗಬಾರದೆಂಬ ಆತ್ಮಾಭಿಮಾನವು ಇದೆ).

ಅದಕ್ಕಾಗಿ ಕತ್ತಲು ಆಗುವವರೆಗೆ ಕಾಯೋಣ, ಕತ್ತಲಾದರೆ ಯಾರಿಗೂ ಏನು ಕಾಣಿಸಲಾರದು ಹೊತ್ತು ಸಾಗಬಹುದೆಂಬ ಸಲಹೆ ನೀಡುತ್ತಾನೆ. ಗಂಡನ ಈ ಮಾತನ್ನು ಕೇಳಿದ ಏಳು ಮಕ್ಕಳ ತಾಯಿ, ಸ್ನೇಹಮಯಿ ಮಡದಿ ನಕ್ಕಳು. ತನ್ನ ಮಡದಿ ನಕ್ಕಾಗ ಆ ನಗು ಗಂಡನಿಗೆ ಗೋಚರವಾಗುವ ರೀತಿಯೇ ಬೇರೆ ತರಹದ್ದು. ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು ಎನ್ನುವ ಸಾಲು ಹಲವು ಒಳಾರ್ಥಗಳನ್ನು ಒಳಗೊಂಡಿದೆ. ನಿಜ ನಾವು ಪ್ರೀತಿಸುವವರು ನಮ್ಮ ಬಗ್ಗೆ ಅಸಡ್ಡೆ ತೋರಿದರೆ, ವ್ಯಂಗ್ಯವಾಗಿ ನಕ್ಕರೆ, ಕೃತಕವಾಗಿ ನಕ್ಕರೆ ಆ ನಗು ಕೊಲ್ಲುವುದಕ್ಕಿಂತ ಯಾವ ದ್ವೇಷವೂ ಕೂಡ ಕೊಲ್ಲಲಾಗದು. ಇಲ್ಲಿಯೂ ಹಾಗೆಯೇ ಬಡತನದಲ್ಲೇ ನೊಂದು ನೊಂದು ಬಳಲಿ ಹೋಗಿರುವ ಮಡದಿ ಕತ್ತಲೆಗೆ ಕಾಯೋಣ ಎಂದು ಗಂಡ ಹೇಳಿದ ಮಾತನ್ನು ಕೇಳಿ ನಕ್ಕಾಗ ಆ ನಗು ಗಂಡನಿಗೆ ಹಗೆಗಿಂತ ಭಿನ್ನವಾಗಿ ಕೊಲ್ಲುವಂತೆ ಕಾಡುತ್ತದೆ. ಗಂಡನಿಗೆ ಆ ನಗು ಬೇರೆಯಾಗಿಯೇ ಕಾಣುತ್ತದೆ. ಆ ಕೃತಕ ನಗುವಿನ ಮರ್ಮವನ್ನು ಅರಿತ ಗಂಡ ಸರಿ ಈಗ ಮೊದಲು ಹೊಸಮನೆಗೆ ಹೋಗೋಣ ಸಂಜೆ ನಾನೇ ಬಂದು ಹಳೆಯ ಸರಕುಗಳನ್ನು ಸಾಗಿಸುವೆ ಎಂದಾಗ ಮಡದಿ ಆ ಮಾತಿಗೆ ಒಪ್ಪಿಕೊಳ್ಳುವಳು. ಕೊನೆಯಲ್ಲಿ ಹೇಳುವ ಮಾತು ನಗಬಹುದು. ಹೀಗೆ ಒಂದೊಂದು ಸಲ ಬದುಕಿನಲಿ ಅಂದರೆ ಬಡತನದ ಬೇಗೆಯಲ್ಲಿ ಬೆಂದು ಎದ್ದಿರುವ ಕುಟುಂಬಕ್ಕೆ ನಗು ಎಂಬುದು ಮರೀಚಿಕೆಯಾಗಿಯೇ ಉಳಿದಿರುತ್ತದೆ. ಯಾವಾಗಲಾದರೂ ಒಮ್ಮೊಮ್ಮೆ ನಗಬಹುದು ಬದುಕಲಿ ಎನ್ನುವ ಮೂಲಕ ಈ ಬಡತನದ ಮಧ್ಯೆ ನಗುವನ್ನೇ ಮರೆತು ಜೀವಿಸುವ ಕುಟುಂಬದ ಅನಿವಾರ್ಯತೆಯನ್ನು ಇಲ್ಲಿ ಕಾಣಬಹುದು.

ಒಂದೊಂದು ಮನೆಯ ಬಿಡಲೊಂದೊಂದು ಕಾರಣ.
ಈ ಸಲದ ಅನುಭವ: ಮನೆವಂತ ಒಳ್ಳೆಯವ;
ಅವನ ಹೆಂಡತಿ, ಮಗಳು ಒಳ್ಳೆಯವರಿರಬೇಕು!
ಮನೆಯ ಬಿಡಿ ಎಂದವರು ನಮಗೆ ಹೇಳಿರಲಿಲ್ಲ,
ಅವರು ಮಾಡಿದ ಕೆಲಸ ಬೇರೆ!
ಓದು ಹತ್ತದ ಮಗಳ ದನಿಯಾದರು ಕುದುರಿ
ಮದುವೆ ಹತ್ತಿರವಾಗಲೆನುವ ಹಂಬಲಿನಿಂದ
ಸಂಗೀತ ಪಾಠವನು ಗೊತ್ತುಮಾಡಿದರಷ್ಟೆ!
ಆ ಎಂಟು ತಿಂಗಳೂ ಮಳೆಗಾಲ, ಕಪ್ಪೆಗಳು.
ಮೊದಲು, ಕೊನೆ ಆ ಹುಡುಗಿ ಕಲಿತ ಒಂದೇ
ಚರಣ: ಕೆರೆಯ ನೀರನು ಕೆರೆಗೆ ಚೆಲ್ಲಿ,
ಎಲ್ಲ ಮಾಡುವ ಕೆಲಸವಿಷ್ಟೇ ಇಲ್ಲಿ!
ಕೆರೆಯ ನೀನು ಕೆರೆಗೆ ಚೆಲ್ಲಿ
ಬೆಳಗಿನಲ್ಲಿ, ಮಧ್ಯಾಹ್ನದಲ್ಲಿ, ಸಂಜೆಯಲ್ಲಿ
ನೀರ ತುಂಬಲು ಇನ್ನು ಸ್ಥಳವಿರದೆ ಮನೆಯಲ್ಲಿ
ಬಂದು ನಿಂತರೆ ನಾವು ನಡುಬೀದಿಯಲ್ಲಿ
ನೀರ ಚೆಲ್ಲಿದ ಮಂದಿ ನೀವೆಂದು ಮನೆವಂತ
ಒಟ್ಟು ತೆರಿಗೆಯ ಬಿಗಿದ ನನ್ನ ತಲೆಗೆ! ನೀರಳೆಯುವ
ಯಂತ್ರ ನಿಜವನ್ನೆ ನುಡಿದಿತ್ತು;
ಇನ್ನೊಂದು ಮನೆಯ ಕದ ನಮಗಾಗಿ ತೆರೆದಿತ್ತು.

ಈ ಪದ್ಯಭಾಗದಲ್ಲಿ ಕೆಲವೊಮ್ಮೆ ಬಾಡಿಗೆ ಮನೆಗಳನ್ನು ಬಿಟ್ಟು ಮತ್ತೊಂದು ಬಾಡಿಗೆ ಮನೆಗೆ ಹೋಗಲು ಇರುವ ಕಾರಣಗಳನ್ನು ತಿಳಿಸುತ್ತಾ ಬಿಡಲು ಸದ್ಯ ಇದ್ದ ಮನೆಯನ್ನು ಖಾಲಿ ಮಾಡಲು ಇರುವ ಕಾರಣವನ್ನು ತಿಳಿಸಿದ್ದಾರೆ.ಮನೆಯ ಯಜಮಾನ ಒಳ್ಳೆಯವನು, ಅವನ ಮಡದಿ ಮಗಳು ಕೂಡ ಒಳ್ಳೆಯವರಿರಬೇಕು ಎಂದು ತಿಳಿಸುತ್ತಾ ಮನೆಯನ್ನು ಖಾಲಿ ಮಾಡಿ ಎಂದು ಅವರೇನು ಹೇಳಿರಲಿಲ್ಲ. ಆದರೆ ಅವರು ಮಾಡಿದ ಕೆಲಸ ಬೇರೆ ಎಂದು ತಿಳಿಸುತ್ತಾರೆ. ಆ ಮನೆಯ ಮಾಲೀಕನಿಗೆ ಒಬ್ಬಳು ಮಗಳಿದ್ದಳು ವಿದ್ಯಾಭ್ಯಾಸವಿಲ್ಲದ ಆ ಮಗಳಿಗೆ ಸಂಗೀತ ಪಾಠವನ್ನಾದರೂ ಕಲಿಸಿದರೆ ಅವಳು ಸಂಗೀತ ಕಲಿತು ತನ್ನ ಧ್ವನಿಯ ಮೂಲಕ ಅಥವಾ ಅವಳ ಹಾಡನ್ನು ಕೇಳಿಯಾದರೂ ಯಾವುದಾದರೂ ಸಂಬಂಧ ಕುದುರ ಬಹುದೆಂಬ ಆಸೆಯಿಂದ ಸಂಗೀತ ಪಾಠಕ್ಕೆ ತಮ್ಮ ಮಗಳನ್ನೂ ಸೇರಿಸುತ್ತಾರೆ. ಮಳೆಗಾಲದಲ್ಲಿ ಒಂದೇ ಸಮನೆ ಕಪ್ಪೆಗಳು ವಟಗುಟ್ಟುವಂತೆ ಆ ಎಂಟು ತಿಂಗಳು ಆ ಹುಡುಗಿ ಕಲಿತ್ತದ್ದೂ ಒಂದೇ ಸಾಲು ಅದು ಕೆರೆಯ ನೀರನ್ನು ಕೆರೆಗೆ ಚೆಲ್ಲಿ.

ಕವಿ ಇಲ್ಲಿ ಬಳಸುವ ಸಾಲು
ಕೆರೆಯ ನೀರನ್ನು ಕೆರೆಗೆ ಚೆಲ್ಲಿ
ಎಲ್ಲ ಮಾಡುವ ಕೆಲಸವಿಷ್ಟೇ ಇಲ್ಲಿ

ನಿಜ ಅಲ್ವ... ನಾವೆಲ್ಲಾ ಮಾಡುವ ಕೆಲಸ ಇದೇ ತಾನೆ. ಹಣಮಾಡಬೇಕೆಂದು ಹಣದ ಹಿಂದೆ ಬಿದ್ದವರು ಆರೋಗ್ಯ ಕೆಡಿಸಿಕೊಂಡು ಹಣ ಮಾಡುವತ್ತಾ ಧಾವಿಸುತ್ತೇವೆ. ನಂತರ ಕೆಟ್ಟು ಹೋದ ಆರೋಗ್ಯವನ್ನು ಸುಧಾರಿಸಿಕೊಳ್ಳಲು ಕಷ್ಟಪಟ್ಟು ದುಡಿದ ದುಡ್ಡನ್ನು ಖರ್ಚು ಮಾಡುತ್ತೇವೆ. ಇಷ್ಟೇ ಜೀವನ ಅದನ್ನೇ ಈ ಎರಡು ಸಾಲುಗಳಲ್ಲಿ ಕವಿ ಅಡಗಿಸಿ ಇಟ್ಟಿರಬಹುದು ಎಂದೆನಿಸುತ್ತದೆ.

ಮುಂದೆ ನಲ್ಲಿಯಲ್ಲಿ ಬೆಳಗ್ಗೆ, ಮಧ್ಯಾಹ್ನ, ಸಂಜೆ ಒಂದೇ ಸಮನೆ ನೀರು ಚೆಲ್ಲಿ ನಿಲ್ಲಲ್ಲು ಸಾಧ್ಯವಿಲ್ಲದಂತೆ ನೀರು ಸುರಿದು ಸುರಿದು ನೀರು ಸುರಿದವರು ನೀವೇ? ಎಂದು ಮನೆಯ ಮಾಲೀಕ ಆ ಮಧ್ಯಮ ವರ್ಗದ ಗಂಡನಿಗೆ ಹೇಳಿದಾಗ ಇಲ್ಲ ನೀರು ಸುರಿಸಿದವರು ನಾವಲ್ಲ ಎಂದೂ ಹೇಳಿದರೂ ಕೇಳದೇ ನೀವೇ ನೀರು ಹೆಚ್ಚು ಬಳಸಿದ್ದು ಎಂದು ಎಲ್ಲಾ ಮೊತ್ತವನ್ನೂ ಅ ಮಧ್ಯಮ ವರ್ಗದ ಗಂಡನಿಗೆ ಕಟ್ಟುತ್ತಾನೆ. ನೀರನ್ನು ಎಳೆಯುವ ಯಂತ್ರ ನೀವೇ ಬಳಸಿದ್ದು ಎಂದು ನಿಜವನ್ನೇ ನುಡಿದಾಗ ಏನು ಮಾಡಲಾಗದ ಪರಿಸ್ಥಿತಿ– ಏಕೆಂದರೆ ಯಂತ್ರಕ್ಕೆ ನೀರು ಬಳಸಿದ್ದು ಎಷ್ಟು ಅಂತ ಮಾತ್ರ ಗೊತ್ತು. ಬಳಸಿದವರು ಯಾರು ಅಂತ ತಿಳಿದಿರುವುದಿಲ್ಲ.ಹಾಗಾಗಿ ಮತ್ತೊಂದು ಮನೆಗೆ ಹೋಗಬೇಕಾದ ಅನಿವಾರ್ಯತೆ ಆ ಕುಟುಂಬಕ್ಕೆ ಬರುತ್ತದೆ. ಇನ್ನೊಂದು ಮನೆಯ ಬಾಗಿಲು ನಮಗಾಗಿ ತೆರೆದಿತ್ತು ಎನ್ನುವ ಮೂಲಕ ಬಾಡಿಗೆ ಮನೆಯಲ್ಲಿ ವಾಸಿಸುವ ಬಡ ಜನರಿಗೆ ಯಾವಾಗಲೂ ಬಾಡಿಗೆ ಮನೆಯ ಬಾಗಿಲುಗಳು ಕದವನ್ನು (ಬಾಗಿಲನ್ನು) ತೆರೆದಿರುತ್ತದೆ ಎಂದಿದ್ದಾರೆ.

ಇದ್ದವರಿಗೊಂದು ಮನೆ, ಇಲ್ಲದವರಿಗೆ ನೂರು.
ಇಲ್ಲಿ ಹಿಂದಿದ್ದವರಿಗೆಷ್ಟು ಮಕ್ಕಳೋ ಕಾಣೆ !
ಎಲ್ಲೆಲ್ಲು ನೆಲವ ಕೆತ್ತಿವೆ;
ನಲ್ಲಿಗಳ ಮುರಿದಿವೆ;
ದೀಪಗಳ ಕೆಡಿಸಿವೆ;
ಹೂಗಿಡಗಳ ಕಿತ್ತೆಸೆದಿವೆ;
ಎಲ್ಲ ಬಾಗಿಲ ಮೇಲೆ ಸೊನ್ನೆಗಳ ಬರೆದಿವೆ.
ನಾಳೆ ಈ ಹುಡುಗರಿನ್ನೇನು!

ಈ ಪದ್ಯ ಭಾಗದಲ್ಲಿ ಸ್ವಂತ ಮನೆ ಇರುವವರಿಗೆ ಒಂದೇ ಮನೆ, ಅದೇ ಬಾಡಿಗೆ ಮನೆಯಲ್ಲಿ ವಾಸ ಮಾಡುವ ಸ್ವಂತ ನೆಲೆ ಇಲ್ಲದೆ ಬಾಡಿಗೆ ಮನೆಗಳಲ್ಲಿ ವಾಸಿಸುವಂತಹ ಕುಟುಂಬಗಳಿಗೆ ನೂರಾರು ಮನೆಗಳಿರುತ್ತವೆ ಎನ್ನುವ ಮೂಲಕ ತಮಗಿರುವ ಬಡತನವನ್ನು ಆಸ್ವಾದಿಸಿ ಬದುಕುವ ಕುಟುಂಬಗಳ ಮನೋಭಾವವನ್ನು ತಿಳಿಸಿದಂತಿದೆ. ಈಗ ಬಂದಿರುವ ಮನೆಯಲ್ಲಿ ಇರುವ ವ್ಯವಸ್ಥೆಯನ್ನು ತಿಳಿಸುತ್ತಾ ಬಹುಶಃ ನಮಗಿಂತ ಮೊದಲು ಈ ಮನೆಯಲ್ಲಿ ಇದ್ದವರಿಗೆ ಮಕ್ಕಳು ಎಷ್ಟಿದ್ದರೋ ಏನೋ? ಏಕೆಂದರೆ ಮನೆಯ ಎಲ್ಲಾ ಕಡೆ ನೆಲಗಳೆಲ್ಲಾ ಕೆತ್ತಿವೆ, ನಲ್ಲಿಗಳು ಮುರಿದಿವೆ, ದೀಪಗಳು ಕೆಟ್ಟು ಹೋಗಿವೆ, ಹೂ ಗಿಡಗಳನ್ನು ಕಿತ್ತು ಎಸೆಯಲಾಗಿದೆ. ಎಲ್ಲಾ ಬಾಗಿಲಗಳ ಮೇಲೆ ಸೊನ್ನೆಗಳ ಬರೆದಿವೆ ಎನ್ನುವ ಮೂಲಕ ಮಕ್ಕಳ ತುಂಟಾಟದ ಪರಿಣಾಮದಿಂದ ಮನೆಗೆ ಒದಗಿರುವ ಸ್ಥಿತಿಯನ್ನು ತಿಳಿಸಲಾಗಿದೆ. ಜೊತೆಗೆ ಈಗ ಬಂದಿರುವ ಕುಟುಂಬದ ಯಜಮಾನನಿಗೆ ಮನೆ ಈ ಸ್ಥಿತಿಯಲ್ಲಿ ಇರುವಾಗ ಇನ್ನೂ ನನ್ನ ಮಕ್ಕಳು ಇನ್ನೇನೂ ಮಾಡುವರೋ ಎಂಬ ಸಂದೇಹ ಬರುತ್ತದೆ.

ಇಲ್ಲಿ ಹೊಸತನವೆಲ್ಲಿ ಯಾರೋ ಇದ್ದ ಮನೆಗೆ
ನಾವು ಬಂದಿದ್ದೇವೆ. ನಾವು ಹೊಸಬರೆ ಅಲ್ಲ.
ಕಂದು ಗೋಡೆಯ ಮೇಲೆ ಇಲ್ಲಣದ ತೆರೆಬಿದ್ದು
ಕಾದಿರುವ ನಾಟಕದ ಹೆಸರು ಹೊಸತು.
ಈ ಮನೆಗೆ ಬಂದೆವೀ ದಿನ
ಗಾಜೊಡೆದ ಪಟಗಳ ರಿಪೇರಿಗವಸರವಿಲ್ಲ;
ಪಾತ್ರೆಗಳಿಗಾಗಬೇಕಾದರೆ ಕಲಾಯ
ತಳ್ಳಬಹುದಿನ್ನೊಂದು ವಾರ.
ಹೊಸಚಾಪೆ, ಕಾಲೊರಸಿ ನಾಳೆ ತರಬಹುದಲ್ಲ
ಈಗೇನು ಮಾಡೋಣ ಮತ್ತೆ ಕೇಳುವೆಯಲ್ಲ!
ಹೊಕ್ಕ ಮನೆಯೆಲ್ಲ ಹೊಸಮನೆಯೆಂದೇ ಕರೆಯೋಣ;
ಹಳೆಯ ಬಾಗಿಲಿಗೆ ಹೊಸತೋರಣ ಕಟ್ಟೋಣ;
ಶಾಲೆ ಮಕ್ಕಳ ಹಾಗೆ ಹೊಸತನವ ಕಲಿಯುತ್ತ
ಇನ್ನೊಂದು ವರುಷ ಕಳೆಯೋಣ!

ಈ ಪದ್ಯಭಾಗದಲ್ಲಿ ಮನೆ ಮಾತ್ರ ಹೊಸದು ಆದರೆ ಇಲ್ಲಿ ಹೊಸತನವೇನೂ ಇಲ್ಲ. ಮೊದಲು ಯಾರೋ ಇದ್ದ ಮನೆಗೆ ನಾವು ಬಂದಿದ್ದೇವೆ ನಾವು ಕೂಡ ಇಲ್ಲಿ ಹೊಸಬರು ಎಂದು ಕಂದು ಬಣ್ಣದ ಗೋಡೆಗಳ ಮೇಲೆ ಇಲ್ಲಣದ ತೆರೆಬಿದ್ದು–(ಅಂದರೆ ಇಲ್ಲಣ ಅಂದರೆ ಜೇಡರ ಬಲೆ)ಕಂದು ಬಣ್ಣದಿಂದ ಇರುವ ಗೋಡೆಯ ಮೇಲೆ ಜೇಡರ ಬಲೆ ಕಟ್ಟಿದೆ ಅಂತಹ ಮನೆಗೆ ಬಂದಿದ್ದೇವೆ. ಹೆಸರು ಮಾತ್ರ ಹೊಸತು ಆದರೆ ಇರುವುದೆಲ್ಲಾ ಹಳೆಯದು. ಇಂತಹ ಮನೆಗೆ ಈ ದಿನ ಬಂದಿದ್ದೇವೆ ಒಡೆದು ಹೋಗಿರುವ ಗಾಜಿನ ಪಟಗಳನ್ನು ಸದ್ಯಕ್ಕೆ ರೀಪೇರಿ ಮಾಡಿಸುವ ಅಗತ್ಯ ಇಲ್ಲ (ರೀಪೇರಿ ಮಾಡಿಸಲು ಸದ್ಯಕ್ಕೆ ಹಣವೂ ಇಲ್ಲ ಎಂಬ ಭಾವ) ಇರುವ ಪಾತ್ರೆಗಳಿಗೆ ಕಲಾಯ ಹಾಕಲು ಮತ್ತೊಂದು ವಾರ ತಳ್ಳಬಹುದು ಎನ್ನುವ ಗಂಡ ಮುಂದುವರೆದು ಹೊಸ ಚಾಪೆ, ಕಾಲೊರಸಿಯನ್ನು ಕೂಡ ನಾಳೆ ತರುವುದಾಗಿ (ಸದ್ಯಕ್ಕೆ ಇರುವುದರಲ್ಲಿ ಜೀವನ ನಡೆಸುವ ಎಂಬ ಭಾವ) ಹೇಳಿದಾಗ ಮಡದಿ ಆಗಿದ್ರೆ ಈಗೇನು ಮಾಡಬೇಕೆಂದು ಕೇಳಿದಾಗ ಗಂಡ ಕೊಡುವ ಉತ್ತರ ನಿಜಕ್ಕೂ ಮಾರ್ಮಿಕವಾಗಿದೆ

ಹೋಗುವ ಮನೆಗಳನ್ನೆಲ್ಲಾ ಹೊಸ ಮನೆಯೆಂದು ಕರೆಯೋಣ, ಹಳೆಯ ಬಾಗಿಲಿಗೆ ಹೊಸ ತೋರಣವನ್ನು ಕಟ್ಟಿ ಶಾಲೆ ಮಕ್ಕಳ ಹಾಗೆ ಅಂದರೆ ಸಾಮಾನ್ಯವಾಗಿ ಶಾಲೆಗೆ ಮಕ್ಕಳು ಹೋದಾಗ ಅಲ್ಲಿ ಕಲಿಯುವ ಪ್ರತಿ ಕ್ಷಣವನ್ನೂ ಆನಂದದಿಂದ ಕಲಿತು ಸಂತೋಷ ಪಡುವ ಹಾಗೇ ನಾವು ಇನ್ನೊಂದು ವರ್ಷ ಈ ಮನೆಯಲ್ಲಿ ಕಳೆಯೋಣ ಎನ್ನುವ ಮೂಲಕ ಒಂದು ವರ್ಷ ಇದ್ದುದ್ದರಲ್ಲೇ ಸಂತಸ ಪಡುತ್ತಾ ಒಂದು ವರ್ಷ ಈ ಮನೆಯಲ್ಲಿ ಇರೋಣ ಎಂದು ಹೇಳಲಾಗಿದೆ. ಇಲ್ಲಿ ಯಾಕೆ ಒಂದು ವರ್ಷ ಮಾತ್ರ ಅಂದರೆ ಸಾಮಾನ್ಯವಾಗಿ ಬಾಡಿಗೆ ಮನೆ ಅಂದರೆ ಕರಾರು ಪತ್ರವನ್ನು ಕೇವಲ ಹನ್ನೊಂದು ತಿಂಗಳಿಗೆ ಮಾತ್ರ ಮಾಡಿಕೊಡಲಾಗುತ್ತದೆ. ಹನ್ನೊಂದು ತಿಂಗಳ ನಂತರ ಮತ್ತೆ ಅದೇ ಮನೆಯಲ್ಲಿ ವಾಸ ಮಾಡಬೇಕೆಂದರೆ ಮತ್ತಷ್ಟು ಹಣವನ್ನು ಹೆಚ್ಚು ಕೊಡಬೇಕಾಗುವುದು. ಹೆಚ್ಚಿನ ಹಣ ಕೊಡಲು ಸಾಧ್ಯವಾಗದ ಕಾರಣ ಕೇವಲ ಒಂದೇ ವರ್ಷ ಮನೆಯಲ್ಲಿ ವಾಸ. ವರ್ಷದ ನಂತರ ಮತ್ತೊಂದು ಮನೆಯಲ್ಲಿ ವಾಸ ಇದನ್ನೇ ಇಲ್ಲಿ ಶಾಲೆ ಮಕ್ಕಳ ಹಾಗೆ ಆನಂದದಿಂದ ಕಳೆಯೋಣ ಎಂದಿದ್ದಾರೆ.

ಒಂದೊಂದು ಮನೆಗೆ ಒಂದೊಂದು ವರುಷದ ಸರದಿ;
ಅಷ್ಟು ಹೊಸತೇನಲ್ಲ ನಾಳೆಯೋದುವ ವರದಿ.
ಸ್ಮೃತಿಪಥದ ಬೆಳ್ಳಿದಾರದ ಸುರುಳಿ ಬಿಚ್ಚುತಿದೆ;
ಬೆಲೆಯಿರದ ಸರಕ ಸಾಗಿಸಿ ಬಾಗಿದೆ ಬೆನ್ನು;
ಕೆರೆಯ ನೀರನು ಕೆರೆಗೆ ಚೆಲ್ಲಿ ಬಿಳಿಚಿದೆ ಕಣ್ಣು;
ಮಗು ಬರೆದ ಸೊನ್ನೆ; ಮನೆವಂತರಾಡಿದ ಮಾತು;
ನಕ್ಕನಗೆ; ಕಣ್ಣೀರು
ಒಂದಲ್ಲ, ಎರಡಲ್ಲ, ನಮ್ಮ ಪಾಲಿನ ಪುಣ್ಯ!
ಬಂಡಿಯಲಿ ಸ್ಥಳವಿಲ್ಲ, ಹೊತ್ತು ಸಾಗಿಸಬೇಕು;
ಅದಕೆ ಕತ್ತಲೆ ಬೇಕು. ಕತ್ತಲೆಗೆ ಕಾಯೋಣ!

ಈ ಪದ್ಯಭಾಗದಲ್ಲಿ ಪ್ರತಿ ಮನೆಯಲ್ಲಿ ಇರೋದು ಕೇವಲ ಒಂದು ವರ್ಷ ಅದರಲ್ಲಿ ಹೊಸದು ಏನಿಲ್ಲ ಎಂದು ತಿಳಿಸುತ್ತಾ ಹಳೆಯ ನೆನಪುಗಳು ಮತ್ತೆ ಮತ್ತೆ ನೆನಪಾಗುತ್ತಿದೆ ಎಂದು ಹೇಳುತ್ತಾ ಮನೆಯಿಂದ ಮನೆಗೆ ತೆರಳುವಾಗ ಬೆಲೆಯೇ ಇಲ್ಲದಂತಹ ಸರಕುಗಳನ್ನು ಸಾಗಿಸಿ ಸಾಗಿಸಿ ಈ ಬೆನ್ನು ಬಾಗಿದೆ ಎನ್ನುವ ಮೂಲಕ ನಮ್ಮ ಪರಿಸ್ಥಿತಿ ಏನೇನೂ ಬದಲಾಗಿಲ್ಲ ಎಂಬ ಸತ್ಯವನ್ನು ತಿಳಿಸಲಾಗಿದೆ. ಕಣ್ಣುಗಳು ಕೆಲಸದ ಒತ್ತಡದಲ್ಲಿ ಬಿಳಚಿಕೊಂಡಿದೆ, ಬಾಗಿಲ ಮೇಲೆ ಮಗು ಬರೆದ ಸೊನ್ನೆ (ಬಹುಶಃ ಮತ್ತೊಂದು ಅರ್ಥದಲ್ಲಿ ಜೀವನ ಶೂನ್ಯ ಎಂಬ ಅರ್ಥದಲ್ಲಿ ತೆಗೆದುಕೊಳ್ಳಬಹುದು. ಜೀವನದಲ್ಲಿ ಹೊಸದೇನು ಇಲ್ಲ ಎಲ್ಲವೂ ಕೂಡ ಶೂನ್ಯವೇ ಎಂದು ಅರ್ಥೈಯಿಸಬಹುದು), ಮನೆಯನ್ನು ಖಾಲಿ ಮಾಡುವಾಗ ಮನೆಯವರು ಆಡಿಕೊಳ್ಳುವ ಮಾತು (ಅಂದರೆ ಖಾಲಿ ಮಾಡುವಾಗ ನಲ್ಲಿ ಮುರಿದಿದೆ, ಬಣ್ಣ ಬಳಿಯ ಬೇಕು ಎಂದು ಅದಕ್ಕೆ ಇದಕ್ಕೆ ದುಡ್ಡು ಹೆಚ್ಚಿಗೆ ಕೊಡಬೇಕು ಎಂದು ಬಾಡಿಗೆದಾರರನ್ನು ಗೋಳು ಹಾಕಿಕೊಳ್ಳುವ ಮನೆ ಮಾಲೀಕರ ಕುಹಕದ ಮಾತು, ವ್ಯಂಗ್ಯ ನಗು) ಇವುಗಳು ಒಂದೇ ಎರಡೇ ನಮ್ಮ ಪಾಲಿನ ಪುಣ್ಯ ಎನ್ನುವ ಸಾಲಿನಲ್ಲಿ ನಿರಂತರವಾಗಿ ಕಷ್ಟಗಳೇ ಬಂದು ಬಂದೂ ಆ ಕಷ್ಟಗಳಿಗೆ ಹೊಂದಿಕೊಂಡು ಬಾಳುವ ಅನಿವಾರ್ಯತೆಯನ್ನು ತಿಳಿಸುತ್ತಾ ಇದೇ ನಮ್ಮ ಪಾಲಿನ ಪುಣ್ಯ ಎನ್ನುವ ಮೂಲಕ ಏನೇ ಬರಲಿ ಅದನ್ನು ಸ್ವೀಕರಿಸಿ ಮುಂದೆ ಸಾಗಬೇಕೆಂಬ ಸಕರಾತ್ಮಕ ಭಾವನೆ ಇಲ್ಲಿದೆ.ಮತ್ತೆ ಬೇರೆ ಮನೆಗೆ ಹೋಗಬೇಕಾದಾಗ ಮತ್ತದೇ ಪ್ರಶ್ನೆ, ಬಂಡಿಯಲ್ಲಿ ಸ್ಥಳವಿಲ್ಲ, ಹೊತ್ತು ಸಾಗಲೇಬೇಕು, ಹೊತ್ತು ಸಾಗಲು ಕತ್ತಲೆ ಬೇಕು ಆ ಕತ್ತಲೆಗೆ ನಾವು ಕಾಯಲೇಬೇಕು. ಕತ್ತಲೆ ಅನ್ನೋದು ಬಡತನದಲ್ಲಿ ಬೇಗೆಯಲ್ಲಿ ಬೇಯುವ ಇಂತಹ ಕುಟುಂಬಗಳ ಮಾನ ಕಾಪಾಡುವ ವರವಾಗುತ್ತದೆ ಎಂಬುದನ್ನು ತಿಳಿಸುತ್ತದೆ.


ಕವನದ ಆರಂಭದಿಂದ ಕೊನೆಯವರೆಗೆ ಮಧ್ಯಮ ಬಡವರ್ಗದ ಕುಟುಂಬವೊಂದರ ಪರಿಸ್ಥಿತಿಯನ್ನು ವಿವರಿಸಿದಂತಹ ನರಸಿಂಹಸ್ವಾಮಿ ಅವರು ಪದ್ಯದ ಕೊನೆಯ ಭಾಗದಲ್ಲಿ ಇಡೀ ಬದುಕಿನ ತತ್ವವನ್ನು ತಿಳಿಸುವ ಸಾರ್ವಕಾಲಿಕ ಸತ್ಯವನ್ನು ಹೇಳಿದ್ದಾರೆ. ಮನೆಯಿಂದ ಮನೆಗೆ, ಹೊರಮನೆಯಿಂದ ಹೊರಮನೆಗೆ ಮೊದಲ ಮನೆಯಿಂದ ಆದರವಿದ್ದ ಕುವಿದ್ದ ಹೆಸರಿರದ ಇನ್ನೊಂದು ಮನೆಗೆ ಹೊಸತು ಹಳೆಯದು ಎಲ್ಲ ಯಾತ್ರೆಗೆ ಹೊರಟಿದ್ದೇವೆ.

ಅಲ್ಲಿ ತಡೆಯುವರಿಲ್ಲ;
ಒಳಗೆ ಕರೆಯುವರಿಲ್ಲ;
ಇನ್ನೊಂದು ಮನೆಯಿಲ್ಲ;
ಹೊರಮನೆಯ ನೆರಳಿಲ್ಲ;
ಹೋದವರು ಹಿಂದಿರುಗಿ ಬರಲು ಹಾದಿಗಳಿಲ್ಲ;
ಅದೇ ಕಡೆಯ ಮನೆ!
ಬಾಂದಳದ ತಾರೆಗಳ ಓರೆಗಣ್ಣಿನ ಕೆಳಗೆ ಆಗಾಗ
ಬೀಸುವುದು ಬಯಲ ಗಾಳಿ

ಜೀವನದ ಉದ್ದಕ್ಕೂ ಆ ಮನೆಯಿಂದ ಈ ಮನೆ, ಈ ಮನೆಯಿಂದ ಮತ್ತೊಂದು ಮನೆಗೆ ಹೋಗುವಂತಹ ಜನರು ಕೊನೆಗೆ ಹೋಗುವಂತಹ ಮನೆ ಒಂದು ಇರುವುದು. ಆ ಮನೆಯಲ್ಲಿ ಪ್ರೀತಿ ಇಲ್ಲ, ಬಾಗಿಲು ಇಲ್ಲ, ಹೆಸರೂ ಇಲ್ಲ, ಹೊಸತು, ಹಳೆಯದು ಎಂಬುದೂ ಇಲ್ಲ, ಎಲ್ಲಾರೂ ಒಂದಲ್ಲ ಒಂದು ದಿನ ಹೊರಡಲೇ ಬೇಕು, ಆ ಮನೆಯಲ್ಲಿ ನಮ್ಮನ್ನು ಯಾರು ಕೂಡ ತಡೆಯುವುದಿಲ್ಲ, ಯಾರೂ ಕೂಡ ಒಳಗೆ ಬನ್ನಿ ಎಂದು ಸ್ವಾಗತಿಸುವುದಿಲ್ಲ, ಆ ಮನೆಗೆ ಹೋದ ನಂತರ ಮತ್ತೊಂದು ಮನೆಗೆ ಹೋಗುವ ಪ್ರಮೇಯ ಇಲ್ಲ, ಅಕ್ಕ ಪಕ್ಕದ ಮನೆಗಳ ಕಾಟವಿಲ್ಲ, ಆ ಮನೆಗೆ ಹೋದವರು ಮತ್ತೆ ಹಿಂತಿರುಗಿ ಬರಲು ದಾರಿಗಳಿಲ್ಲ, ಅದೇ ಎಲ್ಲರ ಕಡೆಯ ಮನೆಯಾಗಿರುತ್ತದೆ ಎಂದು ಬದುಕಿನ ಉದ್ದಕ್ಕೂ ನಾನು, ನನ್ನದು ಎಂದು ಏನೇ ಮೆರೆ ದರೂ ಶ್ರೀಮಂತನಾದರೂ, ಬಡವನಾದರೂ ಈ ಮನೆಗೆ ಹೋಗಲೇಬೇಕು ಇದು ಬದುಕಿನ ಅನಿವಾರ್ಯ ಮಾರ್ಗ. ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೂ ಆ ಮನೆಯಲ್ಲಿ ಜಾಗವಿದೆ ಎನ್ನುವ ಮೂಲಕ ಸಾವಿನ ಮನೆಯಿಂದ ಯಾರೂ ಕೂಡ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸಾರ್ವಕಾಲಿಕ ಸತ್ಯವನ್ನು ಸಾರುವ ನರಸಿಂಹಸ್ವಾಮಿ ಅವರು ಸಾವು ಮಾತ್ರ ಬಡವ– ಶ್ರೀಮಂತ ಎಂಬ ತಾರ ತಮ್ಯವನ್ನು ಮಾಡಲಾರದು, ಪ್ರತಿಯೊಬ್ಬರೂ ಆ ಮನೆಗೆ ಹೋಗಲೇಬೇಕು ಎಂದಿದ್ದಾರೆ. ಆಕಾಶದ ತಾರೆಗಳ ಓರೆಗಣ್ಣಿನಿಂದ ಆಗಾಗ ತಂಪಾದ ಗಾಳಿ ಬೀಸುವುದು ಎನ್ನುವ ಮೂಲಕ ಏನೇ ಆದರೂ ವಿಧಿಯಾಟದಿಂದ ಯಾರು ತಪ್ಪಿಸಿಕೊಳ್ಳಲಾರರು ಆ ಮನೆಗೆ ನಾನು ಹೋಗಲಾರೆ ಎಂದು ತಪ್ಪಿಸಿಕೊಳ್ಳಲಾಗದು ಎಂದು ಯಾರೂ ಕೂಡ ಸಾವಿನ ಮನೆಯಿಂದ ತಪ್ಪಿಸಿಕೊಳ್ಳಲಾಗದು ಎಂದು ಹೇಳಿದ್ದಾರೆ.

ಅಯ್ಯೋ ನಮಗೆ ಈ ಸ್ಥಿತಿ ಬರಬೇಕಾ ಕಷ್ಟ ನಮಗೆ ಇನ್ನೂ ಎಷ್ಟು ದಿನ ಇರುತ್ತದೆ ಥೂ ಇದು ಒಂದು ಜೀವನ ನಾ ಅಂತ ಗೊಣಗುವವರಿಗೆ, ಸಣ್ಣ ಸಣ್ಣ ಸಮಸ್ಯೆಗಳಿಗೆ ಆತ್ಮಹತ್ಯೆಯ ದಾರಿ ಹಿಡಿಯುವವರಿಗೆ ಇಡೀ ಕವನ ಬದುಕಿನ ಅನಿವಾರ್ಯತೆ, ಬಡತನದ ವಾಸ್ತವತೆಯನ್ನು ಒಪ್ಪಿಕೊಂಡು ಬದುಕು ಸಾಗಿಸಬೇಕಾದ ಪರಿಸ್ಥಿತಿ, ಗಂಡನ ಕಷ್ಟವನ್ನು ಸಹಿಸಿಕೊಂಡು ಅದನ್ನೊಪ್ಪಿಕೊಂಡು ಬದುಕುವ ಮಡದಿಯ ಸಹನೆ, (ಪ್ರಸ್ತುತ ದಿನಗಳಲ್ಲಿ ಸಣ್ಣ ಸಣ್ಣ ಮಾತಿಗೂ ಜಗಳವಾಡುವ, ವಿಚ್ಛೇದನ ನೀಡುವ ಯುವ ಸಮುದಾಯಕ್ಕೆ ಈ ಕವನ ಬದುಕಿನ ತತ್ವವನ್ನು ಹೇಳಿಕೊಡುವಂತಿದೆ) ಹಾಗೂ ಜೀವನದ ಕೊನೆಯ ಘಟ್ಟ ಸಾವು ಅದನ್ನು ತಪ್ಪಿಸಿಕೊಳ್ಳುವವರು ಯಾರು ಇಲ್ಲ ಎಂಬುದನ್ನು ಮತ್ತು ಹೊಂದಾಣಿಕೆಯಿಂದ ಬಾಳ್ವೆ ನಡೆಸುವ ಅನಿವಾರ್ಯತೆಯನ್ನು ತಿಳಿಸುತ್ತದೆ.

ಕವನವನ್ನು ಕೇವಲ ಹೊರ ಅರ್ಥದಲ್ಲಿ ತೆಗೆದುಕೊಳ್ಳದೇ ಕವಿಯ ಮನಸ್ಸನ್ನು ಅರ್ಥ ಮಾಡಿಕೊಂಡ ಸಹೃದಯನಂತೆ ಒಳಾರ್ಥದಲ್ಲಿ ತೆಗೆದುಕೊಂಡು ಅರ್ಥಮಾಡಿಕೊಂಡರೆ ಬದುಕಿನ ತತ್ವವನ್ನು ಅರಿತುಕೊಳ್ಳಬಹುದು. ಒಳಾರ್ಥವನ್ನು ಗ್ರಹಿಸಿಕೊಂಡು ಕವನವನ್ನು ಅರ್ಥೈಯಿಸಿಕೊಂಡರೆ ಎಲ್ಲಾ ಕಾಲಕ್ಕೂ ಕವನ ಮತ್ತೆ ಮತ್ತೆ ನೆನಪಾಗುತ್ತದೆ ಮತ್ತಷ್ಟು ಆಪ್ತವಾಗುತ್ತದೆ. ಈ ಹಿನ್ನಲೆಯಲ್ಲಿ ಕೆ.ಎಸ್. ನರಸಿಂಹಸ್ವಾಮಿ ಅವರ ಈ ಕವನ ಅವರ ಇತರೆ ಕವನಗಳಿಗಿಂತ ಭಿನ್ನವಾಗಿ ಮತ್ತೆ, ಮತ್ತೆ ನೆನಪಿಗೆ ಬರುವ, ಮತ್ತೆ ಮತ್ತೆ ಕಾಡುವ ಕವನವಾಗಿದೆ ಎಂದರೆ ಬಹುಶಃ ಅದು ಅತಿಶಯವಾಗದು. ■



ವಾರಭವಿಷ್ಯ

14.8.2022 ರಿಂದ 20.8.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಕಟಕ, ಸಿಂಹ, ಚಂದ್ರ–ಕುಂಭ, ಮೀನ, ಮೇಷ, ಕುಜ–ವೃಷಭ, ಬುಧ–ಸಿಂಹ, ಗುರು–ಮೀನ, ಶುಕ್ರ–ಕಟಕ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭ ಆಶಾದಾಯಕವಾಗಿರುತ್ತದೆ. ವಿತ್ತಲಾಭವಾಗಿ, ಸುಖ–ಸಂತೋಷ, ಮನಸ್ಸಿಗೆ ಮುದ ನೀಡುವ ಪ್ರಸಂಗಗಳು, ಜವಳಿ ಹಾಗೂ ಹೋಟೆಲ್ ವ್ಯಾಪಾರಗಳು ಚೇತರಿಸಿಕೊಳ್ಳುವುದು. ವಾರ ಮಧ್ಯೆ ವೈಯಕ್ತಿಕ ವಿಷಯದಲ್ಲಿ ನಿರಾಸಕ್ತಿ ಮೂಡುವುದು. ಮುಖ್ಯ ಕೆಲಸವೊಂದು ನಿಧಾನಗತಿಯಲ್ಲಿ ಸಾಗುವುದು. ಜನ್ಮಸ್ಥ ರಾಹು ಇರುವ ಕಾರಣ ಕಳ್ಳಕಾಕರಿಂದ ತೊಂದರೆ ಉಂಟಾದೀತು. ಮಾಂಗಲ್ಯ ಸರ ಜೋಪಾನ ಮಾಡಿಕೊಳ್ಳಿ. –ಶ್ರೀ ರಾಹುಗ್ರಹ ಸ್ತೋತ್ರ ಪಠಿಸಿ, ಶುಭಸಂಖ್ಯೆ–6.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ಚಂದ್ರನ ಶುಭ ಸಂಚಾರದಿಂದ ನಿಮ್ಮ ಮನಸ್ಸು ಪ್ರಫುಲ್ಲವಾಗಿರುತ್ತದೆ. ಗುರುವಿನಿಂದ ಆರೋಗ್ಯದಲ್ಲಿ ಸುಧಾರಣೆ. ಕೌಟುಂಬಿಕ ವಿಷಯಗಳಲ್ಲಿ ಉಂಟಾಗಿದ್ದ ಅನುಮಾನ, ಭಿನ್ನಾಭಿಪ್ರಾಯಗಳು ನಿವಾರಣೆ ಆಗುವುದು. ಕುಶಲಮತಿಗಳಾದ ನೀವು ಗೃಹ ಶಾಂತಿಯನ್ನು ಕಾಯ್ದುಕೊಳ್ಳಿ. ಕಾನೂನು ಬಾಹಿರ ಕೆಲಸ ಮಾಡುವ ಸರ್ಕಾರಿ ಅಧಿಕಾರಿಗಳಿಗೆ ತನಿಖಾ ಇಲಾಖೆಯಿಂದ ತೊಂದರೆ ಉಂಟಾಗಲಿದೆ. ನೀಚ ಜನರ ನಿಂದನೆಗೆ ಗುರಿಯಾಗುವಿರಿ. – ಶ್ರೀ ರಾಜೇಶ್ವರಿ ಅಷ್ಟಕ ಪಠಿಸಿ, ಶುಭಸಂಖ್ಯೆ–2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಈ ವಾರ ನಿಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಸಿದ್ಧಿ ಉಂಟಾದರೂ, ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ಇರಲಿ. ಸತ್ಕಾರ್ಯಗಳಲ್ಲಿ ಭಾಗವಹಿಸಿ ಧನ್ಯತೆಯನ್ನು ಹೊಂದುವಿರಿ. ಉದ್ಯೋಗ ಸ್ಥಳದಲ್ಲಿ ಬಿಗುವಿನ ವಾತಾವರಣ ಇರುತ್ತದೆ. ಕೈಗೆ ಬಂದ ಹಣವನ್ನು ಹಿಂದು–ಮುಂದು ನೋಡದೆ ಖರ್ಚು ಮಾಡುವಿರಿ. ವಾರಾಂತ್ಯಕ್ಕೆ ದೂರ ಪ್ರಯಾಣಗಳು ಉಂಟಾಗುವುದು. – ಶ್ರೀ ರಾಮನಾಮ ಸ್ತುತಿ, ಶುಭಸಂಖ್ಯೆ–2.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಗುರು ಕೃಪೆಗೆ ಪಾತ್ರರಾಗಿರುವ ನಿಮಗೆ ಧನಲಾಭ, ದೇಹಸೌಖ್ಯ, ವ್ಯವಹಾರಗಳಲ್ಲಿ ಪ್ರಗತಿ. ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆ ಉಂಟಾಗಲಿದೆ. ಕುಟುಂಬದಲ್ಲಿ ಉಂಟಾಗಿದ್ದ ತಪ್ಪು ತಿಳುವಳಿಕೆಗಳು ನಿವಾರಣೆ ಆಗುವುದು. ನಿಮಗೆ ವಿದ್ಯೆ ಕಲಿಸಿದ ಗುರು ಒಬ್ಬರ ಸಂಪರ್ಕದಿಂದ ನಿಮ್ಮ ಭವಿಷ್ಯ ಉಜ್ವಲವಾಗುವ ಅವಕಾಶವಿದೆ. ವಿವಾಹಯೋಗ್ಯರಿಗೆ ಕನ್ಯಾರತ್ನ ದೊರೆಯುವ ಸಂಭವವಿದೆ. ವಾರಾಂತ್ಯಕ್ಕೆ ಆಕಸ್ಮಿಕ ಧನಲಾಭ. – ಶ್ರೀಸುದರ್ಶನ ಮಂತ್ರ ಜಪಿಸಿ, ಶುಭಸಂಖ್ಯೆ–7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಅಷ್ಟಮದಲ್ಲಿ ಗುರುವೂ, ಸಪ್ತಮದಲ್ಲಿ ಶನಿದೇವರೂ ಸಂಚರಿಸುವಾಗ ಸ್ವಪ್ರತಿಷ್ಠೆಯನ್ನು ತ್ಯಜಿಸುವುದರಿಂದ ಮನಃ ಕ್ಲೇಶಗಳಿ ದೂರವಾಗುತ್ತವೆ. ವಿನಾಕಾರಣ ಜಗಳಗಳಿಂದ ಜೀವನದ ಸರಸ ಸಮಯ ಹಾಳಾಗದಂತೆ ವ್ಯವಹರಿಸಿ. ವಾರಮಧ್ಯೆ ನಿರೀಕ್ಷಿತ ಹಣ ಕೈ ಸೇರುವುದು. ಗೃಹ ಬಳಕೆ ವಸ್ತುಗಳ ಖರೀದಿ. ಗಾರ್ಮೆಂಟ್ಸ್ ವ್ಯಾಪಾರಿಗಳಿಗೆ ಉತ್ತಮ ಆರ್ಡರ್‌ಗಳು ದೊರೆಯುವ ಸಂಭವವಿದೆ. – ಆಯಿಗಿರಿ ನಂದಿನಿ ಸ್ತೋತ್ರ ಶ್ರವಣ ಮಾಡಿ, ಶುಭಸಂಖ್ಯೆ–1.

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)
ಶ್ರೀಬೃಹಸ್ಪತಿಯ ಶ್ರೀರಕ್ಷೆಯಲ್ಲಿರುವ ನೀವು ನಿಮ್ಮ ವೈಯಕ್ತಿಕ ಹಾಗೂ ಸಾಮಾಜಿಕ ಕೆಲಸ ಕಾರ್ಯಗಳನ್ನು ನಿಪುಣತೆಯಿಂದ ಸಾಧಿಸಿಕೊಳ್ಳುವಿರಿ. ದೀರ್ಘ ಕಾಲದಿಂದ ಕಾಯ್ದ ಕೆಲಸಗಳಲ್ಲಿ ಯಶಸ್ಸು ನಿಮ್ಮ ಪಾಲಿಗಿದೆ. ದಾನ– ಧರ್ಮಕ್ಕೆ ಹಣ ವಿನಿಯೋಗವಾಗುವುದು. ಕನ್ಯೆಯರಿಗೆ ಕನ್ಯಾಸೆರೆಯಿಂದ ಬಿಡುಗಡೆ ಆಗುವ ಸಾಧ್ಯತೆ ಇದೆ. ವಾರದ ಕಡೆಗೆ ನೆಂಟರಿಷ್ಟರ ಆಗಮನ, ಅವರ ಸತ್ಕಾರಕ್ಕೆ ಹಣ ವ್ಯಯ. – ಶ್ರೀನಿವಾಸ ದರ್ಶನ, ಶುಭಸಂಖ್ಯೆ–9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ನೀವು ಮುಂದಿನ ದಿನಗಳಿಗಾಗಿ ಪ್ಲಾನ್ ಮಾಡದಿದ್ದರೆ ಭವಿಷ್ಯವಿಲ್ಲ. ಸಂಸಾರದ ಬಾಧ್ಯತೆಗಳು ಸರಾಗವಾಗಿ ಸಾಗಿದರೂ, ಕ್ಷುಲ್ಲಕ ವಿಷಯಗಳಿಂದ ಕುಟುಂಬದಲ್ಲಿ ಅಶಾಂತಿ ಮೂಡಬಹುದು. ಸಾಲ–ಸೋಲ ಮಾಡಬೇಕಾದ ಪರಿಸ್ಥಿತಿ ಉಂಟಾದೀತು. ಸಂಶೋಧಕರಿಗೆ ಹೊಸ ಆವಿಷ್ಕಾರಗಳಿಂದ ಪ್ರಶಸ್ತಿ ಪುರಸ್ಕಾರಗಳು ದೊರೆಯುವುದು. ಜನ್ಮಕೇತು ಆಕಸ್ಮಿಕ ಘಟನೆಗಳಿಗೂ ಸಣ್ಣಪುಟ್ಟ ಅವಘಡಗಳಿಗೂ ಕಾರಣಕರ್ತನಾಗುವನು. – ಶ್ರೀರಾಹು– ಕೇತು ಸ್ತೋತ್ರ ಪಠಿಸಿ, ಶುಭಸಂಖ್ಯೆ–4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)
ಸಪ್ತಾಹದ ಆದಿಗೆ ಉಲ್ಲಾಸಕರ ವಾತಾವರಣ ಉಂಟಾಗಲಿದೆ. ಗೆಳೆಯರ ಪ್ರೋತ್ಸಾಹದಿಂದ ನೂತನ ಯೋಜನೆಗಳಿಗೆ ಚಾಲನೆ ದೊರೆಯುವುದು. ಸಂಬಂಧಿಕರಿಂದಲೂ ಕಾರ್ಯಾನುಕೂಲ ಉಂಟಾಗಲಿದೆ. ಬ್ಯೂಟಿ ಪಾರ್ಲರ್ಸ್ ನಡೆಸುವವರಿಗೆ ದೊಡ್ಡ ರೀತಿಯಲ್ಲಿ ಧನ ಸಂಪಾದನೆ ಆಗುವುದು. ಗುರು ಪ್ರಭಾವದಿಂದ ಬೆಟ್ಟದಂತೆ ಬಂದ ಕಷ್ಟ ಹತ್ತಿಯಂತೆ ಹಗುರವಾಗಲಿದೆ. ನೆರೆಹೊರೆಯಲ್ಲಿ ಪ್ರಶಂಸೆಗೆ ಪಾತ್ರರಾಗುವಿರಿ. – ಶ್ರೀಸುಬ್ರಹ್ಮಣ್ಯ ದರ್ಶನ, ಶುಭಸಂಖ್ಯೆ–8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರಾದಾರಂಭಕ್ಕೆ ನಿಮ್ಮ ಯೋಜನೆಗಳು ಅಂದುಕೊಂಡಂತೆ ಸಾಗದೆ ಮನಸ್ಸಿಗೆ ಬೇಸರ. ಕೈಗೆ ಬಂದ ಹಣವೂ ಹಲವು ಬಗೆಯಿಂದ ಖರ್ಚಾಗುವುದು. ಸರ್ಕಾರಿ ಅಧಿಕಾರಿಗಳ ಸಹಕಾರ ದೊರೆಯದು. ವಾರದ ಕಡೆಗೆ ಶುಭ ಚಂದ್ರನಿಂದ ಪ್ರಿಯ ಜನರ ಸಾಂಗತ್ಯ ಸಮಾಜ ಸೇವಾ ಕಾರ್ಯಗಳಿಂದ ಲೋಕ ಪ್ರಶಂಸೆಗೆ ಪಾತ್ರರಾಗುವಿರಿ. – ಶ್ರೀ ಶನಿ ಸ್ತೋತ್ರ ಪಠಿಸಿ, ಶುಭಸಂಖ್ಯೆ–5.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ನಿಮ್ಮಲ್ಲಿ ಅದ್ಭುತವಾದ ಕ್ರಿಯಾ ಶಕ್ತಿ ಇದೆ. ಜೀವನದಲ್ಲಿ ಏಳು– ಬೀಳುಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಎಡರು– ತೊಡರುಗಳನ್ನು ಮೀರಿ ಬರಲು ಚಂದ್ರ ಗ್ರಹದ ಸಹಾಯವಿದೆ. ಉದ್ಯೋಗಾಕಾಂಕ್ಷಿಗಳಿಗೆ ಶುಭವಾರ್ತೆ ಬರುವುದು. ಭಾರಿ ಉದ್ಯಮಿಗಳಿಗೆ ದೊಡ್ಡ ಆರ್ಡರ್ ದೊರೆಯುವ ಸಾಧ್ಯತೆ ಇದೆ. ರಾತ್ರಿ ವೇಳೆಯ ಪ್ರಯಾಣ ಖಂಡಿತವಾಗಿ ತ್ಯಜಿಸಿ. ಅಪರೂಪಕ್ಕೆ ಸಿಕ್ಕ ಗೆಳೆಯರೊಂದಿಗೆ 'ಪಾರ್ಟಿ' ಲಕ್ಷ್ಮಣಗೆರೆ ದಾಟದಿರಲಿ. – ಶ್ರೀವಿಷ್ಣು ಸಹಸ್ರನಾಮ ಪಠಿಸಿ, ಶುಭಸಂಖ್ಯೆ–3.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ನಿಮಗೆ 'ಸಾಡೇಸಾತಿ ಶನಿ' ಕಾಟ ಇದ್ದಾಗ್ಯೂ ಖುಷಿಯಿಂದ ಇರಲು ಅನೇಕ ಕಾರಣಗಳಿವೆ. ಅದನ್ನು ಮರೆತು ನೆಗೆಟೀವ್ ಥಿಂಕಿಂಗ್‌ನಲ್ಲಿ ಇದ್ದು ಬಿಡುತ್ತೀರಿ. ಮಹತ್ವದ ಕೆಲಸಗಳ ಬಗ್ಗೆ ಚಿಂತನ–ಮಂಥನ ಇರಲಿ. ವಾರದ ಕಡೆಗೆ ಸಂತಸದ ಸುದ್ದಿಯ ಓಲೆ ಬರಲಿದೆ. ಶ್ರೀಮತಿಯ ಸಲಹೆ ನಿಮಗೆ ಆಪ್ಯಾಯಮಾನ ವೆನಿಸಲಿದೆ. ಸೈಟು, ಮನೆ ಹೊಂದಲು ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸಬಹುದು. – ಶ್ರೀಹನುಮಾನ್ ಚಾಲೀಸ್ ಪಠಿಸಿ, ಶುಭಸಂಖ್ಯೆ–6.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಜನ್ಮ ಗುರು ಹಲವು ತೆರನಾದ ಚಿಂತೆಗಳಿಗೆ ಕಾರಣೀಭೂತನಾಗುವನು. ಕಷ್ಟ– ಸುಖಗಳು ಚಲಿಸುವ ಮೋಡಗಳಂತೆ ಸ್ಥಿರವಲ್ಲ. ವಾರದ ಆದಿಗೆ ನಿಮ್ಮ ರಾಶಿಗೆ ಬರುವ ಚಂದ್ರ ನಿಮ್ಮ ಪ್ರಯತ್ನಕ್ಕೆ ತಕ್ಕ ಪ್ರತಿಫಲವನ್ನು ನೀಡಲಿದ್ದಾನೆ. ಸರ್ಕಾರಿ ನೌಕರರಿಗೆ ಮುಂಬಡ್ತಿ ದೊರೆಯುವ ಸಾಧ್ಯತೆಯಿದೆ. ಅನುಭವಿಗಳ ಸಕಾಲಿಕ ಸಲಹೆಯಿಂದ ಮಹತ್ತರ ಸಮಸ್ಯೆಗೆ ಪರಿಹಾರ ದೊರಕುವುದು. – ಶ್ರೀ ಸುದರ್ಶನ ಸ್ತೋತ್ರ ಪಠಿಸಿ, ಶುಭಸಂಖ್ಯೆ–4..

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಸಕ್ಕರೆ ನಾಡಲ್ಲಿ ಹರ್ ಘರ್ ತಿರಂಗಾ ಅಭಿಯಾನಕ್ಕೆ ಚಾಲನೆ

• ಜಿಲ್ಲಾದ್ಯಂತ ರಾರಾಜಿಸಿದ ತ್ರಿವರ್ಣ ಧ್ವಜ • ಕಳೆಗಟ್ಟಿದ ಸ್ವಾತಂತ್ರ್ಯ ಸಂಭ್ರಮ • ಅಭಿಯಾನ ಕುರಿತು ಜಾಗೃತಿ



ಮಂಡ್ಯ ಆ.13– 75ನೇ ವರ್ಷದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ದೇಶದ್ಯಾಂತ ಹಮ್ಮಿಕೊಂಡಿರುವ 'ಹರ್ ಘರ್ ತಿರಂಗ್' ಅಭಿಯಾನಕ್ಕೆ ಜಿಲ್ಲೆಯಲ್ಲಿಯೂ ಚಾಲನೆ ನೀಡಲಾಗಿದ್ದು, ಸಕ್ಕರೆ ನಾಡಿನಲ್ಲಿ ತ್ರಿವರ್ಣ ಧ್ವಜ ರಾರಾಜಿಸಿತು.

ಸಾರ್ವಜನಿಕರು ಮನೆ, ಅಂಗಡಿ–ಮುಂಗಟ್ಟುಗಳಲ್ಲಿ, ಸಂಘ–ಸಂಸ್ಥೆಗಳ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ತಾಲೂಕಿನ ವಿವಿಧೆಡೆ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದಿಂದ 'ಹರ್ ಘರ್ ತಿರಂಗ್' ಅಭಿಯಾನ ಕುರಿತು ಜಾಗೃತಿ ಮೂಡಿಸಿ, ಪ್ರತಿಯೊಬ್ಬರು ಸ್ವಾತಂತ್ರ್ಯ ದಿನ ಆಚರಿಸುವಂತೆ ತಿಳಿಸಿದರು.

ನಗರದ ಜೆ.ಸಿ ವೃತ್ತದಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ, ಓಬಿಸಿ ಮೋರ್ಚಾ, ನಗರ ಮೋರ್ಚಾ ನೇತೃತ್ವದಲ್ಲಿ ರಾಷ್ಟ್ರಧ್ವಜ ಹಿಡಿದು ಜಾಥಾ ನಡೆಸಿದರು. ಆರ್‌ಪಿ ರಸ್ತೆ, 100 ಅಡಿ ರಸ್ತೆ, ಗುತ್ತಲು ರಸ್ತೆ, ಕಾಳಿಕಾಂಬ ದೇವಾಲಯದಲ್ಲಿ ಪೂಜೆ, ಪೇಟೆಬೀದಿ ರಸ್ತೆಗಳಲ್ಲಿ ಸಂಚರಿಸಿ ರಾಷ್ಟ್ರಪ್ರೇಮ ಜಾಗೃತಿ ಅಭಿಯಾನ ನಡೆಸಿದರು. ರಸ್ತೆಯುದ್ದಕ್ಕೂ ದೇಶಭಕ್ತಿಯ ಘೋಷಣೆಗಳನ್ನು ಮೊಳಗಿಸಿ ಜೆಸಿ ವೃತ್ತದಲ್ಲಿ ಸಮಾಪ್ತಿಗೊಳಿಸಿದರು.

ನಾಗಮಂಗಲ: ಪಟ್ಟಣದ ಡಿವೈಎಸ್‌ಪಿ ಕಚೇರಿ ಆವರಣದಲ್ಲಿ 'ಹರ್ ಘರ್ ತಿರಂಗಾ' ಜಾಗೃತಿ ಜಾಥಾಕ್ಕೆ ಡಿವೈಎಸ್‌ಪಿ ಲಕ್ಷ್ಮೀನಾರಾಯಣ ಪ್ರಸಾದ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ತುಂಬಿದ್ದು, ಈ ಸಂದರ್ಭದಲ್ಲಿ ತಾಲೂಕಿನ ಪ್ರತಿಯೊಬ್ಬರೂ ಆ.15ರವರೆಗೆ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ರಾಷ್ಟ್ರ ಹಬ್ಬವನ್ನು ಸಂಭ್ರಮದಿಂದ ಶಾಂತಿಯುತವಾಗಿ ಆಚರಿಸಬೇಕು ಎಂದು ಮನವಿ ಮಾಡಿದರು.

ಡಿವೈಎಸ್‌ಪಿ ಕಚೇರಿಯಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ 'ಹರ್ ಘರ್ ತಿರಂಗ್' ಜಾಥಾ ನಡೆಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು. ಈ ವೇಳೆ ಸರ್ಕಲ್ ಇನ್ಸ್‌ಪೆಕ್ಟರ್ ಸುಧಾಕರ್, ಪಟ್ಟಣ ಠಾಣೆಯ ಪಿಎಸ್‌ಐ ರವಿಶಂಕರ್, ಗ್ರಾಮಾಂತರ ಠಾಣೆಯ ಉಪ ನಿರೀಕ್ಷಕ ಸತೀಶ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಇದ್ದರು.

ತಾಲೂಕು ಆಡಳಿತದಿಂದ ಜಾಥಾ: ಪಟ್ಟಣದ ಸೌಮ್ಯಕೇಶವಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ತಾಲೂಕು ಆಡಳಿತದಿಂದ ಹಮ್ಮಿಕೊಂಡಿದ್ದ 'ಹರ್ ಘರ್ ತಿರಂಗ್' ಜಾಥಾಕ್ಕೆ ತಹಶೀಲ್ದಾರ್ ನಂದೀಶ್ ಮತ್ತು ವೃತ್ತ ನಿರೀಕ್ಷಕ ಸುಧಾಕರ್ ಚಾಲನೆ ನೀಡಿದರು.

ಸೌಮ್ಯಕೇಶವಸ್ವಾಮಿ ದೇವಸ್ಥಾನದ ಆವರಣದಿಂದ ಪ್ರಾರಂಭವಾದ ಜಾಥಾ ಕೆಎಸ್‌ಟಿ ರಸ್ತೆಯ ಮೂಲಕ ರಾಷ್ಟ್ರೀಯ ಹೆದ್ದಾರಿ ಜೇವರ್ಗಿ–ಚಾಮರಾಜನಗರ ರಸ್ತೆಯ ಮೂಲಕ ಸಾಗಿ ಟಿ.ಬಿ. ಬಡಾವಣೆಯ ಬಿಜಿಎಸ್ ವೃತ್ತದಿಂದ ಪುನಃ ಸೌಮ್ಯಕೇಶವ ಸ್ವಾಮಿ ದೇವಸ್ಥಾನದವರೆಗೆ ನಡೆಯಿತು. ಶಾಲಾ ಮಕ್ಕಳು, ಸಾರ್ವಜನಿಕರು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಜಾಥಾದಲ್ಲಿ ಭಾಗವಹಿಸಿದ್ದರು.





ನಾಗಮಂಗಲದಲ್ಲಿ ಶನಿವಾರ ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಯಿಂದ ಹರ್ ಘರ್ ತಿರಂಗ ಜಾಥಾ ನಡೆಯಿತು.

ಪ್ರತಿ ಮನೆಯಲ್ಲಿ ಹಾರಾಡಲಿ 'ತ್ರಿವರ್ಣ ಧ್ವಜ'



ಭಾರತೀನಗರ, ಆ.13– ಸ್ವಾತಂತ್ರ್ಯದ ಅಮೃತದ ಮಹೋತ್ಸವದ ಅಂಗವಾಗಿ ಆ.15ರ ವರೆಗೆ ಪ್ರತೀ ಮನೆಯಲ್ಲಿ ತ್ರಿವರ್ಣ ಧ್ವಜ ಹಾರಿಸಿ ಎಂಬ ಸಂದೇಶವನ್ನು ಇಲ್ಲಿನ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಸಾರಿದರು.

ಪ್ರಾಂಶುಪಾಲ ಬೈರೇಶ್ ಅವರು ಮಾತನಾಡಿ, ದೇಶಾದ್ಯಂತ ಯುವ ಸಮುದಾಯದಲ್ಲಿ ರಾಷ್ಟ್ರೀಯತೆ, ಭಾವೈಕ್ಯತೆ, ರಾಷ್ಟ್ರಭಕ್ತಿ ಮೌಲ್ಯಗಳನ್ನು ಹೆಚ್ಚಿಸಲು ಹಾಗೂ ದೇಶಾಭಿಮಾನ ಮೂಡಿಸಲು 75ನೇ ವರ್ಷದ ಸ್ವಾತಂತ್ರ್ಯೋತ್ಸವನ್ನು ಸಂಭ್ರಮದಿಂದ ಆಚರಿಸಬೇಕು ಎಂದರು.

ಬಳಿಕ, ನಡೆದ ಜಾಥಾದಲ್ಲಿ ಸಾರ್ವಜನಿಕರಿಗೆ, ದ್ವಿಚಕ್ರ ವಾಹನ ಸವಾರರಿಗೆ ತ್ರಿವರ್ಣ ಧ್ವಜ ವಿತರಿಸಲಾಯಿತು. ಉಪನ್ಯಾಸಕರಾದ ಎಂ.ಆರ್.ರವಿ, ಮಾದೇಶ್, ರಮೇಶ್, ಸಿಂಧೂರಿ, ಸಹಿಬ್‌ಖಾನ್, ಪಾಟೀಲ್, ನಿರಿಜಾಕ್ಷ ಸೇರಿದಂತೆ ಇತರರಿದ್ದರು.

ಮಾಜಿ ಸಿಎಂ ಯಡಿಯೂರಪ್ಪರಿಗೆ 'ಜೀವನದಿ' ರಾಷ್ಟ್ರೀಯ ಪ್ರಶಸ್ತಿ



ಚಿನಕುರಳಿ, ಆ.13– ಪಾಂಡವಪುರ ತಾಲೂಕಿನ ಚಿನಕುರಳಿ ಸಮೀಪದ ಬೇಬಿ ಗ್ರಾಮದ ದುರ್ದಂಡೇಶ್ವರ ಮಠದ 6ನೇ ವರ್ಷದ ಮಹಾ ರಥೋತ್ಸವ ಹಾಗೂ ಶ್ರೀಮರಿದೇವರು ಶಿವಯೋಗಿ ಮಹಾ ಸ್ವಾಮೀಜಿ ಅವರ 14ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ 'ಜೀವನದಿ' ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಯಡಿಯೂರಪ್ಪ ಅವರು, ಮರಿದೇವರು ಸ್ವಾಮೀಜಿ ಅವರನ್ನು ನಾನು ತುಂಬಾ ಹತ್ತಿರದಿಂದ ನೋಡಿ ಬೆಳೆದಿದ್ದೇನೆ. ಶ್ರೀಗಳ ಆಶೀರ್ವಾದದಿಂದ ನಾನು ರಾಜಕೀಯವಾಗಿ ಇಷ್ಟೊಂದು ದೊಡ್ಡ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಮಠದ ಈಗಿನ ಪೀಠಾಧ್ಯಕ್ಷರಾದ ಡಾ.ಶ್ರೀತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಅವರು ಮಠವನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡಿದ್ದಾರೆ. ಮೊದಲಿಗಿಂತ ಮಠ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಮಠದ ಅಭಿವೃದ್ಧಿಗಾಗಿ ಸರ್ಕಾರದ ಸಹಕಾರ ಅಗತ್ಯವಿದ್ದರೆ ಸಹಕರಿಸಲಾಗುವುದು ಎಂದು ತಿಳಿಸಿದರು.

ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ವಿಶ್ವವೇ ದೇಶದತ್ತ ತಿರುಗಿ ನೋಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಅಮಿತ್ ಶಾ ಅವರು ಕೈಜೋಡಿಸಿದ್ದಾರೆ. ರಾಜ್ಯ ಮತ್ತು ದೇಶದಲ್ಲಿ ಅಭಿವೃದ್ಧಿ ಪರ್ವವೇ ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಮೂರು ಸಾವಿರ ಮಠದ ಡಾ.ಶ್ರೀಗುರು ಸಿದ್ಧರಾಜ ಯೋಗೀಂದ್ರಸ್ವಾಮೀಜಿ ಮಾತನಾಡಿ, ಮಠಗಳು ಸಾರ್ವಜನಿಕರಲ್ಲಿ ಆಧ್ಯಾತ್ಮಕ ಚಿಂತನೆ ಮೂಡಿಸುವ ಕೆಲಸ ಮಾಡುತ್ತಿವೆ. ಹಾಗಾಗಿ ದೇಶದಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಸಿವೆ ಎಂದರು. ಬಳಿಕ 'ಮಹಾತ್ಮರ ಚರಿತಾಮೃತ' ಗ್ರಂಥದ ಕೃತಿಕಾರ ಮೋಟಗಿ ಮಠದ ಶ್ರೀಪ್ರಭು ಚನ್ನಬಸವ ಸ್ವಾಮೀಜಿ ಹಾಗೂ ಮೂರು ಸಾವಿರ ಮಠದ ಡಾ.ಶ್ರೀಗುರುಸಿದ್ದರಾಜ ಯೋಗೀಂದ್ರ ಸ್ವಾಮೀಜಿ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸದೆ ಸುಮಲತಾ, ಸಚಿವ ಕೆಸಿ.ನಾರಾಯಣಗೌಡ, ಶಾಸಕ ಸಿ.ಎಸ್.ಪುಟ್ಟರಾಜು, ದುರ್ದಂಡೇಶ್ವರ ಮಠದ ಡಾ.ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಹುಕ್ಕೇರಿ ಮಠದ ಶ್ರೀಚಂದ್ರಶೇಖರ ಸ್ವಾಮೀಜಿ, ಬೆಂಗಳೂರು ಜಿಪಂ ಅಧ್ಯಕ್ಷ ಬಿ.ಮರಿಸ್ವಾಮಿ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ನಿವೃತ್ತ ಐಎಎಸ್ ಅಧಿಕಾರಿ ದಯಾಶಂಕರ್, ವೀರಶೈವ ಸಮುದಾಯದ ಜಿಲ್ಲಾಧ್ಯಕ್ಷ ಎಂ.ಸುಬ್ರಹ್ಮಣ್ಯ, ತಾಲೂಕು ಅಧ್ಯಕ್ಷ ನಿರಂಜನ್‌ಬಾಬು, ಗ್ರಾಪಂ ಅಧ್ಯಕ್ಷ ಚಂದ್ರಶೇಖರಯ್ಯ, ಬಿಜೆಪಿ ಮುಖಂಡ ಇಂದ್ರೇಶ್, ಮಲ್ಲೇಶ್ ಹಾಜರಿದ್ದರು.

ರಥೋತ್ಸವಕ್ಕೆ ಚಾಲನೆ: ವೇದಿಕೆ ಕಾರ್ಯಕ್ರಮದ ನಂತರ 6ನೇ ವರ್ಷದ ರಥೋತ್ಸವಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು, ಜಿ.ಟಿ.ದೇವೇಗೌಡ, ಡಾ.ಶ್ರೀತ್ರಿನೇತ್ರ ಮಹಂತಹ ಶಿವಯೋಗಿ ಸ್ವಾಮೀಜಿ ಚಾಲನೆ ನೀಡಿದರು. ಬಳಿಕ ಎಲ್ಲರಿಗೂ ಅನ್ನಸಂತರ್ಪಣೆ ನಡೆಯಿತು.

> 6 ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡುವ ಸಂದರ್ಭದಲ್ಲಿ ನಾನು ಕ್ಷೇತ್ರದ ಜನರ ಆಶೀರ್ವಾದದಿಂದ ಶಾಸಕನಾಗಿ ಅವರೊಟ್ಟಿಗೆ ಕೆಲಸ ಮಾಡಿದ್ದೇನೆ. ಅವರು ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಕ್ಷೇತ್ರಕ್ಕೆ ಕೊಟ್ಟಂತಹ ಹಲವು ಅಭಿವೃದ್ಧಿ ಕೆಲಸಗಳು ಕ್ಷೇತ್ರದಲ್ಲಿ ನಡೆದಿವೆ. ಶಾಸಕನಾಗಿ ಅವರೊಟ್ಟಿಗೆ ಕೆಲಸ ಮಾಡುವ ಸದಾವಕಾಶ ಸಿಕ್ಕಿದ್ದು ನಮ್ಮ ಪುಣ್ಯವಾಗಿದೆ.
>
> –ಸಿ.ಎಸ್.ಪುಟ್ಟರಾಜು, ಶಾಸಕರು.

ಇಂದು ಮಳವಳ್ಳಿಯಲ್ಲಿ ಬಿಎಂಸಿ ಕಟ್ಟಡ ಲೋಕಾರ್ಪಣೆ

ಮಳವಳ್ಳಿ, ಆ.13– ತಾಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ಆ.14ರ ಭಾನುವಾರ ಬೆಳಗ್ಗೆ 11 ಗಂಟೆಗೆ ಮಳವಳ್ಳಿ ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ಸಮ್ಮಿಲನ ಸಮಾವೇಶ ಹಾಗೂ ವಡ್ಡರಹಳ್ಳಿ ಬಿಎಂಸಿ ಘಟಕದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ.

ಕೆಎಂಎಫ್ ನಿರ್ದೇಶಕ ವಿ.ಎಂ.ವಿಶ್ವನಾಥ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯುತ್ತಿದ್ದು, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಘನ ಉಪಸ್ಥಿತಿಯಲ್ಲಿ ಶಾಸಕ ಡಾ.ಕೆ.ಅನ್ನದಾನಿ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಶಾಸಕರು, ಜನಪ್ರತಿನಿಧಿಗಳು, ಮನ್‌ಮುಲ್ ಆಡಳಿತ ಮಂಡಳಿ ಹಾಗೂ ಅಧಿಕಾರಿಗಳ ವರ್ಗ ಭಾಗವಹಿಸಲಿದ್ದಾರೆ.

ಸಾವಿರಾರು ಮಂದಿ ಹಾಲು ಉತ್ಪಾದಕರು ಆಗಮಿಸಲಿದ್ದು, ಊಟದ ವ್ಯವಸ್ಥೆ ಮಾಡಲಾಗಿದೆ.

ಆಲಂಬಾಡಿ ಸರ್ಕಾರಿ ಶಾಲೆಗೆ ಬ್ಯಾಂಡ್‌ಸೆಟ್ ಕೊಡುಗೆ

ಕೆ.ಆರ್.ಪೇಟೆ, ಆ.13– ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಅಲಂಬಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸುಮಾರು 20 ಸಾವಿರ ರೂ. ಬೆಲೆಬಾಳುವ ಬ್ಯಾಂಡ್‌ಸೆಟ್ ಅನ್ನು ಗ್ರಾಪಂ ಸದಸ್ಯ ಎ.ಟಿ.ಕರಿಶೆಟ್ಟಿ ಕೊಡುಗೆಯಾಗಿ ನೀಡಿದರು.

ಬಳಿಕ ಮಾತನಾಡಿದ ಅವರು, 1961–62ನೇ ಸಾಲಿನಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿ ಆಲಂಬಾಡಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಇದೇ ಶಾಲೆಗೆ ಮುಖ್ಯ ಶಿಕ್ಷಕನಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ನನ್ನ ಪುಣ್ಯ. ನಿವೃತ್ತಿಯ ನಂತರ ಗ್ರಾಪಂ ಸದಸ್ಯನಾಗಿ ಕೆಲಸ ಮಾಡಲು ಗ್ರಾಮಸ್ಥರು ಅವಕಾಶ ನೀಡಿದರೆ, ಅಲ್ಲದೆ ಆಲಂಬಾಡಿ ಕಾವಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷನಾಗಿ ರೈತರ ಸೇವೆಯಲ್ಲಿಯೂ ತೊಡಗಿಸಿಕೊಂಡಿದ್ದೇನೆ. ಇದಕ್ಕೆ ನನ್ನ ಹುಟ್ಟೂರು ಆಲಂಬಾಡಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯೇ ಕಾರಣವಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮದ ಮುಖಂಡ ಸುಂದರೇಗೌಡ ಅವರು 5 ಸಾವಿರ ರೂ. ಗಳನ್ನು ಶಾಲೆಗೆ ದಾನವಾಗಿ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕ ಜೆ.ಎಸ್.ಲಿಂಗರಾಜೇಗೌಡ, ಸಿಆರ್‌ಪಿ ಎಸ್.ವಿ.ವೇಣುಗೋಪಾಲ್, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಅರುಣ್‌ಕುಮಾರ್, ಗ್ರಾಪಂ ಸದಸ್ಯ ನಾಗೇಶ್, ಶಿಕ್ಷಕರಾದ ಲೋಕೇಶ್, ಕಾವ್ಯಾ, ಶ್ವೇತಾ ಹಾಜರಿದ್ದರು.



ಎಸ್‌ಟಿಜಿ ವಿದ್ಯಾಸಂಸ್ಥೆ ಮುಖ್ಯಸ್ಥ ಶಿವರಾಜ್ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ

ಮಂಡ್ಯ, ಆ.13– ಶಾಸಕ ಸಿ.ಎಸ್.ಪುಟ್ಟರಾಜು ಅವರ ಪುತ್ರ ಹಾಗೂ ಎಸ್‌ಟಿಜಿ ವಿದ್ಯಾಸಂಸ್ಥೆ ಮುಖ್ಯಸ್ಥ ಶಿವರಾಜ್ ಅವರ 30ನೇ ವರ್ಷದ ಹುಟ್ಟುಹಬ್ಬವನ್ನು ನಗರದ ಪ್ರೇರಣಾ ವಿಶೇಷಚೇತನರ ಸಂಸ್ಥೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.



ಪುಟ್ಟರಾಜು ಅವರ ಆಪ್ತ ಬಳಗದ ವತಿಯಿಂದ ಶಾಲೆಯ ವಿಶೇಷಚೇತನ ಮಕ್ಕಳ ಜೊತೆಗೆ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಬಳಿಕ, ಮಕ್ಕಳಿಗೆ ಭೋಜನದ ವ್ಯವಸ್ಥೆ ಮಾಡಲಾಯಿತು.

ಪ್ರೇರಣಾ ವಿಶೇಷಚೇತನ ಸಂಸ್ಥೆಯ ಮುಖ್ಯಸ್ಥ ರವಿಕುಮಾರ್ ಮಾತನಾಡಿ, ನೂರಾರು ವಿಶೇಷ ಚೇತನ ಮಕ್ಕಳ ಜೊತೆಗೆ ಶಿವರಾಜ್ ಅವರ ಹುಟ್ಟುಹಬ್ಬವನ್ನು ಆಚರಣೆ ಮಾಡಿದ್ದು, ನಿಜಕ್ಕೂ ಖುಷಿ ತಂದಿದೆ. ಮಕ್ಕಳ ಜೊತೆಗೆ ಕೇಕ್ ಕತ್ತರಿಸಿ, ಊಟದ ವ್ಯವಸ್ಥೆ ಮಾಡಿದ ಬಳಗಕ್ಕೆ ಧನ್ಯವಾದ ಎಂದರು.

ಶಿವರಾಜ್ ಅವರು ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಮತ್ತಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಆಶಿಸಿದರು. ಈ ವೇಳೆ ಮಾಜಿ ಶಾಸಕರ ಆಪ್ತ ಕೆ.ಎನ್.ನಾಗೇಗೌಡ, ಎಸ್.ಕೃಷ್ಣಸ್ವರ್ಣಸಂದ್ರ, ಬಿ.ಪಿ.ಪ್ರಕಾಶ್, ಚಂದ್ರು ಇತರರಿದ್ದರು.

ರೇಷ್ಮೆ ಬೆಳೆಗಾರ ನಿಗೂಢ ನಾಪತ್ತೆ; ಅಪಹರಣ ಶಂಕೆ

ಮಂಡ್ಯ, ಆ.13–ರೇಷ್ಮೆ ಬೆಳೆಗಾರರೊಬ್ಬರು ನಿಗೂಢವಾಗಿ ಕಣ್ಮರೆಯಾಗಿದ್ದು, ಅವರನ್ನು ದುಷ್ಕರ್ಮಿಗಳು ಅಪಹರಣ ಮಾಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.



ಶ್ರೀರಂಗಪಟ್ಟಣ ತಾಲೂಕು ಜಕ್ಕನಹಳ್ಳಿ ಗ್ರಾಮದ ರೇಷ್ಮೆ ಬೆಳೆಗಾರ ಮನು(33) ಇಂದು ಮುಂಜಾನೆಯಿಂದ ನಾಪತ್ತೆಯಾಗಿದ್ದಾರೆ. ಅವರು ಮಲಗಿದ್ದ ಸ್ಥಳದಲ್ಲಿ ರಕ್ತದ ಕಲೆಗಳು ಕಂಡು ಬಂದಿವೆ ಎನ್ನಲಾಗಿದ್ದು, ಇವರು ಲೇವಾದೇವಿ ವ್ಯವಹಾರ ಮಾಡುತ್ತಿದ್ದರು ಎಂದು ಹೇಳಲಾಗಿದ್ದು, ಈ ವ್ಯವಹಾರದಲ್ಲಿ ಉಂಟಾಗಿದ್ದ ದ್ವೇಷದ ಹಿನ್ನೆಲೆಯಲ್ಲಿ ಅವರನ್ನು ಅಪಹರಣ ಮಾಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಈ ಸಂಬಂಧ ಅರಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಾಳೆ ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಉಚಿತ ಪ್ರವೇಶ

ಮಡಿಕೇರಿ, ಆ.13– ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ



(ತಿಮ್ಮಯ್ಯ ಮ್ಯೂಸಿಯಂ) ಸಂದರ್ಶಕರಿಗೆ ಆಗಸ್ಟ್ 15 ರಂದು ಉಚಿತ ಪ್ರವೇಶ ಕಲ್ಪಿಸಲಾಗಿದೆ.

ಪ್ರತೀ ಸೋಮವಾರ ದೇಶವ್ಯಾಪಿ ಮ್ಯೂಸಿಯಂಗಳಿಗೆ ರಜೆ ಇದ್ದರೂ, ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ಜನರಲ್ ತಿಮ್ಮಯ್ಯ ಮ್ಯೂಸಿಯಂನ್ನು ಆ.15 ರಂದು ಸೋಮವಾರ ವೀಕ್ಷಕರ ಸಂದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮ್ಯೂಸಿಯಂ ಸಾರ್ವಜನಿಕರ ಸಂದರ್ಶನಕ್ಕೆ ಅವಕಾಶವಿದೆ.

ಜಿಲ್ಲಾಧಿಕಾರಿ ಅವರ ಸೂಚನೆಯಂತೆ ಆ.15ರ ರಜೆಯನ್ನು ಆ.16 ರಂದು ಮಂಗಳವಾರ ನೀಡಲಾಗುತ್ತಿದ್ದು, ಮಂಗಳವಾರ ಮ್ಯೂಸಿಯಂ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಇರುವುದಿಲ್ಲ.

ಮನೆ ಮನೆಯಲ್ಲೂ ರಾಷ್ಟ್ರ ಧ್ವಜ ಅಭಿಯಾನ

ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿ ರಾಷ್ಟ್ರ ಭಕ್ತಿಗೀತೆ ಗಾಯನ

ಮಡಿಕೇರಿ, ಆ.13– ಮನೆ ಮನೆಯಲ್ಲೂ ತ್ರಿವರ್ಣ ಧ್ವಜ ಪ್ರಯುಕ್ತ ಜಿಲ್ಲಾಡಳಿತ, ನಗರಸಭೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ವೋದಯ ಸಮಿತಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿ ಶನಿವಾರ ಜಾಗೃತಿ ಅಭಿಯಾನ ಜರುಗಿತು.

ನಗರದ ಸಂತ ಜೋಸೆಫರ ಶಾಲೆಯ ವಿದ್ಯಾರ್ಥಿಗಳು ರಾಷ್ಟ್ರಭಕ್ತಿ ಗೀತೆಗಳನ್ನು ಹಾಡುವ ಮೂಲಕ ಹರ್ ಘರ್ ತಿರಂಗ ಅಭಿಯಾನದ ಮಹತ್ವ ಸಾರಿದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಆಯುಕ್ತ ವಿಜಯ, ಸರ್ವೋದಯ ಸಮಿತಿ ಜಿಲ್ಲಾ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷ ಬಿ.ಜಿ.ಅನಂತಶಯನ, ತಾಲೂಕು ಘಟಕದ ಅಧ್ಯಕ್ಷ ಅನಿಲ್ ಎಚ್.ಟಿ, ಪ್ರಧಾನ ಕಾರ್ಯದರ್ಶಿ ಮುನಿರ್ ಅಹಮದ್, ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಧಾನ ಆಯುಕ್ತರಾದ ಕೆ.ಟಿ. ಬೇಬಿಮ್ಯಾಥ್ಯು, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ರಮೇಶ್ ಹೊಳ್ಳ,



ರೋಟರಿ ವುಡ್ಸ್ ಅಧ್ಯಕ್ಷ ಸಂಪತ್ ಕುಮಾರ್, ರೋಟರಿ ಮಿಸ್ಟಿ ಹಿಲ್ಸ್‌ನ ಪ್ರಸಾದ್ ಗೌಡ, ಸಂತ ಜೋಸೆಫರ ಶಾಲೆಯ ಶಿಕ್ಷಕಿ ಕೆ.ಜಯಲಕ್ಷ್ಮಿ, ಪದ್ಮಗಿರಿ, ಡಾ.ಅಧಿತಿ, ಇತರರು ಹರ್ ಘರ್ ತಿರಂಗ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ಹಲವರು ಹೋರಾಟ ಮಾಡಿದ್ದಾರೆ. ಸ್ವಾತಂತ್ರ್ಯ ಪಡೆದು 75 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆ ಸರ್ಕಾರದಿಂದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ವಿದ್ಯಾರ್ಥಿಗಳು ತಾವು ಹಾಡುವ ರಾಷ್ಟ್ರಭಕ್ತಿ, ರಾಷ್ಟ್ರಪ್ರೇಮದ ಗೀತೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವಂತಾಗಬೇಕು. ಇದರಿಂದ ಪ್ರತಿಯೊಬ್ಬರಿಗೂ ಪ್ರೇರಣೆ ಆಗಲಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷ ಅನಂತಶಯನ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ಸ್ವತಂತ್ರಕ್ಕಾಗಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿ ಕೈಜೋಡಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದ ಸ್ಥಿತಿಗತಿಯನ್ನು ಊಹಿಸಿಕೊಳ್ಳುವುದು ಕಷ್ಟ ಸಾಧ್ಯ ಎಂದರು.

ಜಿಲ್ಲೆಯಲ್ಲಿಯೂ ಸ್ವಾತಂತ್ರ್ಯಕ್ಕಾಗಿ ಹಲವರು ಹೋರಾಟ ಮಾಡಿದ್ದಾರೆ. ಈಗಿನಂತೆ ಸ್ವಾತಂತ್ರ್ಯ ಇರಲಿಲ್ಲ, ಯಾರೂ ಸಹ ಪ್ರಶ್ನೆ ಮಾಡುವ ಆಗಿರಲಿಲ್ಲ ಎಂದು ಅವರು ಸ್ಮರಿಸಿದರು.

ಸ್ವಾತಂತ್ರ್ಯ ನಂತರ ಎಲ್ಲರಿಗೂ ಸಮಾನ ಅವಕಾಶ ಸಿಗುತ್ತಿವೆ. ಆ ನಿಟ್ಟಿನಲ್ಲಿ ಅವಕಾಶ ಪಡೆಯಲು ಪ್ರತಿಯೊಬ್ಬರಲ್ಲಿಯೂ ರಾಷ್ಟ್ರಭಕ್ತಿ, ರಾಷ್ಟ್ರ ಪ್ರೇಮ ಮೈಗೂಡಿಸಿಕೊಳ್ಳಬೇಕು. ತಂದೆ-ತಾಯಿ ಹಾಗೂ ಇತರರನ್ನು ಗೌರವಿಸುವಂತಾಗಬೇಕು ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರು ಭಾರತ ದೇಶ ಆಳುತ್ತಿದ್ದರು, ಇಂದು ಭಾರತೀಯರೊಬ್ಬರು ಬ್ರಿಟನ್ ಪ್ರಧಾನಮಂತ್ರಿ ಹುದ್ದೆಗೆ ಸ್ಪರ್ಧಿಸಿದ್ದಾರೆ. ಅಮೆರಿಕಾದ ಉಪಾಧ್ಯಕ್ಷರಾಗಿ ಕಮಲಾ ಹ್ಯಾರಿಸ್ ಅಧಿಕಾರ ನಿರ್ವಹಿಸುತ್ತಿದ್ದಾರೆ. ಹಾಗೆಯೇ ಇತ್ತೀಚೆಗೆ ಪಾಕಿಸ್ತಾನದಲ್ಲಿ ಭಾರತಿಯ ಮೂಲದ ಹೀನಾ ರಬ್ಬಾರಿಕರ್ ಅವರು ಉನ್ನತ ಸ್ಥಾನ ಪಡೆದಿದ್ದಾರೆ. ಹೀಗೆ ವಿದೇಶಗಳಲ್ಲಿಯೂ ಸಹ ಭಾರತೀಯರು ಅಧಿಕಾರ ಪಡೆದಿರುವುದು ಮಹತ್ವ ಎಂದು ಅನಂತಶಯನ ಅವರು ಹೇಳಿದರು.



ಮೈಸೂರಿನ ಫೀಲ್ಡ್ ಮಾರ್ಷಲ್ ಕೊಡವ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಸಂತೋಷ ಕೂಟ ಇಲವಾಲದ ಜಯುಮಹಲ್‌ನಲ್ಲಿ ಇತ್ತೀಚೆಗೆ ನಡೆಯಿತು. ಮುಖ್ಯಅತಿಥಿಗಳಾಗಿ ಪುಚ್ಚಿಯಂಡ ಉಮೇಶ್ ಸೋಮಯ್ಯ ಆಗಮಿಸಿದ್ದರು. ಸಂಘದ ಅಧ್ಯಕ್ಷ ದೇಯಂಡ ಜಯ ಚಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಮಂದನೆರವಂಡ ಸುಬ್ರಮಣಿ, ಖಜಾಂಚಿ ಕಾಡಿರ ನಂದಕುಮಾರ್, ಸಹಕಾರ್ಯದರ್ಶಿ ಕುಮಾರಿ ಗಗನ ಕರುಂಬಯ್ಯ, ಕಾರ್ಯಕಾರಿ ಸಮಿತಿ ಸದಸ್ಯರಾದ ಅಲ್ಲವಂಡ ಚಾಮಿ ಕುಟ್ಟಪ್ಪ, ನಾಯಕಂಡ ಅಯ್ಯಪ್ಪ, ನಾಯಕಂಡ ಹರೀಶ್, ಮೇಕೇರಿರಾ ಭರತ್, ಮರಡ ಶಶಿ ಅಯ್ಯಣ್ಣ, ಕೂತಂಡ ದಿನೇಶ್, ಮುಕ್ಕಾಟಿರ ಸತೀಶ್, ಶ್ರೀಮತಿ ಚಾವುರಿರ ಶಾರದಾ ಅಯ್ಯಣ್ಣ, ಶ್ರೀಮತಿ ಮಂಡೇಪಂಡ ಜಾನ್ಸಿ ತಿಮ್ಮಯ್ಯ, ಶ್ರೀಮತಿ ಮುಂದೂಡ ಲತಾ ಬೋಸ್, ಶ್ರೀಮತಿ ನಂಬಿಯಪಂಡ ಸೀಮಾ ಮಹೇಶ್ ಹಾಗೂ ಸದಸ್ಯರು ಭಾಗವಹಿಸಿದ್ದರು.

ಪ್ರೇಮಿಗಳನ್ನು ಇರಿದ ಹೋಟೆಲ್ ಸರ್ವರ್

ಕುಶಾಲನಗರ, ಆ.13– ಹೋಟೆಲ್ ಸರ್ವೆಂಟ್ ಓರ್ವ ಕಾವೇರಿ ನಿಸರ್ಗಧಾಮದಲ್ಲಿ ವಿಹರಿಸುತ್ತಿದ್ದ ಇಬ್ಬರು ಪ್ರೇಮಿಗಳನ್ನು ಚಾಕುವಿನಿಂದ ಇರಿದ ಘಟನೆ ಶನಿವಾರ ನಡೆದಿದೆ.

ಕುಶಾಲನಗರ ಹೊಟೇಲ್ ಒಂದರ ಸರ್ವೆಂಟ್, ದೊಡ್ಡಹರವೆ ಗ್ರಾಮದ ವಿಜಯ್ ಎಂಬತನೇ ಪ್ರೇಮಿಗಳನ್ನು ಚಾಕುವಿನಿಂದ ಇರಿದವನಾಗಿದ್ದು, ಮಾದಪಟ್ಟಣ ಯುವತಿ ಹಾಗೂ ಹೆಬ್ಬಾಲೆ ಗ್ರಾಮದ ಪ್ರವೀಣ್ ಎಂಬುವರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಹಲ್ಲೆಗೊಳಗಾದ ಪ್ರೇಮಿಗಳು ಕುಶಾಲನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಎಂದು ತಿಳಿದು ಬಂದಿದೆ. ವಿಜಯ್ ಈ ಯುವತಿಯನ್ನು ಪ್ರೀತಿಸುತ್ತಿದ್ದ ಎಂದು ಹೇಳಲಾಗಿದ್ದು, ಆಕೆ ಬೇರೆ ಯುವಕನೊಂದಿಗೆ ನಿಸರ್ಗಧಾಮಕ್ಕೆ ಬಂದಿರುವುದನ್ನು ಸಹಿಸದೆ ಇಬ್ಬರನ್ನೂ ಇರಿದಿದ್ದಾನೆ ಎನ್ನಲಾಗಿದೆ. ಈ ಸಂದರ್ಭದಲ್ಲಿ ಸಾರ್ವಜನಿಕರು ವಿಜಯ್‌ನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಕುಶಾಲನಗರ ಟೌನ್ ಠಾಣೆ ಪೊಲೀಸರು ವಿಜಯ್‌ನನ್ನು ವಶಕ್ಕೆ ಪಡೆದು ವಿಚಾರಣೆ ಕೈಗೊಂಡಿದ್ದಾರೆ.

ಕೆಎಸ್‌ಆರ್‌ಟಿಸಿ ಬಸ್ ಬರೆಗೆ ಡಿಕ್ಕಿ: 11 ಮಂದಿಗೆ ಗಾಯ



ಕುಶಾಲನಗರ,ಆ.13– ಸಮೀಪದ ಆನೆಕಾಡು ರಾಷ್ಟ್ರೀಯ ಹೆದ್ದಾರಿಯ ಮೆಟ್ನಳ್ಳದಲ್ಲಿ ಕೆಎಸ್‌ಆರ್‌ಟಿಸಿ ಬಸ್ಸೊಂದು ಚಾಲನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಮಣ್ಣಿನ ಬರೆಗೆ ಡಿಕ್ಕಿ ಹೊಡೆದ ಪರಿಣಾಮ ಹನ್ನೊಂದು ಮಂದಿ ಪ್ರಯಾಣಿಕರಿಗೆ ಗಾಯಗಳಾಗಿರುವ ಘಟನೆ ಶನಿವಾರ ನಡೆದಿದೆ.

ಚನ್ನರಾಯಪಟ್ಟಣದಿಂದ ಮಡಿಕೇರಿ ಕಡೆಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸು ರಾಷ್ಟ್ರೀಯ ಹೆದ್ದಾರಿ ಆನೆಕಾಡು ತಿರುವಿನ ಇಳಿಜಾರಿನಲ್ಲಿ ತಾಂತ್ರಿಕ ಸಮಸ್ಯೆಯಾಗಿ ಉಂಟಾಗಿದೆ. ಸೆಟ್ ಪರ್ಜ್ ತುಂಡಾದ ಕಾರಣ ನಿಯಂತ್ರಣ ತಪ್ಪಿದ ಬಸ್ಸು ಮಣ್ಣಿನ ಗುಡ್ಡಕ್ಕೆ ಡಿಕ್ಕಿ ಹೊಡೆದು ನಿಂತಿದೆ. ಇದರಿಂದ ಬಸ್ಸಿನಲ್ಲಿ ಇಬ್ಬರು ಪ್ರಯಾಣಿಕರಿಗೆ ಗಂಭೀರ ಗಾಯಗಳಾಗಿದ್ದು, ಒಂಭತ್ತು ಮಂದಿಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಗಾಯಾಳುಗಳನ್ನು ಸುಂಟಿಕೊಪ್ಪ ಆಸ್ಪತ್ರೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಗಿದೆ. 44 ಮಂದಿ ಪ್ರಯಾಣಿಕರು ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಸಂಚಾರಿಸುತ್ತಿದ್ದರು. ಅದೃಷ್ಟವಶಾತ್ ಯಾವುದೇ ಹೆಚ್ಚಿನ ಅನಾಹುತ ಹಾಗೂ ಪ್ರಾಣಹಾನಿ ಸಂಭವಿಸಿಲ್ಲ. ಅಪಘಾತದಿಂದ ಬಸ್ಸು ಜಖಂಗೊಂಡಿದೆ. ಅಪಘಾತ ಸುದ್ದಿ ತಿಳಿದು ಸ್ಥಳೀಯ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳಕ್ಕೆ ಆಗಮಿಸಿ ಪ್ರಯಾಣಿಕರನ್ನು ತುರ್ತು ನಿರ್ಗಮನದ ಕಿಟಕಿ ಹಾಗೂ ಡ್ರೈವರ್ ಕಿಟಕಿಯ ಮೂಲಕ ಸುರಕ್ಷಿತವಾಗಿ ಹೊರಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಇದೇ ಮಾರ್ಗವಾಗಿ ತೆರಳುತ್ತಿದ್ದ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಕೂಡ ಬಸ್ಸಿನಲ್ಲಿ ಸಿಲುಕಿದ್ದ ಪ್ರಯಾಣಿಕರನ್ನು ಹೊರಗೆ ತರಲು ನೆರವಾದರು. ಅಲ್ಲದೆ ಗಾಯಾಳುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ಸಹಕರಿಸಿದರು.

ಸ್ಥಳಕ್ಕೆ ಕುಶಾಲನಗರ ಸಂಚಾರಿ ಪೊಲೀಸ್ ಸಿಬ್ಬಂದಿ ಹಾಗೂ ಸುಂಟಿಕೊಪ್ಪ ಪೊಲೀಸರು ಆಗಮಿಸಿ ಪ್ರಯಾಣಿಕರನ್ನು ರಕ್ಷಣೆ ಮಾಡಿದರು. ಈ ಕುರಿತು ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಖಂಡ ಭಾರತ ಸಂಕಲ್ಪ ದಿನ: ಪಂಜಿನ ಮೆರವಣಿಗೆ

ಮಡಿಕೇರಿ,ಆ.13– ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮದ ಪ್ರಯುಕ್ತ ಹಿಂದು ಜಾಗರಣ ವೇದಿಕೆಯ ನೇತೃತ್ವದಲ್ಲಿ ನಗರದ ಮುಖ್ಯ ಬೀದಿಗಳಲ್ಲಿ ಬೃಹತ್ ಪಂಜಿನ ಮೆರವಣಿಗೆ ನಡೆಯಿತು. ಮಡಿಕೇರಿಯ ಶ್ರೀ ಚೌಡೇಶ್ವರಿ ದೇವಾಲಯದಲ್ಲಿ ಅಖಂಡ ಭಾರತದ ಸಂಕಲ್ಪಕ್ಕಾಗಿ ದೇವಿಗೆ ಪೂಜೆ ಸಲ್ಲಿಸುವ ಮೂಲಕ ಪಂಜಿನ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಭಗವಾಧ್ವಜ ಮತ್ತು ಉರಿಯುವ ಪಂಜುಗಳನ್ನು ಹಿಡಿದ ಹಿಂದು ಪರ ಸಂಘಟನೆಗಳ ನೂರಾರು ಕಾರ್ಯಕರ್ತರು, ಸಾರ್ವಜನಿಕರು, ಮಾತೆಯರು, ಮಕ್ಕಳು ದೇಶ ಭಕ್ತಿಯ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದರು. ನಗರದ ಲಕ್ಷ್ಮಿ ನರಸಿಂಹ ಕಲ್ಯಾಣ ಮಂಟಪದ ವೇದಿಕೆಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣಕಾರರಾಗಿ ಆಗಮಿಸಿದ್ದ ಉಡುಪಿಯ ಖ್ಯಾತ ವಾಗ್ಮಿ ಶ್ರೀಕಾಂತ್ ಶೆಟ್ಟಿ ಮಾತನಾಡಿ, 1947ರ ಆಗಸ್ಟ್ 14ರ ಮಧ್ಯರಾತ್ರಿ ನಮ್ಮ ದೇಶ ವಿಭಜನೆಗೊಂಡ ಇತಿಹಾಸವನ್ನು ವಿವರಿಸಿದರು. ಸಾವಿರಾರು ದೇಶ ಭಕ್ತರ ತ್ಯಾಗ, ಬಲಿದಾನ, ಹೋರಾಟಗಳಿಂದ ಪಡೆದ ಅಖಂಡ ಭಾರತದ ಸ್ವಾತಂತ್ರ್ಯವನ್ನು ಮತೀಯ ನೆಲೆಗಟ್ಟಿನಲ್ಲಿ ಚೂರು ಮಾಡಿದ ಅಂದಿನ ಅವಕಾಶವಾದಿಗಳ ನಿಜ ಬಣ್ಣವನ್ನು ಇಂದಿನ ಮತ್ತು ಮುಂದಿನ ತಲೆಮಾರಿಗೆ ತಿಳಿಸಬೇಕಿರುವುದು ನಮ್ಮೆಲ್ಲರ ಜವಾಬ್ದಾರಿ



ಎಂದರು. ಅಂದು ಕಳೆದುಕೊಂಡಿರುವ ಭಾರತದ ಭೂ ಭಾಗಗಳನ್ನು ಮತ್ತೆ ಪಡೆಯುವ ಮೂಲಕ ಈ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ ಎಲ್ಲ ಸ್ವಾತಂತ್ರ್ಯ ಯೋಧರಿಗೆ ಗೌರವ ಸಮರ್ಪಣೆ ಮಾಡಬೇಕಾಗಿದೆ. ಸಮಾಜದಲ್ಲಿ ಜಾಗೃತಿ ಮೂಡಿಸುತ್ತಾ, ಆ ಜಾಗೃತ ಸಮಾಜವನ್ನು ಸಂಘಟಿಸುತ್ತಾ, ಸಂಘಟಿತ ಸಮಾಜವೇ ಸಮಾಜ ವಿರೋಧಿ ಶಕ್ತಿಗಳನ್ನು ದಮನಿಸುವ ಕೆಲಸವನ್ನು ಮಾಡಬೇಕಿದೆ. ಈ ಉದ್ದೇಶದ ಭಾಗವಾಗಿ ಹಿಂದು ಜಾಗರಣ ವೇದಿಕೆಯು ಅಖಂಡ ಭಾರತ ಸಂಕಲ್ಪ ದಿನ ಕಾರ್ಯಕ್ರಮವನ್ನು ನಡೆಸುತ್ತಿದೆ ಎಂದರು. ಮುಂದೊಂದು ದಿನ ಅಖಂಡ ಭಾರತ ನಿರ್ಮಾಣವನ್ನು ಜಾಗೃತ ಸಮಾಜವೇ ಮಾಡಲಿದೆಯೆಂದು ಶ್ರೀಕಾಂತ್ ಶೆಟ್ಟಿ ಹೇಳಿದರು.

ಭಾರತೀಯ ನೌಕಾದಳದ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಚೋಂಡಿರ ಸುರೇಶ್ ಮಾತನಾಡಿ, ಪ್ರತೀ ಮನೆಗಳಲ್ಲೂ ಛತ್ರಪತಿ ಶಿವಾಜಿ, ಸುಭಾಸ್ ಚಂದ್ರ ಬೋಸ್, ಕಿತ್ತೂರು ರಾಣಿ ಚೆನ್ನಮ್ಮ, ವನಕೆ ಓಬವ್ವ ಅಂತಹವರು ನಿರ್ಮಾಣವಾಗುವ ಮೂಲಕ ದೇಶದೊಳಗಿನ ಮತಾಂಧ ದುಷ್ಟಶಕ್ತಿಗಳ ನಿರ್ನಾಮ ಮಾಡಬೇಕಿರುವ ಅವಶ್ಯಕತೆಯಿದೆ ಎಂದರು.

ಹಿಂಜಾವೇ ವಿಭಾಗ ಸಂಯೋಜಕ್ ಮಹೇಶ್ ಕಡಗದಾಳು, ಜಿಲ್ಲಾ ಸಂಯೋಜಕ ಕುಕ್ಕೇರ ಅಜಿತ್, ಜಿಲ್ಲಾ ಸಹ ಸಂಯೋಜಕ ಚೇತನ್ ಶಾಂತಿನಿಕೇತನ್, ಜಿಲ್ಲಾ ಸಮಿತಿಯ ಪ್ರಮುಖರಾದ ಲಕ್ಷ್ಮಿ ನಾರಾಯಣ, ಪವಿತ್ರ ಶಾಂತೆಯಂಡ ತಿಮ್ಮಯ್ಯ, ಕುಮಾರ್ ಮೇಕೇರಿ, ಸುನಿಲ್ ಮಾದಾಪುರ, ವಿನಯ್ ಮಡಿಕೇರಿ ಹಾಗೂ ತಾಲೂಕು ಸಂಯೋಜಕ ಮುಗೇರನ ಬೆಳ್ಯಪ್ಪ, ಸಹ ಸಂಯೋಜಕ ಮನುರೈ ಹಾಗೂ ಹಿಂದುಪರ ಸಂಘಟನೆಗಳ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಲೋಕ ಅದಾಲತ್‌ನಲ್ಲಿ 245 ಪ್ರಕರಣ ಇತ್ಯರ್ಥ

ಗೋಣಿಕೊಪ್ಪ,ಆ.13– ಪೊನ್ನಂಪೇಟೆ ನ್ಯಾಯಾಲಯದಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ 245 ಪ್ರಕರಣ ಇತ್ಯರ್ಥ ಮಾಡಲಾಯಿತು.

ನ್ಯಾಯಾಧೀಶರಾದ ಕೆ.ಎಸ್.ಆಶಾ ಸಮ್ಮುಖದಲ್ಲಿ ಚೆಕ್, ಕೌಟುಂಬಿಕ ಕಲಹ ಸೇರಿದಂತೆ ಸಿವಿಲ್ ಕೇಸ್‌ಗಳ ಬಗ್ಗೆ ವಿಚಾರಣೆ ನಡೆಯಿತು. ಕಕ್ಷಿದಾರರ ಸಮಸ್ಯೆ ಆಲಿಸಿ, ರಾಜಿ ತೀರ್ಮಾನದ ಮೂಲಕ ಇತ್ಯರ್ಥ ಪಡಿಸಲಾಯಿತು. ಸುಮಾರು 800 ಪ್ರಕರಣಗಳಲ್ಲಿ ಒಂದಷ್ಟು ಕಕ್ಷಿದಾರರು ಗೈರು ಹಾಜರಾದರು. ಒಂದಷ್ಟು ಪ್ರಕಣದಲ್ಲಿ ಕಕ್ಷಿದಾರರು ರಾಜೀಗೆ ಒಪ್ಪಿಕೊಳ್ಳದೆ ತೀರ್ಮಾನಕ್ಕೆ ಹಿನ್ನಡೆಯಾಯಿತು. ಪೊನ್ನಂಪೇಟೆ ವಕೀಲರ ಸಂಘದ ಸದಸ್ಯರು ಅದಾಲತ್ ಯಶಸ್ವಿಗೆ ಕೈ ಜೋಡಿಸಿದರು.



ಮನವಿ: ರಾಜಿ ತೀರ್ಮಾನದ ಮೂಲಕ ಪ್ರಕರಣವನ್ನು ಇತ್ಯರ್ಥ ಪಡಿಸಲು ಕಕ್ಷಿದಾರರು ಉತ್ಸಾಹ ತೋರಬೇಕು ಎಂದು ಪೊನ್ನಂಪೇಟೆ ವಕೀಲರ ಸಂಘದ ಕಳಕಂಡ ಡಿ. ಮುತ್ತಪ್ಪ ಮನವಿ ಮಾಡಿಕೊಂಡಿದ್ದಾರೆ. ಎರಡು ತಿಂಗಳಿಗೊಮ್ಮೆ ಲೋಕಾ ಅದಾಲತ್ ನಡೆಯುತ್ತದೆ. ಗೈರು ಹಾಜರಿ ಕ್ರಮ ಸರಿಯಲ್ಲ. ಮುಂದಿನ ಅಕ್ಟೋಬರ್ ತಿಂಗಳಿನಲ್ಲಿ ನಡೆಯುವ ಅದಾಲತ್‌ನಲ್ಲಿ ಹೆಚ್ಚು ಕಕ್ಷಿದಾರರು ಪಾಲ್ಗೊಂಡು ನ್ಯಾಯ ಪಡೆದುಕೊಳ್ಳಬೇಕು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಾದ್ಯಂತ ಹರ್ ಘರ್ ತಿರಂಗಾ ಅಭಿಯಾನ

ಅಧಿಕಾರಿಗಳು-ವಿದ್ಯಾರ್ಥಿಗಳ ಸ್ವಾತಂತ್ರ್ಯ ನಡಿಗೆಗೆ ಡಿಸಿ ಚಾಲನೆ





ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದನ್ವಯ ದೇಶಾದ್ಯಂತ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಆ.13ರಿಂದ 15ರವರೆಗೆ ಹರ್ ಘರ್ ತಿರಂಗಾ ಅಭಿಯಾನ ಆಯೋಜಿಸಲಾಗಿದೆ. ಈ ಪ್ರಯುಕ್ತ ಜಿಲ್ಲೆಯಲ್ಲಿಯೂ 3 ದಿನಗಳ ಕಾಲ ಜಾಗೃತಿ ಜಾಥಾದಂತಹ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

–ಚಾರುಲತಾ ಸೋಮಲ್, ಜಿಲ್ಲಾಧಿಕಾರಿ.

ಚಾಮರಾಜನಗರ, ಆ.13–ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಪ್ರತಿ ಮನೆ-ಮನೆಯಲ್ಲೂ, ಎಲ್ಲಾ ಸರ್ಕಾರಿ ಕಟ್ಟಡಗಳು ಹಾಗೂ ವಾಣಿಜ್ಯ ಮಳಿಗೆಗಳಲ್ಲಿ ರಾಷ್ಟ್ರ ಧ್ವಜ ಹಾರಿಸುವ ಹರ್ ಘರ್ ತಿರುಗಾ ಅಭಿಯಾನಕ್ಕೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಇಂದು ಚಾಲನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿಂದು ಸ್ವಾತಂತ್ರ್ಯ ಧ್ವಜಾರೋಹಣ ನೆರವೇರಿಸಿದ ಬಳಿಕ ಹರ್ ಘರ್ ತಿರಂಗಾ ಅಭಿಯಾನದ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದವರೆಗೆ ಹಮ್ಮಿಕೊಂಡಿದ್ದ ಸ್ವಾತಂತ್ರ್ಯದ ನಡಿಗೆ ಜಾಥಾಗೆ ಹಸಿರು ನಿಶಾನೆ ತೋರಿದರು.

ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಕುರಿತು ಜಾಗೃತಿ ಮೂಡಿಸಲು ಆಯೋಜಿಸಿದ್ದ ಆಕರ್ಷಕ ಜಾಥಾದಲ್ಲಿ ಸ್ವತಹ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ತ್ರಿವರ್ಣ ಧ್ವಜ ಹಿಡಿದು ಹೆಜ್ಜೆ ಹಾಕಿದರು. ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ ಜಿಲ್ಲಾಧಿಕಾರಿಗೆ ಸಾಥ್ ನೀಡಿದರು.

ಜಾಥಾ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ, ಶಾಲಾ ಮಕ್ಕಳು, ಅಂಗನವಾಡಿ ಕಾರ್ಯಕರ್ತೆಯರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಅದರಲ್ಲೂ ಶಾಲಾ ವಿದ್ಯಾರ್ಥಿಗಳು 30 ಅಡಿ ಉದ್ದದ ತ್ರಿವರ್ಣ ಧ್ವಜ ಹಿಡಿದು ಜಾಥಾದ ಉದ್ದಕ್ಕೂ ನೋಡುಗರ ಗಮನ ಸೆಳೆದರು. ಬೋಲೋ ಭಾರತ್ ಮಾತಾಕೀ ಜೈ ಉದ್ಘೋಷಗಳು ಮುಗಿಲು ಮುಟ್ಟಿದವು.

ಜಿಲ್ಲಾಡಳಿತ ಭವನದಿಂದ ಹೊರಟ ಜಾಥಾ ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಸಾಗಿ ಚಾಮರಾಜೇಶ್ವರ ದೇವಸ್ಥಾನದವರೆಗೆ ತಲುಪಿ ಮತ್ತೆ ಜಿಲ್ಲಾಡಳಿತ ಭವನಕ್ಕೆ ಹಿಂತಿರುಗಿತು.

ಹನೂರಲ್ಲಿ ಸಂಭ್ರಮದ ಬೈಕ್ ರಾಲಿ



ಹನೂರು, ಆ.13– ಹನೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಹರ್ ಘರ್ ತಿರಂಗ ಅಭಿಯಾನ ಕಾರ್ಯಕ್ರಮವನ್ನು ಬೈಕ್ ರಾಲಿ ಮೂಲಕ ವಿವಿಧ ಸರ್ಕಾರಿ ಇಲಾಖೆ ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಸಂಭ್ರಮ-ಸಡಗರದಿಂದ ಆಚರಿಸಲಾಯಿತು.

ಪಟ್ಟಣದ ಪೊಲೀಸ್ ವಸತಿಗೃಹ ಸಮೀಪ ಬೈಕ್ ರ್‍ಯಾಲಿಗೆ ಕೊಳ್ಳೇಗಾಲ ಡಿವೈಎಸ್ಪಿ ನಾಗರಾಜು ಹಸಿರು ನಿಶಾನೆ ತೋರಿದರು. ಬೈಕ್ ರ್‍ಯಾಲಿಯಲ್ಲಿ ದ್ವಿಚಕ್ರ ವಾಹನಗಳಿಗೆ ತ್ರಿವರ್ಣ ಧ್ವಜವನ್ನು ಅಳವಡಿಸಿಕೊಂಡು ವಂದೇ ಮಾತರಂ, ಭಾರತ್ ಮಾತಾಕಿ ಜೈ ಎಂಬ ಘೋಷಣೆಗಳನ್ನು ಕೂಗಿ ದೇಶ ಪ್ರೇಮದ ಸಂದೇಶವನ್ನು ಸಾರಿದರು.

ರ್‍ಯಾಲಿಯು ಪಟ್ಟಣದ ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಖಾಸಗಿ ಬಸ್ ನಿಲ್ದಾಣದಲ್ಲಿ ಮಾನವ ಸರಪಳಿ ನಿರ್ಮಿಸಿ ಸಾರ್ವಜನಿಕರಿಗೆ ದೇಶ ಪ್ರೇಮದ ಅರಿವು ಮೂಡಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ನಿಂಪು ರಾಜೇಶ್ ಮಾತನಾಡಿದರು. ಬಳಿಕ ರ್‍ಯಾಲಿ ಬಂಡಳ್ಳಿ ರಸ್ತೆ ಮೂಲಕ ಸಾಗಿ ಜಿ.ವಿ.ಗೌಡ ಕಾಲೇಜುವರೆಗೆ ತೆರಳಿ, ಐಟಿಐ ರಸ್ತೆ ಮೂಲಕ ಮಲೆಮಹದೇಶ್ವರ ಮುಖ್ಯ ರಸ್ತೆಗೆ ತಲುಪಿ ಅನ್ನಪೂರ್ಣೇಶ್ವರಿ ಹೋಟೆಲ್ ಬಳಿ ರ್‍ಯಾಲಿಯನ್ನು ಮುಕ್ತಾಯ ಗೊಳಿಸಲಾಯಿತು.

ಈ ಸಂದರ್ಭದಲ್ಲಿ ಪಪಂ ಮುಖ್ಯಾಧಿಕಾರಿ ಪರಶಿವಯ್ಯ, ಗ್ರಾಮಲೆಕ್ಕಿಗ ಶೇಷಣ್ಣ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಮಹದೇವ್, ಸಬ್‌ಇನ್ಸ್‌ಪೆಕ್ಟರ್ ರಾಜೇಂದ್ರ ಪ್ರಸಾದ್, ಅಧಿಕಾರಿಗಳಾದ ಶಿವರಾಜು, ಕೃಷ್ಣ ಸಿಬ್ಬಂದಿ ಶಿವಮೂರ್ತಿ, ಚಂದ್ರಶೇಖರ್, ವಾಸವಿ ಯುವಜನ ಸಂಘದ ಪದಾಧಿಕಾರಿಗಳು, ಹನೂರು ಟೈಲರ್ ಅಸೋಸಿಯೇಶನ್ ಅಧ್ಯಕ್ಷ ಚಂದ್ರು, ಹನೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳಿದ್ದರು.

ಗುಂಡ್ಲುಪೇಟೆಯಲ್ಲೂ ಸ್ವಾತಂತ್ರ್ಯ ಅಮೃತ ಮಹೋತ್ಸವ



ಗುಂಡ್ಲುಪೇಟೆ, ಆ.13–ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಪಟ್ಟಣದ ದೇವರಾಜ ಅರಸು ಕ್ರೀಡಾಂಗಣದಲ್ಲಿ ಹರ್ ಘರ್ ತಿರಂಗಾ ಜಾಗೃತಿ ಜಾಥಾಕ್ಕೆ ಶಾಸಕ ಸಿ.ಎಸ್. ನಿರಂಜನಕುಮಾರ್ ನೀಡಿದರು.

ಬಳಿಕ ಮಾತನಾಡಿದ ಅವರು, ಭಾರತಕ್ಕೆ ಸ್ವಾತಂತ್ರ ಬಂದು 75 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಮೃತ ಮಹೋತ್ಸವವನ್ನು ಆಚರಣೆ ಮಾಡುತ್ತಿದ್ದು, ಪ್ರತಿಯೊಂದು ಮನೆಯಲ್ಲೂ ತಪ್ಪದೇ ರಾಷ್ಟ್ರಧ್ವಜವನ್ನು ಹಾರಿಸುವುದರೊಂದಿಗೆ ದೇಶದ ಏಕತೆಗೆ ಸಾಕ್ಷಿಯಾಗಿ ಎಂದು ದೇಶದ ಪ್ರಧಾನಿ ನರೇಂದ್ರ ಮೋದಿಯವರು ಕರೆಕೊಟ್ಟಿರುವಂತೆ ಏಕತೆಯನ್ನು ಸಾರಲು ಪ್ರತಿಯೊಬ್ಬ ಪ್ರಜೆಯೂ ಕಂಕಣಬದ್ಧರಾಗಬೇಕು. ಪ್ರತಿಯೊಂದು ಮನೆಯಲ್ಲೂ ತಪ್ಪದೇ ಆ.13,14,15ರಂದು ರಾಷ್ಟ್ರಧ್ವಜ ಹಾರಿಸುವುದರೊಂದಿಗೆ ದೇಶ ಪ್ರೇಮವನ್ನು ಮೆರೆಯಬೇಕು ಎಂದರು.

ಈ ಜಾಥಾದಲ್ಲಿ ವಿವಿಧ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರು ಮತ್ತು ಮುಖಂಡರು ಭಾಗವಹಿಸಿದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರಿನ ಸಮೀಪದ ಚಿಕ್ಕಹುಂಡಿ ಗ್ರಾಮದಲ್ಲಿ ಅಂತಾರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆ ಹಾಗೂ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ ಸುಮಾರು 118 ಜನ ಸದುಪಯೋಗ ಪಡೆದುಕೊಂಡರು.

ಚಾಮರಾಜನಗರ ನಗರಸಭೆ, ಪೊಲೀಸ್ ಇಲಾಖೆಯಿಂದ ಜಾಥಾ

ಚಾಮರಾಜನಗರ, ಆ.13–ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆ.13ರಿಂದ 15ರವರೆಗೆ ಹಮ್ಮಿಕೊಂಡಿರುವ ಹರ್ ಘರ್ ತಿರಂಗಾ ಅಭಿಯಾನ ಕಾರ್ಯಕ್ರಮ ಇಂದು ನಗರದ ವಿವಿಧೆಡೆ ನಡೆಯಿತು.

ಚಾಮರಾಜನಗರ ನಗರಸಭೆಯಿಂದ ಆಯೋಜಿಸಿದ್ದ ಜಾಥಾಗೆ ನಗರಸಭೆ ಅಧ್ಯಕ್ಷೆ ಆಶಾ ನಟರಾಜು ಹಸಿರು ನಿಶಾನೆ ತೋರಿದರು. ಜಾಥಾದಲ್ಲಿ ನಗರಸಭೆಯ ಸದಸ್ಯರು, ಅಧಿಕಾರಿಗಳು, ನೌಕರರು, ಪೌರಕಾರ್ಮಿಕರು ಸೇರಿದಂತೆ ಎಲ್ಲರೂ ತ್ರಿವರ್ಣ ಧ್ವಜ ಹಿಡಿದು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ದೇಶಪ್ರೇಮ ಮೆರೆದರು. ನಗರಸಭೆ ಸದಸ್ಯರಾದ ಶಿವರಾಜು, ಗಾಯತ್ರಿ ಚಂದ್ರಶೇಖರ್, ನೀಲಮ್ಮ ಚಿನ್ನಮ್ಮ, ಭಾಗ್ಯಮ್ಮ, ಮಮತಾ, ಅಬ್ರಾರ್ ಖಲೀಲ್, ಮಹೇಶ್,





ಪ್ರಭಾರ ಪೌರಾಯುಕ್ತ ನಟರಾಜು, ಕಂದಾಯ ಅಧಿಕಾರಿ ಶರವಣ, ಪರಿಸರ ವಿಭಾಗದ ಎಇಇ ಗಿರಿಜಮ್ಮ, ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ಸುಷ್ಮಾ, ಸಮುದಾಯ ಸಂಘಟನಾಧಿಕಾರಿ ವೆಂಕಟ್‌ನಾಯಕ್, ಎಇಗಳಾದ ಆರಾಧ್ಯ, ದೇವರಾಜು, ನಗರಸಭೆ ನೀರು ಸರಬರಾಜು ವಿಭಾಗದ ನೌಕರರು ಜಾಥಾದಲ್ಲಿದ್ದರು.

ಜಿಲ್ಲಾ ಪೊಲೀಸ್ ಇಲಾಖೆ: ಜಿಲ್ಲಾ ಪೊಲೀಸ್ ಇಲಾಖೆಯು ನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಿಂದ ಜಿಲ್ಲಾಡಳಿತ ಭವನದವರೆಗೆ ಜಾಥಾ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಜಿಲ್ಲಾ ಎಸ್ಪಿ ಟಿ.ಪಿ. ಶಿವಕುಮಾರ್, ಎಎಸ್ಪಿ ಕೆ.ಎಸ್.ಸುಂದರ್‌ರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ತ್ರಿವರ್ಣ ಧ್ವಜ ಪ್ರದರ್ಶಿಸಿ ಹರ್ ಘರ್ ತಿರಂಗಾ ಅಭಿಯಾನ ಜಾಥಾಗೆ ಚಾಲನೆ ನೀಡಿದರು. ಪೊಲೀಸ್ ಇಲಾಖೆಯ ನೇತೃತ್ವದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ನಡೆಸಿದ ಜಾಥಾದಲ್ಲಿ ಅರಣ್ಯ, ಅಗ್ನಿ ಶಾಮಕ, ಅಬಕಾರಿ ಹಾಗೂ ಗೃಹರಕ್ಷಕ ದಳದ ಅಧಿಕಾರಿಗಳು ಸಹ ಪಾಲ್ಗೊಂಡಿದ್ದರು.



ಚಾಮರಾಜನಗರ ನಗರದ ಜೋಡಿರಸ್ತೆಯಲ್ಲಿ ಇರುವ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ(ಜಿಲ್ಲಾಸ್ಪತ್ರೆ) ಹಿಂಭಾಗದಲ್ಲಿ ಇರುವ ಸರ್ಕಾರಿ ಶುಶ್ರೂಷಕರ ತರಬೇತಿ ಕೇಂದ್ರದಲ್ಲಿ ಹರ್‌ಘರ್ ತಿರಂಗಾ ಅಭಿಯಾನಕ್ಕೆ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿ ಡಾ.ಮಹೇಶ್ ಚಾಲನೆ ನೀಡಿದರು. ಶುಶ್ರೂಷಕ ತರಬೇತಿ ಆಡಳಿತಾಧಿಕಾರಿ ಡಾ.ಮಹೇಶ್ವರಿ ಗಾಂಧೀಜಿ ಮತ್ತು ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ತರಬೇತಿ ಸಂಸ್ಥೆ ಪ್ರಾಂಶುಪಾಲ ಕುದರತ್‌ವುಲ್ಲಾ ಮಾತನಾಡಿದರು. ವೇದಿಕೆಯಲ್ಲಿ ಉಪ ಪ್ರಾಂಶುಪಾಲೆ ಗಂಗಮ್ಮ, ಶುಶ್ರೂಷಕಿ ಬೋಧಕಿ ಬಿ.ವಿ.ಪ್ರೇಮ ಇದ್ದರು. ಕಾರ್ಯಕ್ರಮದಲ್ಲಿ ತ್ರಿವರ್ಣ ಧ್ವಜ ಹಿಡಿದು ರಾಷ್ಟ್ರಗೀತೆ ಹಾಡಿ ಎಲ್ಲರೂ ಗೌರವ ಸಲ್ಲಿಸಿದರು.

ಆರ್.ಎಸ್.ವರ್ಧಮಾನ್ಯ ನಿಧನ

ಚಾಮರಾಜನಗರ, ಆ.13– ನಗರದ ಜೈನ ಸಮಾಜದ ಮಾಜಿ ಅಧ್ಯಕ್ಷ ಆರ್.ಎಸ್. ವರ್ಧಮಾನ್ಯ (80) ಅವರು ಶುಕ್ರವಾರ ಮಧ್ಯರಾತ್ರಿ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ ನಗರದ ಆರ್ಯವೈಶ್ಯ ರುದ್ರಭೂಮಿಯಲ್ಲಿ ನಡೆಯಿತು.

'ಹರ್ ಘರ್ ತಿರಂಗಾ'ಗೆ ಜನರಿಂದ ಉತ್ತಮ ಪ್ರತಿಕ್ರಿಯೆ

ಮೈಸೂರು, ಆ.13(ಎಸ್‌ಪಿಎನ್)– ಸ್ವಾತಂತ್ರ್ಯದ 'ಹರ್ ಘರ್ ತಿರಂಗಾ' ಇಂದಿನಿಂದ ಆ.15ರವರೆಗಿನ ಅಭಿಯಾನಕ್ಕೆ ಸಾರ್ವಜನಿಕರಿಂದ ಮೈಸೂರಿನಲ್ಲಿ ಉತ್ತಮ ಪ್ರಕ್ರಿಯೆ ವ್ಯಕ್ತವಾಗಿದೆ. ಬೀದಿ ಬದಿ ವ್ಯಾಪಾರಿಗಳು, ಹೂ ವ್ಯಾಪಾರಿಗಳು, ಸರ್ಕಾರಿ ನೌಕರರು ಹಾಗೂ ವಿದ್ಯಾರ್ಥಿಗಳು ತಮ್ಮ ಮನೆಮನೆಗಳ ಮೇಲೆ ಇಂದು ಬೆಳಗ್ಗೆ 7 ಗಂಟೆಯಿಂದಲೇ ರಾಷ್ಟ್ರಧ್ವಜ ಹಾರಿಸಿ ಸಂಭ್ರಮ ಪಟ್ಟಿದ್ದಾರೆ. ಹೂ ಗಿಡ ಮಾರಾಟ ಮಾಡುತ್ತಿದ್ದ ವ್ಯಾಪಾರಿ ಮಹೇಶ್ ಎಂಬುವವರು ತಮ್ಮ ತಳ್ಳುವಗಾಡಿಗೇ ರಾಷ್ಟ್ರಧ್ವಜ



ಕಟ್ಟಿಕೊಂಡು ವ್ಯಾಪಾರ ಮಾಡುತ್ತಿದ್ದ ದೃಶ್ಯ ಗ್ರಾಹಕರನ್ನು ಸೆಳೆಯುತ್ತಿತ್ತು.

ಮಹೇಶ್, ರಾಮಕೃಷ್ಣನಗರದಲ್ಲಿ ವ್ಯಾಪಾರ ಮಾಡುತ್ತಿದ್ದ ಸಂದರ್ಭದಲ್ಲಿ 'ಮೈಸೂರು ಮಿತ್ರ' ಈ ಕುರಿತು ಗಮನ ಸೆಳೆದಾಗ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿವೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಎಲ್ಲರೂ ಸಂಭ್ರಮಪಡುತ್ತಿರುವ ದೃಶ್ಯಗಳೂ ಭಿತ್ತರವಾಗುತ್ತಿದೆ. ಅಲ್ಲದೆ, ಎಲ್ಲಾ ವ್ಯಾಪಾರಿಗಳು, ತಮ್ಮ ಅಂಗಡಿಗಳ ಮುಂದೆ ರಾಷ್ಟ್ರಧ್ವಜವನ್ನು ಹಾರಿಸಿ, ಸಂಭ್ರಮ ಪಡುತ್ತಿದ್ದಾರೆ. ಇದರಿಂದ ಪ್ರೇರಿತನಾಗಿ ನನ್ನ ಗಾಡಿಗೂ ರಾಷ್ಟ್ರಧ್ವಜವನ್ನು ಇಂದು(ಶನಿವಾರ) ಬೆಳಗ್ಗಿನಿಂದಲೇ ಕಟ್ಟಿಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ಇದರಿಂದ ಎಲ್ಲಾ ಗ್ರಾಹಕರು ಆಕರ್ಷಿತರಾಗಿ, ಈ ಕುರಿತು ನನ್ನನ್ನು ವಿಚಾರಿಸಿ, ಶುಭಾಶಯ ತಿಳಿಸುತ್ತಿದ್ದಾರೆ. ಈ ರೀತಿ ಎಲ್ಲರೂ ವಿಶೇಷ ಗೌರವ ನೀಡಿ, ವ್ಯಾಪಾರ ಮಾಡಲು ಮುಂದಾಗುತ್ತಿರುವುದು ಮನಸ್ಸಿಗೆ ಸಂತೋಷವಾಗುತ್ತಿದೆ ಎಂದು ತಿಳಿಸಿದರು.

ಇಂದು ರೈತ ವಿಕಾಸ ಸಂಗಮ

ಮೈಸೂರು, ಆ.13– 'ರೈತ ವಿಕಾಸ ಸಂಗಮ' ಕಾರ್ಯಕ್ರಮವನ್ನು ಮೈಸೂರಿನ ಅವಧೂತ ದತ್ತ ಪೀಠ, ನ್ಯಾಚುರಿಯಲ್ ಸಂಸ್ಥೆ ಹಾಗೂ ರಾಷ್ಟ್ರೀಯ ಹಿಂದೂ ಸಮಿತಿ ಸಹಯೋಗದೊಂದಿಗೆ ಆ.14ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಈ ಕಾರ್ಯಕ್ರಮದಲ್ಲಿ ನೊಂದಾಯಿತ ರೈತರಿಗೆ ಸಾವಯವ ಕಿಟ್ ನೀಡಲಾಗುವುದು. ಈ ಶಿಬಿರದಲ್ಲಿ ಕೃಷಿ ಇಲಾಖೆ ಆಯುಕ್ತ ಡಾ.ಬಿ.ಶರತ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ ಅವರು, 'ಸಾವಯವ ಕೃಷಿಗೆ ಪೂರಕವಾಗಿ ಸರ್ಕಾರದಿಂದ ದೊರೆಯುವ ಸೌಲಭ್ಯಗಳು' ಕುರಿತು ಮಾಹಿತಿ ನೀಡಲಿದ್ದಾರೆ.

ಕೃಷಿ ವಿವಿಯ ವಿಶ್ರಾಂತ ಕುಲಪತಿ ಡಾ.ಕೆ.ನಾರಾಯಣಗೌಡ , ತೋಟಗಾರಿಕೆ ಇಲಾಖೆಯ ಅಪರ ತೋಟಗಾರಿಕೆ ನಿರ್ದೇಶಕ ಡಾ.ವಿ.ಹಿತ್ತಲಮನಿ, ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಡಾ.ಪಿ.ಪ್ರಕಾಶ್, ನಿವೃತ್ತ ಐಎಎಸ್ ಅಧಿಕಾರಿ ಕೃಷ್ಣಪ್ರಸಾದ್, ಸಾವಯವ ಕೃಷಿಕ ನವೀನ್ ಕುಮಾರ್, ದಿಲೀಪ್, ಹರ್ಷ, ಅಕ್ಷಯ್ ಮತ್ತು ತಂಡದವರು ವಿವಿಧ ವಿಷಯಗಳ ಕುರಿತು ಮಾತನಾಡಲಿದ್ದಾರೆ ಎಂದು ರಾಷ್ಟ್ರೀಯ ಹಿಂದೂ ಸಮಿತಿ ಅಧ್ಯಕ್ಷ ವಿಕಾಸ ಶಾಸ್ತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ತಿರಂಗಾ ಜಾಥಾ

ಮೈಸೂರು, ಆ.13– ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಆ.14ರಂದು ಭಾನುವಾರ ರಾತ್ರಿ 10.30ಕ್ಕೆ ಸುಬ್ಬರಾಯನಕೆರೆ (ಶಾಂತಲಾ ಚಿತ್ರಮಂದಿರ) ಆವರಣದಿಂದ ಭಾಜಪ ಪಕ್ಷದ ಕಚೇರಿವರೆಗೂ ತಿರಂಗಾ ಜಾಥಾ ಹಮ್ಮಿಕೊಳ್ಳಲಾಗಿದ್ದು, ಅಂದು ಮಧ್ಯರಾತ್ರಿ 12 ಗಂಟೆಗೆ ಧ್ವಜಾರೋಹಣ ಹಮ್ಮಿಕೊಳ್ಳಲಾಗಿದೆ. ಈ ಜಾಥಾದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭಾಗವಹಿಸಲಿದ್ದು, ಈ ಜಾಥಾವು ಸುಬ್ಬರಾಯನಕೆರೆ ಆವರಣದಿಂದ ಆರಂಭಗೊಳ್ಳಲಿದೆ ಎಂದರು

ಒಂದನೇ ಪುಟದಿಂದ

ಮಹತ್ತರ ಬದಲಾವಣೆ...!

ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ವರಿಷ್ಠರು ಪಕ್ಷ ಮತ್ತು ಸರ್ಕಾರದಲ್ಲಿ ಕೆಲ ಬದಲಾವಣೆಗೆ ಮುಂದಾಗಿದ್ದಾರೆ. ಅದು ಯಾವ ರೀತಿ ಎಂಬುದರ ಬಗ್ಗೆ ಪೂರ್ಣ ಮಾಹಿತಿ ಇಲ್ಲವೇ ಸಂದೇಶವಿಲ್ಲ. ಆದರೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಬಂದ ಸಂದರ್ಭದಲ್ಲಿ ಕೆಲ ಬದಲಾವಣೆಯ ಬಗ್ಗೆ ಸೂಚ್ಯವಾಗಿ ತಿಳಿಸಿದ್ದಾರೆ. ಸಂಪುಟ ಪುನಾರಚನೆಯಾಗುತ್ತದೆಯೋ, ವಿಸ್ತರಣೆಯಾಗುತ್ತದೆಯೋ ಇಲ್ಲವೇ ಖಾತೆಗಳ ಬದಲಾವಣೆಯಾಗುತ್ತದೆಯೋ ನನಗೆ ಏನೂ ತಿಳಿಯದು. ಆದರೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತಿರುವ ಬದಲಾವಣೆಗೆ ನಾವೆಲ್ಲರೂ ತಲೆಬಾಗಬೇಕಾಗುತ್ತದೆ. ಇದಕ್ಕೆ ಸಿದ್ಧರಾಗಬೇಕೆಂದು ಸೂಚ್ಯವಾಗಿ ತಿಳಿಸಿದ್ದಾರೆ. ಮುಖ್ಯಮಂತ್ರಿಯವರೇ ಸ್ವಯಂಪ್ರೇರಿತವಾಗಿ ಇಂತಹ ಹೇಳಿಕೆ ನೀಡಿರುವುದು ಸಚಿವರಲ್ಲಿ ಗೊಂದಲ ನಿರ್ಮಾಣ ಮಾಡಿದೆ. ಆದರೆ ಅವರಿಗೂ ಸ್ಪಷ್ಟತೆ ದೊರೆತಿಲ್ಲ. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯಾಗುತ್ತದೆ ಎಂದು ಪಕ್ಷದ ಒಳಗೆ ಚರ್ಚೆ ನಡೆಯುವ ಸಂದರ್ಭದಲ್ಲೇ ಮುಖ್ಯಮಂತ್ರಿಯವರ ಈ ಹೇಳಿಕೆ ಆಶ್ಚರ್ಯ ತಂದಿದೆ. ಮುಖ್ಯಮಂತ್ರಿಯವರು ಹೇಳುವಂತೆ ಇಡೀ ಸರ್ಕಾರದಲ್ಲಿ ಬದಲಾವಣೆಯಾಗುತ್ತದೆಯೋ ಇಲ್ಲವೇ ಮಂತ್ರಿಮಂಡಲದಲ್ಲಿ ಬದಲಾವಣೆಯಾಗುತ್ತದೆಯೋ ಕಾದು ನೋಡಬೇಕು. ಮುಂದುವರೆದು ಮಾತನಾಡಿದ ಮುಖ್ಯಮಂತ್ರಿಯವರು, ಹೊಸ ಕಾರ್ಯಕ್ರಮದ ಅನುಷ್ಠಾನದ ಬಗ್ಗೆಯು ಪ್ರಸ್ತಾಪ ಮಾಡಿದ್ದಾರೆ. ಬೊಮ್ಮಾಯಿ ಅವರೇ ಸ್ವಯಂಪ್ರೇರಿತವಾಗಿ ಹೇಳಿಕೆ ನೀಡುವ ಮೂಲಕ ರಾಜಕೀಯವಾಗಿದ್ದ ಗೊಂದಲಗಳಿಗೆ ತೆರೆ ಎಳೆದಂತಿದೆ. 28 ರಂದು ನಡೆಯುವ ಜನೋತ್ಸವ ಕಾರ್ಯಕ್ರಮಕ್ಕೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅರುಣ್‌ಸಿಂಗ್ ಸೇರಿದಂತೆ ನಾಯಕರು ಭಾಗವಹಿಸಲಿದ್ದಾರಂತೆ.

ಸಾವಿನ ನಂತರವೂ ಬದುಕಿ

ಬದುಕುವವನು ಸಾಧಕ.ಮಾನವ ಜನ್ಮ ಶ್ರೇಷ್ಠವಾದುದು. ಅಂಗಾಂಗ ದಾನದ ಮೂಲಕ ಈ ಶ್ರೇಷ್ಠ ಜೀವವನ್ನು ಉಳಿಸಿದಂತಾಗುತ್ತದೆ ಎಂದರು. ರಾಜ್ಯದಲ್ಲಿ ಪ್ರಸ್ತುತ 18 ಅಂಗಾಂಗ ಮರು ಪಡೆಯುವಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಿಮಾನ್ಸ್‌ನಲ್ಲಿ ಮೆದುಳು ದಾನ ಹಾಗೂ ಹುಬ್ಬಳ್ಳಿ ಕಿಮ್ಸ್‌ನಲ್ಲಿ ಮೂತ್ರಪಿಂಡ ದಾನಗಳನ್ನು ಮಾಡಬಹುದಾಗಿದೆ. ಇದು ಸರ್ಕಾರದ ದೊಡ್ಡಸಾಧನೆ. ಅಂಗಾಂಗ ದಾನ ಮಾನವೀಯತೆ ಕೆಲಸ ಎಂದರು. ಮಾರ್ಕೋನಹಳ್ಳಿಯ ಕೃಷ್ಣಪ್ಪ, ನವೀನಕುಮಾರ್ ಇವರು ಅತ್ಯಂತ ಬಡಕುಟುಂಬದವರಾಗಿದ್ದು, ಇವರ ಕುಟುಂಬದವರು ಮಗನನ್ನು ಅಪಘಾತದಲ್ಲಿ ಕಳೆದುಕೊಂಡಿದ್ದರೂ, ಅವರ ಅಂಗಾಂಗಗಳನ್ನು ದಾನ ಮಾಡುವ ಮೂಲಕ ದೊಡ್ಡ ಗುಣವನ್ನು ಮೆರೆದಿದ್ದಾರೆ.ಇವರ ಉದಾತ್ತ ಗುಣ ಎಲ್ಲರಿಗೂ ಅನುಕರಣೀಯವಾದುದು ಎಂದರು.

7,000 ಮಂದಿಗೆ ಆಹ್ವಾನ

ಹ್ಯಾಂಡ್ ಬಾಗ್ಸ್, ಕ್ಯಾಮರಾ, ಬೈನಾಕ್ಯೂಲರ್, ಛತ್ರಿಗಳು ಸೇರಿದಂತೆ ಇದೇ ರೀತಿಯ ವಸ್ತುಗಳನ್ನು ಕೆಂಪುಕೋಟೆಯ ಆವರಣದಲ್ಲಿ ನಿಷೇಧಿಸಲಾಗಿದೆ.

ದೆಹಲಿಯಲ್ಲಿ ಸೆಕ್ಷನ್ 144 ಅನ್ನು ಜಾರಿಗೊಳಿಸಲಾಗಿದೆ ಎಂದು ಕಾನೂನು ಮತ್ತು ಸುವ್ಯವಸ್ಥೆಯ ವಿಶೇಷ ಪೊಲೀಸ್ ಆಯುಕ್ತ ದೀಪೇಂದ್ರ ಪಾಠಕ್ ಹೇಳಿದ್ದು ಆಗಸ್ಟ್ 13ರಿಂದ 15ರವರೆಗೆ ಗಾಳಿಪಟ, ಬಲೂನ್ ಅಥವಾ ಚೀನಾದ ಲ್ಯಾಂಟರ್ನ್‌ಗಳನ್ನು ಹಾರಿಸುವುದು ಶಿಕ್ಷಾರ್ಹ ಅಪರಾಧ ಎಂದು ಹೇಳಿದ್ದಾರೆ.

ಯುವ ಜನತೆ ಸನ್ನದ್ಧರಾಗಿ

25 ಲಕ್ಷ ಮನೆಗಳ ಮೇಲೆ ಧ್ವಜ ಹಾರಾಡುತ್ತಿವೆ. ಪ್ರತಿ ಗ್ರಾಮ, ಮನೆಯಲ್ಲಿ ಧ್ವಜ ಹಾರಾಡುತ್ತಿದೆ. ತ್ರಿವರ್ಣದ ಶಕ್ತಿ ಎಲ್ಲರನ್ನು ಒಗ್ಗೂಡಿಸುವ ಶಕ್ತಿ ಭಾರತದ ಶಕ್ತಿ ಇಡೀ ವಿಶ್ವವೇ ಗಮನಿಸುತ್ತಿದೆ ಎಂದರು. ಸ್ವಾತಂತ್ರ್ಯ ಸುಲಭವಾಗಿ ಬಂದಿಲ್ಲ. ಹಲವರ ಹೋರಾಟ, ತ್ಯಾಗ, ಬಲಿದಾನದಿಂದ ಬಂದಿದೆ. ಸಾವಿರಾರು ಜನ ಅನಾಮಧೇಯ ಹೋರಾಟಗಾರರು ಪ್ರಾಣ ತ್ಯಾಗ ಮಾಡಿದ್ದಾರೆ. ಸ್ವಾತಂತ್ರ್ಯ ಎಲ್ಲರ ಹಕ್ಕು. ಹೋರಾಟವೂ ಸಾವಿರಾರು ಅನಾಮಧೇಯರಿಗೆ ಸೇರಿದೆ. ಯಾರದ್ದೇ ಸ್ವತ್ತಲ್ಲ. ಹೋರಾಟದಲ್ಲಿ ಕೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ವಿದ್ಯಾವಂತರು ಎಲ್ಲರೂ ಸೇರಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ದಿವ್ಯ ಇತಿಹಾಸವಿದೆ. ಮೊಟ್ಟ ಮೊದಲು ಸ್ವಾತಂತ್ರ್ಯ ಹೋರಾಟದ ಕಹಳೆಯನ್ನು ಮೊಳಗಿಸಿದ್ದು ಕನ್ನಡ ನಾಡಿನ ಹೆಮ್ಮೆಯ ರಾಣಿ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ. ಸ್ವಾತಂತ್ರ್ಯಕ್ಕಾಗಿ ಪ್ರಾಣ ಕೊಟ್ಟವರು ರಾಜ್ಯದಲ್ಲಿ ಇದ್ದಾರೆ. ಮೈಲಾರ ಮಹಾದೇವಪ್ಪ ಬ್ರಿಟಿಷರ ಗುಂಡಿಗೆ ಬಲಿಯಾದರು. ಸಾಹುಕಾರ ಚೆನ್ನಯ್ಯ ಅವರನ್ನು ನೆನಪಿಡಬೇಕು. ಇತಿಹಾಸದಲ್ಲಿದ್ದವರು ಭಾರತದ ಭವಿಷ್ಯ ಬರೆದಿದ್ದಾರೆ ಎಂದರು. ಪ್ರಧಾನಮಂತ್ರಿ ನರೇಂದ್ರಮೋದಿ ಅವರು ದೇಶವನ್ನು ದಕ್ಷತೆಯಿಂದ ನಡೆಸುತ್ತಿದ್ದಾರೆ. ಧೀಮಂತ ನಾಯಕರಾದ ಅವರು ಸಶಕ್ತ, ಸಂಪದ್ಭರಿತ ಭಾರತ ಕಟ್ಟಲು ಶ್ರಮಿಸುತ್ತಿದ್ದಾರೆ. ಆತ್ಮನಿರ್ಭರ ಭಾರತ ಎಂದು ಕರೆ ಕೊಟ್ಟಿದ್ದಾರೆ. ರೈತರು, ವಿದ್ಯಾರ್ಥಿಗಳು, ಬಡವರು, ಮಹಿಳೆಯರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್,ಸಬ್ ಕಾ ಪ್ರಯಾಸ್' ಎಂಬುದು ಪ್ರಧಾನಮಂತ್ರಿಯವರ ಮೂಲಮಂತ್ರ. ಸ್ವಾತಂತ್ರ್ಯೋತ್ಸವ 75 ವರ್ಷಗಳ ಮುಂದಿನ 25 ವರ್ಷದ ಅಮೃತ ಕಾಲದಲ್ಲಿ ವಿಶ್ವದಲ್ಲಿ ಭಾರತವನ್ನು ಶ್ರೇಷ್ಠವಾಗಿಸುವ ಜವಾಬ್ದಾರಿ ನಮ್ಮೆಲ್ಲ ಯುವಕರ ಮೇಲಿದೆ. ಇದು ನಮ್ಮ ಬದ್ಧತೆ ಮತ್ತು ಸಂಕಲ್ಪ. ಸಮಬಾಳಿನ, ಸಮಪಾಲಿನ ಭಾರತ ನಿರ್ಮಾಣದ ಸಂಕಲ್ಪ ಮಾಡಬೇಕೆಂದು ಯುವಕರಿಗೆ ಕರೆ ನೀಡಿದರು.

ಶಾರದಾ ವಿಲಾಸ ಕಾಲೇಜಿನಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ

ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ; ವಿಶೇಷ ಉಪನ್ಯಾಸ

ಮೈಸೂರು,ಆ.13(ಪಿಎಂ)– ಶಾರದಾ ವಿಲಾಸ ಕಾಲೇಜು ವತಿಯಿಂದ ಶುಕ್ರವಾರ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಲಾಯಿತಲ್ಲದೆ, ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು.

ಸ್ವಾತಂತ್ರ್ಯ ಹೋರಾಟ, ಮೈಸೂರು ಚಲೋ ಚಳುವಳಿ ಹಾಗೂ ಗೋವಾ ವಿಮೋಚನೆ ಚಳುವಳಿಯಲ್ಲಿ ಭಾಗವಹಿಸಿದ್ದ ಮೈಸೂರಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ವೈ.ಸಿ.ರೇವಣ್ಣ, ಎಂ.ಬಿ.ಹಾಲೇಗೌಡ, ಸಿ.ಆರ್.ರಂಗಶೆಟ್ಟಿ ಡಾ.ಎಂ.ಸೋಮಶೇಖರಯ್ಯ, ಬಿ.ಲಿಂಗಯ್ಯ, ಟಿ.ಪುಟ್ಟಣ್ಣ ಹಾಗೂ ನಿವೃತ್ತ ಕರ್ನಲ್ ರವಿಶಿರಹಟ್ಟಿ ಅವರನ್ನು ಸನ್ಮಾನಿಸಲಾಯಿತು.

ಬಳಿಕ ಮಾತನಾಡಿದ ನಿವೃತ್ತ ಕರ್ನಲ್ ರವಿ ಶಿರಹಟ್ಟಿ, ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪು ಮಾಡಿಕೊಂಡು ಇಂದಿಲ್ಲಿ ಗೌರವಿಸಿರುವುದೂ ಒಂದು ರೀತಿಯ ದೇಶ ಸೇವೆಯೇ ಆಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ದೇವಿಕಾ ಮಾತನಾಡಿ, ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನದಿಂದ ನಾವಿಂದು ಸ್ವಾತಂತ್ರ್ಯದ



ಮೈಸೂರಿನ ಶಾರದಾವಿಲಾಸ ಕಾಲೇಜಿನಲ್ಲಿ ಶುಕ್ರವಾರ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಲಾಯಿತು.

ಸುಖವನ್ನು ಅನುಭವಿಸುತ್ತಿದ್ದೇವೆ. ಜಾತಿ, ಧರ್ಮ, ಭಾಷೆ, ಲಿಂಗ, ಪ್ರಾಂತೀಯತೆ ಮೀರಿದ ಈ ಸ್ವಾತಂತ್ರ್ಯ ಹೋರಾಟದಲ್ಲಿ ಸಂಕುಚಿತತೆ ಮೀರಿ ಒಗ್ಗಟ್ಟು ಪ್ರದರ್ಶಿಸಲಾಯಿತು ಎಂದು ಸ್ಮರಿಸಿದರು. ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಆಡಳಿತ ಮಂಡಳಿ ಸದಸ್ಯರಾದ ಎಸ್.ಎಲ್.ರಾಮಚಂದ್ರ, ನರಸಿಂಹ ಮತ್ತಿತರರು ಹಾಜರಿದ್ದರು.

ವಿಶೇಷ ಉಪನ್ಯಾಸ: ಬಳಿಕ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮೈಸೂರು ವಿವಿ ಇತಿಹಾಸ ಪ್ರಾಧ್ಯಾಪಕ ಪ್ರೊ.ಆರ್.ರಾಜಣ್ಣ ಉಪನ್ಯಾಸ ನೀಡಿದರು. 1857ರಿಂದ 1947ರವರೆಗೆ ದೇಶದ ಸ್ವಾತಂತ್ರ್ಯ ಹೋರಾಟದ ಹಲವು ಮಜಲುಗಳನ್ನು ವಿದ್ಯಾರ್ಥಿಗಳಿಗೆ ಅವರು ಪರಿಚಯಿಸಿದರು. ಇದರಲ್ಲಿ ಸ್ವಾತಂತ್ರ್ಯ ಪದದ ಅರ್ಥದಿಂದ ಹಿಡಿದು ದೇಶ ಹೇಗೆ ವಿದೇಶಿಯರ ಪಾಲಾಯಿತು. ಸ್ವಾತಂತ್ರ್ಯ ಹೋರಾಟದ ಮಂದಗಾಮಿ, ತೀವ್ರಗಾಮಿ, ಕ್ರಾಂತಿಕಾರಿ ಹಾಗೂ ಗಾಂಧಿಯುಗದ ವೈಶಿಷ್ಟ್ಯಗಳನ್ನು ಅನಾವರಣಗೊಳಿಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್‌ನ ಪಾತ್ರ ಅದರ ಅಧಿವೇಶನಗಳು, ಪೂರ್ಣ ಸ್ವರಾಜ್ಯದ ಕಲ್ಪನೆ, ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಬಗ್ಗೆ ವಿವರಿಸಿದರು. ಮೈಸೂರು ಪ್ರಾಂತದ ಈಸೂರು ದುರಂತ, ಶಿವಪುರದ ಧ್ವಜ ಸತ್ಯಾಗ್ರಹ, ವಿದುರಾಶ್ವತ್ಥ ದುರಂತ ಹಾಗೂ ಗಣಪತಿ ಗಲಾಟೆ ಬಗ್ಗೆ ವಿಶೇಷವಾಗಿ ಬಣ್ಣಿಸಿದರು. ಅಲ್ಲದೆ, ಕಾಲೇಜಿನ ಆವರಣದಲ್ಲಿ ಪ್ರೊ.ಆರ್.ರಾಜಣ್ಣ ಗಿಡ ನೆಟ್ಟರು. ಪ್ರಾಂಶುಪಾಲರಾದ ಡಾ.ಎಂ.ದೇವಿಕಾ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಸೈಕಲ್ ಜಾಥಾ: ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಶನಿವಾರ ಬೆಳಗ್ಗೆ ಕಾಲೇಜು ವತಿಯಿಂದ ಸೈಕಲ್ ಜಾಥಾ ನಡೆಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ದೇವಿಕಾ ಸೇರಿದಂತೆ ಕಾಲೇಜಿನ ಬೋಧಕ ಮತ್ತು ಬೋಧಕೇತರರ ವರ್ಗದವರು ಹಾಗೂ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು. ನಗರದ ಪ್ರಮುಖ ರಸ್ತೆಗಳಲ್ಲಿ ಜಾಥಾ ಸಾಗಿತು.

'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ

ಮೈಸೂರು ವಾರಿಯರ್ಸ್, ಹುಬ್ಬಳ್ಳಿ ಟೈಗರ್ಸ್‌ಗೆ ಅಮೋಘ ಜಯ

ಮೈಸೂರು, ಆ.13(ಎಂಕೆ)– ಇಲ್ಲಿನ ಮಾನಸ ಗಂಗೋತ್ರಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಅಂಗಳದಲ್ಲಿ ಶನಿವಾರ ನಡೆದ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯಲ್ಲಿ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ ಹಾಗೂ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಮೈಸೂರು ವಾರಿಯರ್ಸ್ ಜಯ ಸಾಧಿಸಿದೆ.

ಮೈಸೂರು ವಾರಿಯರ್ಸ್‌ಗೆ ಜಯ: ಪವನ್ ದೇಶಪಾಂಡೆ ಅವರ ಆಕರ್ಷಕ ಅರ್ಧಶತಕ ಹಾಗೂ ಶುಭಾಂಗ್ ಹೆಗ್ಡೆ ಅವರ ಆಲ್‌ರೌಂಡ್ ಆಟದ ನೆರವಿನಿಂದ ಮೈಸೂರು ವಾರಿಯರ್ಸ್ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ 6 ರನ್‌ಗಳ ಅಮೋಘ ಜಯ ಸಾಧಿಸಿದೆ.

ಶನಿವಾರ ಸಂಜೆ ನಡೆದ ಮತ್ತೊಂದು ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 171 ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕರುಣ್ ನಾಯರ್ ಕೇವಲ 1 ರನ್‌ಗೆ ಔಟಾಗುವ ಮೂಲಕ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ಈ ವೇಳೆ ಒಂದಾದ ನಿಹಾಲ್ ಉಳ್ಳಾಲ್ ಹಾಗೂ ಪವನ್ ದೇಶಪಾಂಡೆ 2ನೇ ವಿಕೆಟ್‌ಗೆ 59 ರನ್ ಜೊತೆಯಾಟವಾಡುವ ಮೂಲಕ ತಂಡವನ್ನು ಆರಂಭಿಕ ಆಘಾತದಿಂದ ಪಾರು ಮಾಡಿದರು. ಈ ವೇಳೆ 23 ರನ್ ಗಳಿಸಿದ್ದ ಉಳ್ಳಾಲ್ ವಿಕೆಟ್ ಒಪ್ಪಿಸಿದರು.



ಅರ್ಧಶತಕದ ಸಂಭ್ರಮದಲ್ಲಿ ಪವನ್ ದೇಶಪಾಂಡೆ

ಮತ್ತೊಂದೆಡೆ 2 ಸಿಕ್ಸರ್, 7 ಬೌಂಡರಿ ಒಳಗೊಂಡ 55 ರನ್ ಗಳಿಸಿದ್ದ ಪವನ್ ದೇಶಪಾಂಡೆ ಕೂಡ ವಿಕೆಟ್ ಒಪ್ಪಿಸಿ ನಿರ್ಗಮಿಸಿದರು. ನಂತರ ಬಂದ ಶುಭಾಂಗ್ ಹೆಗಡೆ 33, ಶ್ರೇಯಸ್ ಗೋಪಾಲ್ 27, ಶಿವರಾಜ್ 13, ಲೋಚನ್ ಅಯ್ಯಪ್ಪ 10 ರನ್ ಗಳಿಸಿದರು. ಬೆಂಗಳೂರು ಪರ ಪ್ರದೀಪ್ ಟಿ 2, ಆರ್.ಮೋರೆ, ಎಲ್.ಆರ್.ಕುಮಾರ್ ಹಾಗೂ ರಿಷಿ ಬೋಪಣ್ಣ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು.

172 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬೆಂಗಳೂರು ಬ್ಲಾಸ್ಟರ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 165ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಅನಿಶ್ 48, ಶಿವಕುಮಾರ್ ರಕ್ಷಿತ್ 34, ಅನಿರುದ್ಧ ಜೋಷಿ 29 ರನ್ ಗಳಿಸಿದರು. ಮೈಸೂರು ಪರ ಆದಿತ್ಯ ಗೋಯಲ್ 3, ವಿದ್ಯಾಧರ ಪಾಟೀಲ್, ಶ್ರೇಯಸ್ ಗೋಪಾಲ್ ತಲಾ 2, ಶುಭಾಂಗ್ ಹೆಗಡೆ 1 ವಿಕೆಟ್ ಕಬಳಿಸಿದರು. ಪಂದ್ಯದಲ್ಲಿ ಆಲ್‌ರೌಂಡ್ ಆಟ ಪ್ರದರ್ಶಿಸಿದ ಶುಭಾಂಗ್ ಹೆಗಡೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಹುಬ್ಬಳ್ಳಿ ಟೈಗರ್ಸ್ ಜಯ: ಮೊಹಮ್ಮದ್ ತಾಹ ಅವರ ಅರ್ಧಶತಕ ಹಾಗೂ ವಿ.ಕೌಶಿಕ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ 6 ವಿಕೆಟ್‌ಗಳ ಜಯ ಗಳಿಸಿದೆ.

ಶನಿವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ 134 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ ಇನ್ನೂ 16 ಎಸೆತ ಬಾಕಿ ಇರುವಂತೆಯೇ 17.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ತಂಡದ ಪರ ಮೊಹಮ್ಮದ್ ತಹಾ 49 ಎಸೆತಗಳಲ್ಲಿ 11 ಬೌಂಡರಿ, 2 ಸಿಕ್ಸರ್ ಒಳಗೊಂಡ ಅಜೇಯ 78, ಶ್ರೀನಿವಾಸ್ ಶರತ್ 41 ರನ್ ಗಳಿಸುವ ಮೂಲಕ ತಂಡಕ್ಕೆ ಜಯ ತಂದಿತ್ತರು. ಶಿವಮೊಗ್ಗ ಪರ ಕೃಷ್ಣಪ್ಪ ಗೌತಮ್, ಉತ್ತಮ್ ಐಯ್ಯಪ್ಪ, ಸ್ಟಾಲಿನ್ ಹೂವರ್ ಹಾಗೂ ಡಿ.ಅವಿನಾಶ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ಸ್ಟ್ರೈಕರ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 133 ರನ್ ಗಳಿಸಿತು. ತಂಡದ ಪರ ಕೃಷ್ಣಮೂರ್ತಿ ಸಿದ್ಧಾರ್ಥ್ 62, ಡಿ.ಅವಿನಾಶ್ 41, ವಿನಯ್ ಸಾಗರ್ 13 ರನ್ ಗಳಿಸಿದ್ದು ಬಿಟ್ಟರೆ ಉಳಿದವರಿಂದ ನಿರೀಕ್ಷಿತ ಆಟ ಮೂಡಿ ಬರಲಿಲ್ಲ. ಹುಬ್ಬಳ್ಳಿ ಪರ ವಾಸುಕಿ ಕೌಶಿಕ್ 3, ನಾಯಕ ಅಭಿಮನ್ಯು ಮಿಥುನ್ 2, ನವೀನ್ 1 ವಿಕೆಟ್ ಪಡೆದರು. ಮೊಹಮ್ಮದ್ ತಹಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಜೆಎಸ್‌ಎಸ್ ಆಸ್ಪತ್ರೆ ಮುಂಭಾಗ ಸ್ವಾತಂತ್ರ್ಯೋತ್ಸವ

ಮೈಸೂರು, ಆ.13– ಶ್ರೀ ಶಿವರಾತ್ರೀಶ್ವರ ಆಟೋಚಾಲಕ ಮಾಲೀಕರ ಸಂಘದ ವತಿಯಿಂದ ಮೈಸೂರು ರಾಮಾನುಜ ರಸ್ತೆಯಲ್ಲಿರುವ ಜೆಎಸ್‌ಎಸ್



ಆಸ್ಪತ್ರೆ ಮುಂಭಾಗ ಆ.14ರಂದು ಮಧ್ಯರಾತ್ರಿ(ಭಾನುವಾರ)12 ಗಂಟೆಗೆ 75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಧ್ವಜಾರೋಹಣ ಹಮ್ಮಿಕೊಳ್ಳಲಾಗಿದೆ.

ಮಾಜಿ ಸೈನಿಕ ರವಿ ಧ್ವಜಾರೋಹಣ ನೆರವೇರಿಸಲಿದ್ದು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಆಂದೋಲನ ದಿನಪತ್ರಿಕೆಯ ರಶ್ಮಿ ಕೋಟಿ, ಬಿಜೆಪಿ ಮುಖಂಡ ಯಶಸ್ವಿ ಸೋಮಶೇಖರ್, ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ಕೌಟಿಲ್ಯ ರಘು, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಕೊರಿಯರ್ ವೆಂಕಟೇಶ್, ಶೋಭಾ ಸುನಿಲ್, ಸೌಮ್ಯ ಉಮೇಶ್, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್, ತೇಜಸ್ವಿ ಕುಮಾರ್ ಹಾಗೂ ಜೆಎಸ್‌ಎಸ್ ಆಸ್ಪತ್ರೆ ಸಿಬ್ಬಂದಿ ವರ್ಗ ಉಪಸ್ಥಿತರಿರುತ್ತಾರೆ ಎಂದು ಆಟೋ ಮಹೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ:91417–35275 ಸಂಪರ್ಕಿಸಬಹುದು.

ಶರಣ ಸಾಹಿತ್ಯ ಸತ್ಯ ಸಂಗತಿಗಳ ಆಧರಿಸಿದೆ

● ಶಾಸಕ ಜಿ.ಟಿ.ದೇವೇಗೌಡ ಅಭಿಮತ ● ಈ ಸಾಹಿತ್ಯವನ್ನು ಯುವಜನತೆಗೆ ತಲುಪಿಸುವ ಹೊಣೆ ನಮ್ಮದು



ಮೈಸೂರು, ಆ.13(ಎಸ್‌ಪಿಎನ್)– ಶರಣರ ವಚನಗಳು ಪ್ರಮುಖ ಸತ್ಯ ಘಟನೆಗಳನ್ನು ಆಧರಿಸಿ ರಚಿತವಾಗಿದ್ದು, ಈ ಸಾಹಿತ್ಯವನ್ನು ಯುವಕರಿಗೆ ತಲುಪಿಸುವ ಹೊಣೆ ನಮ್ಮೆಲ್ಲರ ಕರ್ತವ್ಯ ಎಂದು ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಬಸವ ಭಾರತ ಫೌಂಡೇಷನ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಇಂದಿನ ಆಧುನಿಕ ಸಮಾಜದಲ್ಲಿ ಜಗತ್ತಿನ ಎಲ್ಲಾ ಸಾಹಿತ್ಯಗಳಿಂದಲೂ ವಚನ ಸಾಹಿತ್ಯ ಸತ್ಯ ಘಟನೆಯನ್ನು ಆಧರಿಸಿದ ಸಾಹಿತ್ಯವಾಗಿದ್ದು, ಇದನ್ನು ಯುವ ಪೀಳಿಗೆಗೆ ತಲುಪಿಸುವ ಕೆಲಸವನ್ನು ಸಂಘ–ಸಂಸ್ಥೆಗಳು ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ಸಮಾಜದಲ್ಲಿ ಬಸವಣ್ಣನವರ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗಿದ್ದು, ಹಾಗಾಗಿ ಶರಣ ಸಾಹಿತ್ಯವನ್ನು ಹೆಚ್ಚಿನ ಅಧ್ಯಯನಕ್ಕೆ ಆದ್ಯತೆ ನೀಡಬೇಕು. ಇದರಿಂದ ಸಮಾಜ ಸ್ವಾಸ್ಥ್ಯ ಕಾಪಾಡಲು ಅನುವಾಗುತ್ತದೆ ಎಂದರು.

ಕರ್ನಾಟಕದಲ್ಲಿ ತ್ರಿವಿಧ ದಾಸೋಹಕ್ಕೆ ಮಠ–ಮಾನ್ಯಗಳು ಸಾಕಷ್ಟು ಕೊಡುಗೆ ನೀಡಿವೆ. ಈ ನಿಟ್ಟಿನಲ್ಲಿ ಸುತ್ತೂರು ಹಾಗೂ ಸಿದ್ದಗಂಗಾ ಮಠ ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅಪಾರ. ಇದಕ್ಕೆ ಪೂರಕವಾಗಿ ಸಂಘ–ಸಂಸ್ಥೆಗಳು ಯುವಕರಲ್ಲಿ ಮೌಲ್ಯಯುತ ಸಮಾಜ ನಿರ್ಮಿಸಲು ಬಸವ ಭಾರತ ಫೌಂಡೇಷನ್‌ನ ಪದಾಧಿಕಾರಿಗಳು ಮುಂದಾಗಬೇಕು ಎಂದು ಸಲಹೆ ನೀಡಿದರು.

ಈ ವೇಳೆ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸಲಾಯಿತು. ಈ ವೇಳೆ ಬಸವ ಕೇಂದ್ರದ ಬಸವಯೋಗಿ ಪ್ರಭುಸ್ವಾಮೀಜಿ, ಚಾಮರಾಜನಗರದ ಮೂಡುಗೂರು ಮಠದ ಇಮ್ಮಡಿ ಉದ್ದಾನ ಸ್ವಾಮೀಜಿ, ನಂಜನಗೂಡು ಶರಣ ಸಂಸ್ಕೃತಿ ಪ್ರಸಾರ ಕೇಂದ್ರದ ಅಧ್ಯಕ್ಷ ಕಾ.ಸು. ನಂಜಪ್ಪ, ತುಮಕೂರು ಇಂದಿರಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ರೀಟಾ ಬಸವ ತತ್ವ ಪ್ರಚಾರಕ ಚೌಹಳ್ಳಿ ಲಿಂಗರಾಜಣ್ಣ, ಹಲ್ಲರೆ ಶಿವಬುದ್ಧಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್, ದೇವರಾಜು ಪಿ.ಚಿಕ್ಕಹಳ್ಳಿ ಉಪಸ್ಥಿತರಿದ್ದರು.



ಸ್ವಾತಂತ್ರ್ಯೋತ್ಸವ ಅಮೃತೋತ್ಸವದ ಹಿನ್ನೆಲೆಯಲ್ಲಿ 'ಹರ್ ಘರ್ ತಿರಂಗ' ಕಾರ್ಯಕ್ರಮದ ಅಂಗವಾಗಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸದಸ್ಯರಿಗೆ ನಗರ ಬಿಜೆಪಿ ವತಿಯಿಂದ ತ್ರಿವರ್ಣ ಧ್ವಜ ವಿತರಿಸಲಾಯಿತು. ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅವರಿಗೆ ಬಿಜೆಪಿ ನಗರ ವಕ್ತಾರ ಮೋಹನ್ ತ್ರಿವರ್ಣ ಧ್ವಜ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್ ಎಂಎಲ್ಸಿ ಸಿ.ಎನ್.ಮಂಜೇಗೌಡ, ಬಿಜೆಪಿ ಮಾಧ್ಯಮ ಸಂಚಾಲಕರಾದ ಮಹೇಶ್ ರಾಜೇ ಅರಸ್, ಎನ್.ಪ್ರದೀಪ್, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಮಾಜಿ ಅಧ್ಯಕ್ಷರಾದ ಸಿ.ಕೆ.ಮಹೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಇಂದು ಚಿತ್ರಕಲಾ ಪ್ರದರ್ಶನ

ಮೈಸೂರು, ಆ.13– ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರ ಚಿತ್ರಕಲಾ ಪ್ರದರ್ಶನ ಹಾಗೂ ಅಭಿನಂದನಾ ಸಮಾರಂಭವನ್ನು ಆ.14ರಂದು ಬೆಳಗ್ಗೆ 10.30ಕ್ಕೆ ಮೈಸೂರು ಕಲಾಮಂದಿರ ಆವರಣದ ಸುಚಿತ್ರ ಕಲಾಗ್ಯಾಲರಿಯಲ್ಲಿ ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಲಿದ್ದು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು ಉಪಸ್ಥಿತರಿರುತ್ತಾರೆ.

ಮೈಸೂರಿನಲ್ಲಿ ರಾತ್ರಿ ಗಸ್ತು ನಿರ್ವಹಿಸಿದ ಮಹಿಳಾ ಪೊಲೀಸ್

● ರೌಡಿ ಶೀಟರ್‌ಗಳ ಮನೆಗೆ ಭೇಟಿ, ವಾಹನ ತಪಾಸಣೆ ● ನಗರದಲ್ಲಿ ಇದು ಮೊದಲ ಪ್ರಯೋಗ



ಮೈಸೂರು, ಆ.13(ಎಸ್‌ಬಿಡಿ)– ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಮೈಸೂರಿನ ದೇವರಾಜ ಠಾಣೆ ಮಹಿಳಾ ಸಿಬ್ಬಂದಿ ರಾತ್ರಿ ಗಸ್ತು ನಿರ್ವಹಿಸುವ ಮೂಲಕ ಮಹಿಳೆಯರ ಆತ್ಮಸ್ಥೈರ್ಯ ಹೆಚ್ಚಿಸಿದ್ದಾರೆ.

ದೇವರಾಜ ವಿಭಾಗದ ಎಸಿಪಿ ಶಶಿಧರ್ ಹಾಗೂ ದೇವರಾಜ ಠಾಣೆ ಇನ್‌ಸ್ಪೆಕ್ಟರ್ ದಿವಾಕರ್, ಶನಿವಾರ ರಾತ್ರಿ 9 ಗಂಟೆಯಲ್ಲಿ ಮಹಿಳಾ ಸಿಬ್ಬಂದಿಗೆ ಮಾರ್ಗದರ್ಶನ ನೀಡಿ, ಅವರನ್ನು ರಾತ್ರಿ ಗಸ್ತಿಗೆ ನಿಯೋಜಿಸಿದರು. ಮಹಿಳಾ ಸಬ್‌ಇನ್‌ಸ್ಪೆಕ್ಟರ್ ಲೀಲಾವತಿ ನೇತೃತ್ವದಲ್ಲಿ 9 ಮಹಿಳಾ ಸಿಬ್ಬಂದಿ ಕಾರ್ಯಪ್ರವೃತ್ತರಾಗಿ ಪುರುಷ ಸಿಬ್ಬಂದಿ ಮಾದರಿಯಲ್ಲೇ ಸಮರ್ಥವಾಗಿ ಗಸ್ತು ನಡೆಸಿದರು.



ದೇವರಾಜ ಅರಸು ರಸ್ತೆ ಸೇರಿದಂತೆ ಪ್ರಮುಖ ವಾಣಿಜ್ಯ ಪ್ರದೇಶದ ಅಂಗಡಿ ಮುಂಗಟ್ಟುಗಳನ್ನು ನಿಗದಿತ ವೇಳೆಗೆ ಮುಚ್ಚಿಸಿದ ಬಳಿಕ, ಠಾಣಾ ವ್ಯಾಪ್ತಿಯಲ್ಲಿರುವ ಮದ್ಯದಂಗಡಿ, ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಬಂದ್ ಮಾಡಿಸಿದರು. ಕೆ.ಆರ್.ವೃತ್ತ ಇನ್ನಿತರ ಪ್ರಮುಖ ಸ್ಥಳಗಳಲ್ಲಿ ರಾತ್ರಿ 11ರ ನಂತರ ಸಂಚರಿಸುವ ವಾಹನಗಳನ್ನು ತಡೆದು, ಪರಿಶೀಲನೆ ನಡೆಸಿದರು. ಅಷ್ಟೇ ಅಲ್ಲದೆ ರೌಡಿ ಶೀಟರ್‌ಗಳ ಮನೆ ಬಾಗಿಲು ತಟ್ಟಿ ಅವರುಗಳು ಮನೆಯಲ್ಲೇ ಇರುವುದನ್ನು ಖಚಿತಪಡಿಸಿಕೊಂಡರು. ಒಂಟಿಯಾಗಿರುವ ಹಿರಿಯ ನಾಗರಿಕರ ಮನೆಗಳಿಗೆ ಹೋಗಿ ಅವರ ಯೋಗಕ್ಷೇಮ ವಿಚಾರಿಸಿದರು. ಫೋನ್ ಮೂಲಕ ಇ–ಬೀಟ್ ಅಪ್ಲಿಕೇಶನ್ ಬಳಸಿಕೊಂಡು ತಮ್ಮ ಉಪಸ್ಥಿತಿಯನ್ನು ನೋಂದಾಯಿಸಿದರು. ಒಟ್ಟಾರೆ ಪುರುಷ ಸಿಬ್ಬಂದಿ ಸರಿಸಮವಾಗಿ ಕಾರ್ಯ ನಿರ್ವಹಿಸಿದರು.

ಈ ಸಂಬಂಧ ಎಸಿಪಿ ಶಶಿಧರ್ ಪ್ರತಿಕ್ರಿಯಿಸಿ, ಶನಿವಾರ ರಾತ್ರಿ 9ರಿಂದ ಭಾನುವಾರ ಬೆಳಗ್ಗೆ 6 ಗಂಟೆವರೆಗೂ ಮಹಿಳಾ ಸಿಬ್ಬಂದಿ ಬೀಟ್ ನಡೆಸಲಿದ್ದಾರೆ. ರೌಡಿ ಶೀಟರ್‌ಗಳ ಭೇಟಿ, ಸೂಕ್ಷ್ಮ ಪ್ರದೇಶದಲ್ಲಿ ಪರಿಶೀಲನೆ ಸೇರಿದಂತೆ ಬೀಟ್ ವ್ಯವಸ್ಥೆಯ ಪ್ರತಿಯೊಂದು ಕೆಲಸವನ್ನೂ ನಿರ್ವಹಿಸಲಿದ್ದಾರೆ. ಪುರುಷ ಹಾಗೂ ಮಹಿಳಾ ಸಿಬ್ಬಂದಿ ಒಂದೇ ರೀತಿಯ ತರಬೇತಿ ಪಡೆದಿರುತ್ತಾರೆ. ಆದರೆ ಮಹಿಳಾ ಸಿಬ್ಬಂದಿ ಬಹುತೇಕ ಸಮಯ ಠಾಣೆಗಳಲ್ಲೇ ಕರ್ತವ್ಯ ನಿರ್ವಹಿಸುತ್ತಾರೆ. ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಗರದಲ್ಲಿ ಇದೇ ಮೊದಲು ದೇವರಾಜ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಳಾ ಸಿಬ್ಬಂದಿಯನ್ನು ರಾತ್ರಿ ಗಸ್ತಿಗೆ ನಿಯೋಜಿಸಲಾಗಿದೆ. ಇದರಿಂದ ಮಹಿಳೆಯರ ಆತ್ಮಸ್ಥೈರ್ಯವೂ ಹೆಚ್ಚಿದಂತಾಗುತ್ತದೆ. ಪೊಲೀಸ್ ಆಯುಕ್ತರಾದ ಡಾ.ಚಂದ್ರಗುಪ್ತ ಅವರೂ ಈ ಪ್ರಯೋಗಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ನಂಗೂಡಲ್ಲಿ ಪ್ರಯೋಗ ನಡೆದಿತ್ತು: ಕಳೆದ ವರ್ಷ ರಾಷ್ಟ್ರೀಯ ಐಕ್ಯತಾ ಸಪ್ತಾಹ ಹಿನ್ನೆಲೆಯಲ್ಲಿ ನಂಜನಗೂಡು ಉಪವಿಭಾಗದ ಬಿಳಿಗೆರೆ ಠಾಣೆ ಮಹಿಳಾ ಪೊಲೀಸ್ ಅಧಿಕಾರಿಗಳು ಸೇರಿ ಸುಮಾರು 50 ಮಹಿಳಾ ಪೊಲೀಸರು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಆ ವೇಳೆ ಅನುಭವ ಹಂಚಿಕೊಂಡಿದ್ದ ಸಿಬ್ಬಂದಿ, ರಾತ್ರಿ ಬೀಟ್ ನಿರ್ವಹಿಸಿದ್ದರಿಂದ ಆತ್ಮಸ್ಥೈರ್ಯ ಹೆಚ್ಚಿದೆ ಎಂದು ತಿಳಿಸಿದ್ದರು. ಕೆಲ ತಿಂಗಳ ಹಿಂದೆ ಉತ್ತರ ಕನ್ನಡ ಜಿಲ್ಲೆ ಭಟ್ಕಳದಲ್ಲೂ ಮಹಿಳಾ ಪೊಲೀಸರು ರಾತ್ರಿ ಗಸ್ತು ನಿರ್ವಹಿಸಿ, ಸೈ ಎನಿಸಿಕೊಂಡಿದ್ದರು.

ತಿ.ನರಸೀಪುರದಲ್ಲಿ 'ಹರ್ ಘರ್ ತಿರಂಗಾ' ಅಭಿಯಾನಕ್ಕೆ ಚಾಲನೆ

ನಾಗರಿಕರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸಿ: ಮಾಜಿ ಶಾಸಕ ಡಾ.ಎನ್.ಎಲ್.ಭಾರತೀ ಶಂಕರ್ ಮನವಿ



ತಿ.ನರಸೀಪುರ, ಆ.13– ದೇಶದ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಸರ್ಕಾರ ಹಮ್ಮಿಕೊಂಡಿರುವ 'ಹರ್ ಘರ್ ತಿರಂಗಾ' ಅಭಿಯಾನದಡಿ ನಾಗರಿಕರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸುವಂತೆ ಮಾಜಿ ಶಾಸಕ ಡಾ.ಎನ್.ಎಲ್.ಭಾರತೀ ಶಂಕರ್ ಮನವಿ ಮಾಡಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಬಳಿ ಸಾರ್ವಜನಿಕರು ಹಾಗೂ ಅಂಗಡಿ ಮಾಲೀಕರಿಗೆ ರಾಷ್ಟ್ರಧ್ವಜ ವಿತರಿಸುವ ಮೂಲಕ 'ಹರ್ ಘರ್ ತಿರಂಗಾ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಧ್ವಜದೊಂದಿಗಿನ ನಮ್ಮ ಸಂಬಂಧ ಯಾವಾಗಲೂ ವೈಯಕ್ತಿಕಕ್ಕಿಂತ ಹೆಚ್ಚು ಔಪಚಾರಿಕ ಮತ್ತು ಸಾಂಸ್ಥಿಕವಾಗಿದೆ ಎಂದರು.

ಲಕ್ಷಾಂತರ ದೇಶಭಕ್ತರ ಬಲಿದಾನದಿಂದ 1947ರಲ್ಲಿ ದೊರಕಿದ ಸ್ವಾತಂತ್ರ್ಯ ಇಂದು 75ನೇ ವರ್ಷದ ಪ್ರಬುದ್ಧ ಹಂತಕ್ಕೆ ತಲುಪಿದೆ. 1962ರಲ್ಲಿ ದೇಶದ ಸೈನಿಕರಿಗೆ ಯಾವುದೇ ಯುದ್ಧ ಸಲಕರಣೆಗಳು ಇಲ್ಲದ ವೇಳೆ ಚೀನಾ ನಮ್ಮ ದೇಶದ ಮೇಲೆ ದಾಳಿ ಮಾಡಿ ಹಲವು ಭಾಗಗಳನ್ನು ವಶಪಡಿಸಿಕೊಂಡಿತು. 1965ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಕರೆ ನೀಡಿದ 'ಜೈ ಜವಾನ್ ಜೈ ಕಿಸಾನ್' ಘೋಷಣೆ ಮೂಲಕ ನಮ್ಮ ದೇಶದ ಸೈನಿಕರು ಪಾಕಿಸ್ತಾನ ಸೈನ್ಯವನ್ನು ಲಾಹೋರ್‌ವರೆಗೂ ಹಿಮ್ಮೆಟ್ಟಿಸಿದ ಹಿನ್ನೆಲೆಯಲ್ಲಿ ಶಾಂತಿ ಒಪ್ಪಂದವಾಯಿತು. ನಂತರ ಕೃಷಿ, ಕ್ಷೀರ ಕ್ರಾಂತಿ ನಡೆದು ಮೋದಿ ಯವರಂತಹ ಸದೃಢ ನಾಯಕರು ಸಿಕ್ಕಿದ್ದರಿಂದ ಇಂದು ಭಾರತ ವಿಶ್ವ ಗುರು ವಾಗಲು ಹೊರಟಿದೆ. ಮೋದಿಯವರ ನಾಯಕತ್ವದಿಂದ ರಕ್ಷಣಾ ಸಾಮರ್ಥ್ಯದಲ್ಲಿ ಭಾರತ ಅಮೆರಿಕಾ, ಚೀನಾ, ರಷ್ಯಾದ ನಂತರದ ನಾಲ್ಕನೇ ಸ್ಥಾನದಲ್ಲಿದೆ. ಆರ್ಥಿಕ ಶಕ್ತಿಯಲ್ಲಿ ಅಮೆರಿಕಾ, ಚೀನಾ ನಂತರ 3ನೇ ಅತಿ ದೊಡ್ಡಶಕ್ತಿಯಾಗಿ ಹೊರಹೊಮ್ಮಿದೆ. ಮುಂದೆ ದೇಶದಲ್ಲಿ ಎಲ್ಲಾ ಜನರು ಸಾಮರಸ್ಯದಿಂದ ಬದುಕುವಂತಹ ವಾತಾವರಣ ಬರಲಿದ್ದು, ಇದಕ್ಕೆ ಸುವರ್ಣ ಅಮೃತ ಮಹೋತ್ಸವ ನಾಂದಿಯಾಗಲಿ ಎಂದರು.

ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಕೆ.ನಂಜುಂಡಸ್ವಾಮಿ, ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಎಸ್‌ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ಜಿಲ್ಲಾ ಕಾರ್ಯದರ್ಶಿ ಕೆ.ಎಸ್.ಬಸವರಾಜು, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಗ್ರಾಪಂ ಮಾಜಿ ಸದಸ್ಯ ಮಿಥುನ್, ಹೋಟೆಲ್ ರಾಜಣ್ಣ, ಮಹದೇವ ಸ್ವಾಮಿ, ಗುರು ಮತ್ತಿತರರಿದ್ದರು.

ಬಿಜೆಪಿ ಯುವ ಮೋರ್ಚಾದಿಂದ ಬೈಕ್ ರ್‍ಯಾಲಿ



ತಿ.ನರಸೀಪುರ, ಆ.13– ಪ್ರಧಾನಿ ಮೋದಿ ಅವರು ಕರೆ ನೀಡಿರುವ 'ಹರ್ ಘರ್ ತಿರಂಗಾ' ಅಭಿಯಾನದಡಿ ಬಿಜೆಪಿ ಯುವ ಮೋರ್ಚಾದಿಂದ ಪಟ್ಟಣದಲ್ಲಿ ಬೈಕ್ ರ್‍ಯಾಲಿ ನಡೆಯಿತು. ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾದ ಬೈಕ್ ರ್‍ಯಾಲಿ ಪ್ರಮುಖ ರಸ್ತೆಗಳಲ್ಲಿ ಸಾಗಿತು. ಬಾವುಟ ಹಿಡಿದ ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು, ದೇಶದ ಪರ ಘೋಷಣೆ ಕೂಗಿ ಜನರಲ್ಲಿ ರಾಷ್ಟ್ರೀಯತೆಯ ಅರಿವು ಮೂಡಿಸಿದರು.

ಮೈಸೂರು ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮಾ ಮಾತನಾಡಿ, ಪ್ರಧಾನಿ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ನಿರ್ದೇಶನದ ಮೇರೆಗೆ ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವದ ಅಂಗವಾಗಿ ದೇಶದ ಪ್ರತಿ ಮನೆಗಳಲ್ಲೂ ರಾಷ್ಟ್ರಧ್ವಜ ಹಾರಿಸುವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು. ಯುವ ಮೋರ್ಚಾ ತಾಲೂಕು ಅಧ್ಯಕ್ಷ ಕುರುಬೂರು ಶಿವಶಂಕರ್ ಮಾತನಾಡಿದರು. ಬೈಕ್ ರ್‍ಯಾಲಿ ಸೋಸಲೆ ಗ್ರಾಮದಲ್ಲಿ ರೈತ ಮತ್ತು ಯೋಧನಿಗೆ ಸನ್ಮಾನಿಸುವ ಮೂಲಕ ಅಂತ್ಯಗೊಂಡಿತು. ಈ ವೇಳೆ ಬಿಜೆಪಿ ಕ್ಷೇತ್ರಾಧ್ಯಕ್ಷ ಲೋಕೇಶ್ ನಾಯಕ್, ತಾಪಂ ಮಾಜಿ ಸದಸ್ಯ ಚಂದ್ರಶೇಖರ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್, ಕಾರ್ಯದರ್ಶಿ ಸಾಮ್ರಾಟ್, ಪುರಸಭಾ ಸದಸ್ಯರಾದ ಲೋಕೇಶ್ ಕಿರಣ್, ದಯಾನಂದ್ ಪಟೇಲ್, ಯುವ ಮೋರ್ಚಾ ಕಾರ್ಯದರ್ಶಿ ನಂದಕುಮಾರ್, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ರಾಜ್ಯ ಕಾರ್ಯಕಾರಣಿ ಸದಸ್ಯ ಮಹದೇವಯ್ಯ, ಸಿದ್ದೇಶ್, ರವೀಂದ್ರಬಾಬು, ಹರೀಶ್, ಸಿದ್ದನಾಯ್ಕ, ತಿರುಮಕೂಡಲು ವಾಸು ಮತ್ತಿತರರಿದ್ದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಹಿನ್ನಲೆ: ಜಾಥಾ



ಸರಗೂರು, ಆ.13– ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ಪಪಂ ಹಾಗೂ ಪಟ್ಟಣದ ವಿವಿಧ ಸಂಘ ಸಂಸ್ಥೆಗಳ ವತಿಯಿಂದ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಅಂಗವಾಗಿ ಪಟ್ಟಣದಲ್ಲಿ 'ಹರ್ ಘರ್ ತಿರಂಗಾ' ಅಭಿಯಾನದಡಿ ಶನಿವಾರ ಜಾಥಾ ನಡೆಯಿತು.

ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ತಹಶೀಲ್ದಾರ್ ಚಲುವರಾಜು, ಪಟ್ಟಣದ ಸಾರ್ವಜನಿಕರಿಗೆ ರಾಷ್ಟ್ರಧ್ವಜದ ಬಗ್ಗೆ ಜಾಗೃತಿ ಮೂಡಿಸಲು ಜಾಥಾ ಹಮ್ಮಿಕೊಳ್ಳಲಾಗಿದೆ. ಅಮೃತ ಮಹೋತ್ಸವ ಅಂಗವಾಗಿ ಪ್ರತಿಯೊಬ್ಬರೂ ತಮ್ಮ ಮನೆ ಮೇಲೆ ರಾಷ್ಟ್ರಧ್ವಜ ಹಾರಿಸಬೇಕು. ಜನರಲ್ಲಿ ದೇಶಭಕ್ತಿ ಮೂಡಿಸುವುದು ಈ ಅಭಿಯಾನದ ಉದ್ದೇಶವಾಗಿದ್ದು, ದೇಶಕ್ಕೆ ಕೊಡುಗೆ ನೀಡಿದವರನ್ನು ಈ ಸಂಧರ್ಭ ನೆನೆಯಬೇಕು ಎಂದರು.

ಜಾಥಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿತು. ಪಟ್ಟಣದ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಜಾಥಾದಲ್ಲಿ ಭಾಗವಹಿಸಿದ್ದರು. ಈ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯ ಶ್ರೀನಿವಾಸ್, ಎಸ್.ಎಲ್.ರಾಜಣ್ಣ, ವೀರೇಶ್, ಚಲುವಕೃಷ್ಣ, ಹೇಮಾವತಿ, ನವೀನ್, ಸ್ವಾಮಿ, ಪುಟ್ಟರಾಜು, ಮುಖ್ಯಾಧಿಕಾರಿ ಬಿ.ಜೆ.ಸತೀಶ್, ಹರೀಶ್, ಮುಜೀಬ್, ಸುನೀಲ್, ಇಂಜಿನಿಯರ್ ಉಷಾ, ತಾಪಂ ಇಓ ಸುಷ್ಮಾ, ಹರೀಶ್, ನಾಗೇಶ್, ಶ್ರವಣದಾಸರೆಡ್ಡಿ, ಮಹೇಶ್ ಕುಮಾರ್, ರಾಮು, ಶಿವಕುಮಾರ್, ಪಳನಿಸ್ವಾಮಿ, ನಾಗರಾಜು ಹಾಗೂ ಸಾರ್ವಜನಿಕರಿದ್ದರು.

ಕೇಸರಿ ಶಾಲನ್ನು ಯಾರಿಗೂ ಗುತ್ತಿಗೆ ಕೊಟ್ಟಿಲ್ಲ

ಬಿಜೆಪಿಗೆ ಶಾಸಕ ಸಾ.ರಾ.ಮಹೇಶ್ ತಿರುಗೇಟು



ಭೇರ್ಯ, ಆ.13– ಹಿಂದೂ ಧರ್ಮದ ಸಂಕೇತವಾದ ಕೇಸರಿ ಶಾಲನ್ನು ಯಾರಿಗೂ ಗುತ್ತಿಗೆ ಕೊಟ್ಟಿಲ್ಲ ಎಂದು ಬಿಜೆಪಿ ಪಕ್ಷಕ್ಕೆ ಶಾಸಕ ಸಾ.ರಾ.ಮಹೇಶ್ ತಿರುಗೇಟು ನೀಡಿದರು.

ಸಾಲಿಗ್ರಾಮ ಪಟ್ಟಣದ ಪೇಟೆ ಬಾಗಿಲಿನಲ್ಲಿ ಶ್ರೀ ಪೇಟೆ ಆಂಜನೇಯಸ್ವಾಮಿ ಯುವಕರ ಬಳಗ ಉದ್ಘಾಟಿಸಿ ಮಾತನಾಡಿದ ಅವರು, ಕೇಸರಿ ಶಾಲನ್ನು ಯಾರು ಹಾಕಿ ಕೊಳ್ಳುತ್ತಾರೋ ಅದು ಅವರಿಗೆ ಸೇರಿದ್ದು, ಬಿಜೆಪಿಯವರು ನಾವು ಮಾತ್ರ ಕೇಸರಿ ಶಾಲು ಹಾಕಿಕೊಳ್ಳುತ್ತೇವೆ ಎನ್ನುತ್ತಾರೆ. ಆದರೆ ಪ್ರಸ್ತುತ ಎಲ್ಲಾ ಜಾತಿ, ಜನಾಂಗದವರು ಕೇಸರಿ ಶಾಲನ್ನು ಹಾಕುತ್ತಾರೆ. ಇದು ನಮ್ಮ ಹಿಂದೂ ಧರ್ಮದ ಸಂಕೇತ. ಇದು ಯಾವುದೇ ಒಂದು ಪಕ್ಷಕ್ಕೆ ಸೀಮಿತವಲ್ಲ ಎಂದ ಅವರು, ಮೊನ್ನೆ ಮೈಸೂರಿನಲ್ಲಿ ನಡೆದ ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನನಗೂ ಕೇಸರಿ ಶಾಲು ಹಾಕಿದ್ದರು ಎಂದರು.

ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ 300ಕ್ಕೂ ಹೆಚ್ಚು ದೇವಾಲಯಗಳನ್ನು ನಿರ್ಮಿಸಿ ಜೀರ್ಣೋದ್ಧಾರ ಮಾಡಿದ್ದೇನೆ. ಹಳ್ಳಿ ಹಳ್ಳಿಯಲ್ಲೂ ವೀರಾಂಜನೇಯ ದೇವಸ್ಥಾನ ಇದೆ. ಆಂಜನೇಯ ಜೀವಂತ ದೇವರು ಎಂದು ನಂಬುತ್ತಾರೆ ಎಂದರು.

ಚುಂಚನಕಟ್ಟೆ ಐತಿಹಾಸಿಕ ಕ್ಷೇತ್ರವಾಗಿದ್ದು, ಶ್ರೀರಾಮ ದೇವಾಲಯದ ಎದುರು 30 ಅಡಿ ಏಕಶಿಲಾ ಶ್ರೀವೀರಾಂಜನೇಯ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಈ ಕ್ಷೇತ್ರ ಮೈಸೂರು ಜಿಲ್ಲೆಗೆ ಪ್ರಸಿದ್ಧಿಯಾಗಿದೆ ಎಂದ ಶಾಸಕರು, ಚುಂಚನಕಟ್ಟೆ ಕ್ಷೇತ್ರ ಪ್ರವಾಸಿತಾಣದ ಜೊತೆಗೆ ಶ್ರೀರಾಮ ಸಕ್ಕರೆ ಕಾರ್ಖಾನೆ ಪುನಾರಂಭವಾದರೆ ಉತ್ತಮ ವ್ಯಾಪಾರ ವಹಿವಾಟು ಕೇಂದ್ರವಾಗಲಿದೆ ಎಂದು ನುಡಿದರು.

ಇದೇ ವೇಳೆ ವೈದ್ಯಾಧಿಕಾರಿ ಡಾ.ದರ್ಶನ್, ಪೊಲೀಸ್ ಇನ್ಸ್‌ಪೆಕ್ಟರ್ ಆರ್.ಶ್ರೀಕಾಂತ್, ಪಿಡಿಓ ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭ ಗ್ರಾಪಂ ಅಧ್ಯಕ್ಷೆ ಸುಧಾ, ಮಾಜಿ ಅಧ್ಯಕ್ಷೆ ದೇವಕಿ, ಗ್ರಾಪಂ ಸದಸ್ಯ ಗೇಟಿ ಪ್ರಕಾಶ್, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಅಲ್ಪ ಸಂಖ್ಯಾತ ಘಟಕದ ಅಧ್ಯಕ್ಷ ಲಾಲೂಸಾಬ್, ಜೆಡಿಎಸ್ ಮುಖಂಡರಾದ ಎಸ್.ಪಿ.ಆನಂದ್, ಸಿ.ಬಿ.ಲೋಕೇಶ್, ಸಹಕಾರ ಸಂಘದ ನಿರ್ದೇಶಕರಾದ ನಾಗೇಂದ್ರ, ಅಶೋಕ್, ಮಂಜುನಾಥ್, ಪಿಡಿಓ ಮಂಜುನಾಥ್, ಸಂಘದ ಅಧ್ಯಕ್ಷ ಕಿರಣ್, ಉಪಾಧ್ಯಕ್ಷ ಕಿಶೋರ್, ಪದಾಧಿಕಾರಿಗಳಾದ ಸಂದೀಪ್, ರಾಕೇಶ್, ಹರ್ಷ, ರಘು, ಮಹೇಂದ್ರ, ಮಧು, ಚೇತನ್, ಸಾಗರ್, ಗಂಗಾಧರ್, ಪವನ್ ಸೇರಿದಂತೆ ಇತರರಿದ್ದರು.

ಮಳೆ: ಹೊಸಹೊಳಲಿಗೆ ಶಾಸಕರ ಭೇಟಿ

ಹಂಪಾಪುರ, ಆ.13– ನಿರಂತರ ಮಳೆಯಿಂದಾಗಿ ಮನೆಗಳು ಹಾನಿಗೀಡಾದ ಹಿನ್ನೆಲೆಯಲ್ಲಿ ತಾಲೂಕಿನ ಹೊಸಹೊಳಲು ಗ್ರಾಮಕ್ಕೆ ಶಾಸಕ ಅನಿಲ್ ಚಿಕ್ಕಮಾದು ಸೇರಿದಂತೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮದಲ್ಲಿ 3 ಹೆಂಚಿನ ಮನೆಗಳು ಕುಸಿದು, 15 ಮನೆಗಳು ಶಿಥಿಲಗೊಂಡಿದ್ದವು. ಈ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು, ತಾರಕ ಜಲಾಶಯದ ಕಾರ್ಯಪಾಲಕ ಅಭಿಯಂತರ ರಾಮೇಗೌಡ, ಹೊಸಹೊಳಲು ಗ್ರಾಪಂ ಅಧ್ಯಕ್ಷೆ ಯಶೋಧ, ಪಿಡಿಓ ರಮೇಶ್ ಶಿರಾ, ಕಾಂಗ್ರೆಸ್ ಮುಖಂಡ ಭೈರೇಗೌಡ ಸ್ಥಳಕ್ಕೆ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಶಾಸಕರು, ನಮ್ಮ ಸರ್ಕಾರ ಬಂದ ನಂತರ ಸಂಕಷ್ಟದಲ್ಲಿರುವ ಕುಟುಂಬಗಳನ್ನು ಗ್ರಾಮದ ಡೈರಿ ಎದುರಿನ ಗ್ರಾಪಂಗೆ ಸೇರಿದ ಖಾಲಿ ನಿವೇಶನಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ನಿವಾಸಿಗಳಾದ ಶ್ರೀನಿವಾಸ್ ಹಾಗೂ ನಾಗರಾಜು ಮಾತನಾಡಿ, ಮನೆಗಳು ಕುಸಿಯುವ ಹಂತದಲ್ಲಿದ್ದು, ನಿಮ್ಮ ಸರ್ಕಾರ ಬರುವವರೆಗೆ ಕಾಯಲು ಸಾಧ್ಯವಿಲ್ಲ. ನಾವು ಕಳೆದ 50 ವರ್ಷಗಳಿಂದ ಇದೇ ಸ್ಥಿತಿಯಲ್ಲಿದ್ದೇವೆ. ಕೂಡಲೇ ಬದಲಿ ವ್ಯವಸ್ಥೆ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ರಸ್ತೆ, ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ



ನಂಜನಗೂಡು, ಆ.13– ನನ್ನ ಅಧಿಕಾರವಧಿಯಲ್ಲಿ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದ ಮತದಾರರ ಬಳಿ ಮತಯಾಚಿಸುತ್ತೇನೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ತಾಲೂಕಿನ ಹರತಲೆ ಗ್ರಾಮದಲ್ಲಿ ಎಂಜಿಎಸ್‌ವೈ ಯೋಜನೆಯಡಿ 160 ಕೋಟಿ ರೂ. ವೆಚ್ಚದಲ್ಲಿ ಹರತಲೆ ಗ್ರಾಮದಿಂದ ಮೊಬ್ಬಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಹಾಗೂ ಲ್ಯಾಂಡ್ ಆರ್ಮಿ ಇಲಾಖೆಯ 10 ಲಕ್ಷ ವೆಚ್ಚದ ಬಣಜಿಗ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಶಾಸಕನಾದ ಬಳಿಕ 600 ಕೋಟಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕಳೆದ 4 ವರ್ಷಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತಹ ಕಾಂಕ್ರೀಟ್ ರಸ್ತೆ, ಚರಂಡಿ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸುತ್ತೇನೆ ಎಂದರು.

ನಮ್ಮ ಸರ್ಕಾರದಿಂದ ಗ್ರಾಮೀಣ ಮಹಿಳಾ ಸ್ವಸಹಾಯ ಸಂಘಗಳಿಗೆ ನೇರ ಸಾಲ ನೀಡ ಲಾಗುತ್ತಿದೆ. ಹೀಗಾಗಿ ಕ್ಷೇತ್ರದ ಮಹಿಳಾ ಸಹಕಾರ ಸಂಘಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೇರಸಾಲ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು.

ಇದೇ ವೇಳೆ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಮಾಜಿ ತಾಪಂ ಸದಸ್ಯ ಬಸವರಾಜು, ಗ್ರಾಪಂ ಅಧ್ಯಕ್ಷೆ ರತ್ನಮ್ಮ, ಉಪಾಧ್ಯಕ್ಷ ಮಂಜುನಾಥ್, ಗ್ರಾಪಂ ಸದಸ್ಯರಾದ ಗೋವಿಂದರಾಜು, ನಾಗರಾಜು, ಕಾಂತರಾಜು, ಮಹಾಲಕ್ಷ್ಮಿ, ಮನು, ಜ್ಯೋತಿ, ಮೀನಾಕ್ಷಿ, ಅಬ್ದುಲ್ ರಜಾಕ್, ನವೀನ, ಪ್ರಜ್ವಲ್ ಶಶಿ, ವಳಗೆರೆ ಪುಟ್ಟಸ್ವಾಮಿ ಮುಖಂಡರಾದ ಮಲ್ಲೇಶ್, ದೊಡ್ಡಂಕಶೆಟ್ಟಿ ಚಿಕ್ಕಣ್ಣ, ಮರಿ ಗಂಡನಾಯಕ, ಶಿವಣ್ಣ ಸೇರಿದಂತೆ ಇನ್ನಿತರರಿದ್ದರು.

ಅಕ್ಕಮಹಾದೇವಿ ಸಹಕಾರ ಸಂಘಕ್ಕೆ ಶಿವಪ್ರಸಾದ್ ಅಧ್ಯಕ್ಷ



ತಿ.ನರಸೀಪುರ, ಆ.13– ಪಟ್ಟಣದ ಅಕ್ಕಮಹಾದೇವಿ ಸಹಕಾರ ಸಂಘದ ಅಧ್ಯಕ್ಷರಾಗಿ 2ನೇ ಬಾರಿಗೆ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾ ಗೌರವಾಧ್ಯಕ್ಷ ಕೆ.ಜಿ.ಶಿವಪ್ರಸಾದ್ ಹಾಗೂ ಉಪಾಧ್ಯಕ್ಷೆಯಾಗಿ ಸುಧಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಸಹಕಾರ ಸಂಘದ ಕಚೇರಿಯಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ.ಜಿ.ಶಿವಪ್ರಸಾದ್, ಉಪಾಧ್ಯಕ್ಷ ಸ್ಥಾನಕ್ಕೆ ಸುಧಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಸಹಕಾರ ಇಲಾಖೆ ಹಿರಿಯ ನಿರೀಕ್ಷಕಿ, ಚುನಾವಣಾಧಿಕಾರಿ ಆರ್.ನಿರ್ಮಲ ಘೋಷಿಸಿದರು.

ಆ.7ರಂದು ನಡೆದ ಚುನಾವಣೆಯಲ್ಲಿ 12 ಮಂದಿ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಇಂದು ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ನಿರ್ದೇಶಕರಾದ ಎಂ.ಇ.ಮಂಜುನಾಥ್, ಮಲ್ಲೇಶ್, ಪ್ರಭುಸ್ವಾಮಿ, ಎಂ.ಎಸ್.ಶಿವಮೂರ್ತಿ, ಎನ್.ಲೋಕೇಶ್, ಎಂ.ಚಿನ್ನಸ್ವಾಮಿ, ಮಹದೇವಮ್ಮ, ಸೋಸಲೆ ಗ್ರಾಪಂ ಸದಸ್ಯ ಎನ್.ನಾಗೇಂದ್ರ, ಚಿಕ್ಕಮಾದಯ್ಯ ಹಾಗೂ ಪ್ರಸನ್ನ ಕುಮಾರ್ ಭಾಗವಹಿಸಿ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಕೆ.ಜಿ.ಶಿವಪ್ರಸಾದ್ ಮಾತನಾಡಿ, ಸರ್ವ ಸದಸ್ಯರ ಸಹಕಾರದಿಂದ 2ನೇ ಬಾರಿಗೆ ಅಧ್ಯಕ್ಷ ಸ್ಥಾನ ದೊರಕಿದೆ. ಸಂಘದ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸಂಘದಲ್ಲಿ ಬ್ಯಾಂಕಿಂಗ್ ಸೌಲಭ್ಯ, ಇ-ಸ್ಟ್ಯಾಂಪಿಂಗ್ ವ್ಯವಸ್ಥೆ ಕಲ್ಪಿಸಲು ಸಂಬಂಧಿಸಿದವರೊಂದಿಗೆ ಮಾತುಕತೆ ನಡೆಸಲಾಗುವುದು ಎಂದರು.

ಉಪಾಧ್ಯಕ್ಷೆ ಸುಧಾ ಮಾತನಾಡಿದರು. ಸಂಘದ ಕಾರ್ಯ ನಿರ್ವಹಣಾಧಿಕಾರಿ ಎಂ.ಮಹದೇವಸ್ವಾಮಿ, ರೈತ ಮುಖಂಡ ಕಳ್ಳೀಪುರ ಮಹದೇವಸ್ವಾಮಿ ಹಾಜರಿದ್ದರು.

ಪ್ರತಿಯೊಬ್ಬರೂ ರಾಷ್ಟ್ರಧ್ವಜ ಗೌರವಿಸಿ: ಬಿ.ವಿ.ಜವರೇಗೌಡ



ಬೈಲಕುಪ್ಪೆ, ಆ.13– ದೇಶದ ತ್ರಿವರ್ಣ ಧ್ವಜ ಜಾತಿ, ಮತ, ಪಂಥ ಹಾಗೂ ಧರ್ಮಕ್ಕಿಂತ ದೊಡ್ಡದು. ಪ್ರತಿಯೊಬ್ಬರೂ ರಾಷ್ಟ್ರಧ್ವಜವನ್ನು ಗೌರವಿಸಬೇಕು ಎಂದು ಇಂಡೋ-ಟಿಬೆಟಿಯನ್ ಫ್ರೆಂಡ್‌ಶಿಪ್ ಸೊಸೈಟಿ ಅಧ್ಯಕ್ಷ ಬಿ.ವಿ.ಜವರೇಗೌಡ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಟಿ.ಡಿ.ಎಲ್ ಸಮುದಾಯ ಭವನದಲ್ಲಿ ಇಂಡೋ-ಟಿಬೆಟಿಯನ್ ಫ್ರೆಂಡ್‌ಶಿಪ್ ಸೊಸೈಟಿಯಿಂದ 1500 ಧ್ವಜಗಳನ್ನು ನಿರಾಶ್ರಿತರಿಗೆ ಉಚಿತವಾಗಿ ವಿತರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಮಗೆ ಆಶ್ರಯ ನೀಡಿರುವ ಭಾರತದ ಬಗ್ಗೆ ಟಿಬೆಟಿಯನ್ನರ ಪ್ರೀತಿ ನೋಡುತ್ತಿದ್ದರೆ ನಿಜಕ್ಕೂ ಸಂತೋಷವಾಗುತ್ತದೆ. ಪ್ರತಿಯೊಂದು ರಾಷ್ಟ್ರೀಯ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವ ಟಿಬೆಟಿಯನ್ನರಿಗೆ ಭಾರತ ದೇಶ ಎಂಥಹ ಸಂದರ್ಭದಲ್ಲೂ ಚಿರಋಣಿಯಾಗಿರುತ್ತದೆ ಎಂದರು. ಬಳಿಕ ರಾಷ್ಟ್ರಧ್ವಜಗಳನ್ನು ಹಿಡಿದು ರಾಷ್ಟ್ರಗೀತೆ ಹಾಡಲಾಯಿತು. ಇದೇ ವೇಳೆ ಟಿಬೆಟಿಯನ್ ಆಡಳಿತಾಧಿಕಾರಿಗಳಾದ ಯಶಿ, ಚಿಮಿ ದೊರ್ಜಿ, ಟಿಬೆಟಿಯನ್ ಯೂಥ್ ಕಾಂಗ್ರೆಸ್ ಅಧ್ಯಕ್ಷ ಲಕ್ಯಾಪ್, ತೆಂಜಿನ್ ಲೊಡ್ಡೆ, ಜೆ.ಪಿ.ಅರಸ್, ಚೆಂಗಪ್ಪ, ರಾಜೇಂದ್ರ, ಅಣ್ಣಪ್ಪ, ನಟರಾಜು, ಸೇರಿದಂತೆ ನೂರಾರು ಮಂದಿ ಟಿಬೆಟಿಯನ್ನರು ಇದ್ದರು.

ತಾರಕ ಜಲಾಶಯ ಮುಖ್ಯರಸ್ತೆ ಅಭಿವೃದ್ಧಿಗೆ ಆಗ್ರಹಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ, ಆ.13– ತಾರಕ ಜಲಾಶಯ ಮುಖ್ಯರಸ್ತೆ ಅಭಿವೃದ್ಧಿ ಕಾರ್ಯ ಅಪೂರ್ಣಗೊಂಡಿದ್ದು, ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಸುತ್ತಮುತ್ತಲ ಗ್ರಾಮದ ಮಹಿಳೆಯರು ಹೆಗ್ಗಡಾಪುರ ಕೆರೆ ಏರಿ ಮೇಲೆ ನಾಟಿ ಮಾಡಿ ಪ್ರತಿಭಟಿಸಿದರು.

ತಾಲೂಕು ಕೇಂದ್ರದಿಂದ ತಾರಕ ಜಲಾಶಯದವರೆಗೆ 10.3 ಕಿಮೀ ರಸ್ತೆ ಅಭಿವೃದ್ಧಿ ಕಾಮಗಾರಿಗೆ 2019ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಂಯುಕ್ತ ಅನುದಾನದಲ್ಲಿ 10.74 ಕೋಟಿ ರೂ. ಅನುದಾನ ಬಿಡುಗಡೆಯಾಗಿತ್ತು. ಬೆಂಗಳೂರು ಮೂಲದ ಬಾಪೂಜಿ ಸಂಸ್ಥೆ ಗುತ್ತಿಗೆ ಪಡೆದು ಕಾಮಗಾರಿ ಪ್ರಾರಂಭಿಸಿದ್ದು, 4 ವರ್ಷಗಳಿಂದ ಕೇವಲ 7 ಕಿಮೀ ರಸ್ತೆ ಕಾಮಗಾರಿ ಪೂರ್ಣಗೊಳಿಸಿದೆ. ಹೆಗ್ಗಡಪುರ, ನಾಗನಹಳ್ಳಿ ಕೆರೆ ರಸ್ತೆ ಹಾಗೂ ಹಿರೇಹಳ್ಳಿ ಗ್ರಾಮದ ರಸ್ತೆ ಸೇರಿದಂತೆ 3 ಕಿಮೀ ಕಾಮಗಾರಿ ಮಾಡದೆ ನಿರ್ಲಕ್ಷಿಸಿದೆ ಎಂದು ಪ್ರತಿಭಟನಾಕಾರರು ಗುತ್ತಿಗೆದಾರರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ದಸಂಸ ತಾಲೂಕು ಸಂಚಾಲಕ ಸಣ್ಣಕುಮಾರ್ ಮಾತನಾಡಿ, ಹೆಚ್.ಡಿ.ಕೋಟೆ-ತಾರಕ ಹದಗೆಟ್ಟ ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ 2018ರಲ್ಲಿ ನಮ್ಮ ಸಂಘಟನೆಯಿಂದ ಹೆಗ್ಗಾಡಪುರ-ನಾಗನಹಳ್ಳಿ ರಸ್ತೆ ಮಧ್ಯ 3 ದಿನಗಳ ಕಾಲ ಸುತ್ತಮುತ್ತಲ ಗ್ರಾಮಸ್ಥರೊಂದಿಗೆ ಅಹೋರಾತ್ರಿ ಪ್ರತಿಭಟನೆ ನಡೆಸಿದ್ದೇವು. ಹೋರಾಟಕ್ಕೆ ಮಣಿದ ಸರ್ಕಾರ 2019 ರಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಿತ್ತು. ಆದರೆ ಕಾಮಗಾರಿ ಗುತ್ತಿಗೆ ಪಡೆದ ಏಜೆನ್ಸಿಯವರು ಕಾಮಗಾರಿ ನಡೆಸದೇ ನಿರ್ಲಕ್ಷಿಸಿದ್ದಾರೆ. ಇದರಿಂದ ಈ ಮಾರ್ಗದಲ್ಲಿ ಸಂಚರಿಸುವ ಜನರು ತೊಂದರೆ ಅನುಭವಿಸುವಂತಾಗಿದೆ. ತಿಂಗಳೊಳಗೆ ರಸ್ತೆ ಕಾಮಗಾರಿ ಪೂರ್ಣಗೊಳಿಸದಿದ್ದರೆ ಸಂಬಂಧಿಸಿದ ಇಲಾಖಾಧಿಕಾರಿ ಕಚೇರಿ ಎದುರು ಉಪವಾಸ ಸತ್ಯಾಗ್ರಹ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಿರೇಹಳ್ಳಿ ಗ್ರಾಮಸ್ಥೆ ಗೀತಾ ಮಾತನಾಡಿ, ಈ ರಸ್ತೆ ಗುಂಡಿ ಬಿದ್ದಿದೆ. ಅಲ್ಲದೇ ಸೂಕ್ತ ಬಸ್ ಸಂಚಾರವಿಲ್ಲದೆ ಮಕ್ಕಳು ಶಾಲೆಗೆ ತೆರಳಲು ಸಾಧ್ಯವಾಗದೆ ಅರ್ಧಕ್ಕೆ ಶಿಕ್ಷಣ ಮೊಟಕುಗೊಳಿಸುವ ಸ್ಥಿತಿ ಬಂದಿದೆ. ಗರ್ಭಿಣಿ, ಬಾಣಂತಿಯರನ್ನು ಈ ರಸ್ತೆಯಲ್ಲಿ ಹೆಚ್.ಡಿ.ಕೋಟೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಪರದಾಡುವಂತಾಗಿದೆ ಎಂದು ಅಳಲು ತೋಡಿಕೊಂಡರು.

ನಂತರ ಉಪತಹಸೀಲ್ದಾರ್ ಸಣ್ಣರಾಮಪ್ಪ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ದಸಂಸ ಮುಖಂಡರಾದ ಕುಮಾರ, ಚನ್ನಕೋಟೆ, ರಾಚಪ್ಪ ನಂಜುಂಡರಾಜು, ಚಂದ್ರು ಸುರೇಶ್, ಶಿವನಂಜಯ್ಯ, ಬಸವರಾಜು, ಶಿವಮ್ಮ, ಲಕ್ಷ್ಮಿ, ದೇವಮ್ಮ, ಮಲ್ಲಿಗಮ್ಮ, ಪುಟ್ಟಮ್ಮ, ಮಂಜುಳಾ, ರಾಜಮ್ಮ, ಸಣ್ಣತಾಯಮ್ಮ, ಎತ್ತಯ್ಯ, ಸೋಮಶೇಖರ್ ಇದ್ದರು.

ಕ್ರೀಡೆಯಿಂದ ಉತ್ತಮ ಆರೋಗ್ಯ: ಗ್ರಾಪಂ ಅಧ್ಯಕ್ಷ ಚಂದ್ರು




ಮಲ್ಲುಂಡಿ, ಆ.13– ಕ್ರೀಡೆಯಿಂದ ಮನುಷ್ಯನಿಗೆ ಉತ್ತಮ ಆರೋಗ್ಯ ಸಿಗುತ್ತದೆ ಎಂದು ಗ್ರಾಪಂ ಅಧ್ಯಕ್ಷ ಚಂದ್ರು ತಿಳಿಸಿದರು. ಸಮೀಪದ ಹುರ ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ಶಾಲಾವರಣದಲ್ಲಿ ಆಯೋಜಿಸಿದ್ದ ವಲಯ ಮಟ್ಟದ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದ ಅವರು, ಕೊರೊನಾದಿಂದ ಕ್ರೀಡೆಗಳು ಇಲ್ಲದೆ ಮಕ್ಕಳಿಗೆ ಬೇಸರವಾಗಿತ್ತು. ಮಕ್ಕಳಿಗೆ ಪಠ್ಯಪುಸ್ತಕ ಕಲಿಕೆ ಜೊತೆಗೆ ಕ್ರೀಡಾ ಚಟುವಟಿಕೆ ಮುಖ್ಯ ಎಂದರು. ಈ ವೇಳೆ ನಲ್ಲಿತಾಳಪುರ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಬಿಇಓ ರಾಜು, ಗ್ರಾಪಂ ಸದಸ್ಯ ಶಿವಕುಮಾರ್ ಮತ್ತಿತರರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಅತ್ತಿಗೋಡು ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಅತ್ತಿಗೋಡು ಗ್ರಾಪಂ ವತಿಯಿಂದ ನರೇಗಾ ಯೋಜನೆಯ 9 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಬ್ಯಾಸ್ಕೆಟ್ ಬಾಲ್ ಕ್ರೀಡಾಂಗಣ ಕಾಮಗಾರಿಯನ್ನು ತಾಪಂ ಇಓ ಕೃಷ್ಣಕುಮಾರ್ ವೀಕ್ಷಿಸಿದರು. ಬೆಟ್ಟದತುಂಗ ಗ್ರಾಪಂ ಅಧ್ಯಕ್ಷ ದೇವರಾಜ್, ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್, ಮುಖ್ಯ ಶಿಕ್ಷಕ ನಾಗಶೆಟ್ಟಿ, ಪಶು ಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ. ಸೋಮಯ್ಯ ಹಾಜರಿದ್ದರು.

ಅಮರನಾಥ್ ಜಗದೀಶ್ ನಿಧನ



ಹುಣಸೂರು, ಆ.13– ಪಟ್ಟಣದ ಗೋಕುಲ ರಸ್ತೆ ನಿವಾಸಿ ಅಮರನಾಥ್ ಜಗದೀಶ್(72) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಸಂಜೆ 4 ಗಂಟೆಗೆ ಹುಣಸೂರಿನ ಸಿಎಸ್ಐ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಬ್ಬರು ಮಕ್ಕಳೊಂದಿಗೆ ರೈಲಿಗೆ ಸಿಲುಕಿ ಮಹಿಳೆ ಆತ್ಮಹತ್ಯೆ

ಮೈಸೂರು, ಆ.13– ಮಹಿಳೆಯೊಬ್ಬರು ಇಬ್ಬರು ಮಕ್ಕಳೊಂದಿಗೆ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಹೃದಯ ವಿದ್ರಾವಕ ಘಟನೆ ಶುಕ್ರವಾರ ಮೈಸೂರಿನಲ್ಲಿ ನಡೆದಿದೆ. ರಮಾಬಾಯಿನಗರದ ಬಳಿ ಇರುವ ರೈಲ್ವೆ ಹಳಿಯಲ್ಲಿ ಈ ಘಟನೆ ನಡೆದಿದೆ. ಸುಮಾರು 35 ವರ್ಷದ ಮಹಿಳೆ, 8 ವರ್ಷದ ಪುತ್ರ ಹಾಗೂ 1 ವರ್ಷದ ಕಂದನೊಂದಿಗೆ ರೈಲಿಗೆ ಸಿಲುಕಿದ್ದಾರೆ. ಮೃತ ಮಹಿಳೆ ಹಾಗೂ ಮಕ್ಕಳ ವಿವರ ಪತ್ತೆಯಾಗಿಲ್ಲ. ಮೃತದೇಹಗಳನ್ನು ಮೈಸೂರು ಮೆಡಿಕಲ್ ಕಾಲೇಜು ಶವಾಗಾರದಲ್ಲಿ ಇಡಲಾಗಿದೆ. ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ. ಎಂ.ಆರ್. ಗಂಗಾಧರ್ ಅವರ ಮಾರ್ಗದರ್ಶನದಲ್ಲಿ ಟಿ.ಎಂ. ವಿಷಕಂಠನಾಯಕ ಅವರು ಆಂತ್ರಾಪೊಲಜಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಾರ್ವಜನಿಕ ಪ್ರಕಟಣೆ

ಸನ್ ಎರಡು ಸಾವಿರದ ಇಪ್ಪತ್ತೆರಡನೇ ಇಸವಿ ಆಗಸ್ಟ್ ಮಾಹೆ ತಾರೀಖು ಹದಿಮೂರರಲ್ಲೂ (13-08-2022) ನನ್ನ ಕಕ್ಷಿದಾರರಾದ ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕು, ಸಾತನೂರು ಗ್ರಾಮದಲ್ಲಿ ವಾಸವಾಗಿರುವ ಶ್ರೀ ಲೇಟ್ ಎ. ಸಿದ್ದಯ್ಯ ಮತ್ತು ಶ್ರೀಮತಿ ದೇವಮ್ಮ ರವರ ಮಗನಾದ ಶ್ರೀ ಶರತ್ ಚಂದ್ರ ಎಸ್. ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ವಸತಿ ಉದ್ದೇಶಕ್ಕಾಗಿ ಬಡಾವಣೆಯನ್ನಾಗಿ ಅಭಿವೃದ್ಧಿ ಪಡಿಸಲು ಸ್ವತ್ತಿನ ಮಾಲೀಕರಾದ ಶ್ರೀ ಮಂಜುನಾಥ ಎಸ್. ಶ್ರೀ ಕೆ. ಕೃಷ್ಣಮೂರ್ತಿ ಮತ್ತು ಶ್ರೀ ಎಸ್. ಸುಬ್ಬಯ್ಯರವರ ಸ್ವತ್ತನ್ನು ಖರೀದಿಸಿ ಕರಾರನ್ನು ಮಾಡಿ ಕೊಳ್ಳಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ 15 (ಹದಿನೈದು) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂ. 148/4 ರಲ್ಲಿರುವ ಒಟ್ಟು 1–21 ಜಮೀನಿನ ಪೈಕಿ 0–31 (ಮೂವತ್ತೊಂದು ಗುಂಟೆ) ಗುಂಟೆ ಜಮೀನು ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಸರ್ವೆ ನಂಬರ್ 140 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂಬರ್ 14/4 ರ ಉಳಿಕೆ ಜಮೀನು, ಉತ್ತರಕ್ಕೆ: ಸರ್ವೆ ನಂಬರ್ 148/3ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂಬರ್ 145 ರ ಜಮೀನು.

ಸಹಿ/– ಎಂ.ಎನ್. ಬಾಲಸುಬ್ರಮಣ್ಯ (ನೋಟರಿ)
ವಕೀಲರು. ಮೊ: 7338267067
ಖರೀದಿದಾರರು ಶರತ್ ಚಂದ್ರ ಎಸ್.
ಮೊ: 9880072625

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಇಂದಿಗೆ ನೀವು ನಮ್ಮನ್ನಗಲಿ ಒಂದು ವರ್ಷವಾದರೂ ನಿಮ್ಮ ನೆನಪು ಸದಾ ಕಾಡುತ್ತಲಿದೆ. ಭಾನುವಾರ ಮ. 12 ಗಂಟೆಗೆ ಸ್ವಗೃಹದಲ್ಲಿ ಪಾದಪೂಜೆ ಏರ್ಪಡಿಸಲಾಗಿದ್ದು, ತಾವುಗಳು ಆಗಮಿಸಬೇಕಾಗಿ ವಿನಂತಿ.

ವಿ. ನಾಗರಾಜು (ನಾಗಣ್ಣ)
ಜಿ.ಟಿ.ಬಿ.ಪಿ., ಮೈಸೂರು ಗೌರಿಶಂಕರ ನಗರ, ಮೈಸೂರು

ದುಃಖತಪ್ತರು: ವನಜಾಕ್ಷಿ, ಮಗಳು, ಸಹೋದರರು ಮತ್ತು ಬಂಧು ಬಳಗದವರು.

ಒಂದನೇ ತಿಂಗಳ ಪುಣ್ಯಸ್ಮರಣೆ



ಇವರು 4.7.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ನೀವು ನಮ್ಮನ್ನಗಲಿ ಒಂದು ತಿಂಗಳು ಕಳೆದರೂ ಸದಾ ನಮ್ಮ ನೆನಪಿನಲ್ಲಿದ್ದೀರಿ

ದು:ಖತಪ್ತರು
ಮೃತರ ತಾಯಿ ಜಯಮ್ಮ, ಪತ್ನಿ ಪಂಕಜ ಹಾಗೂ ಕುಟುಂಬ ವರ್ಗದವರು ಮಲ್ಕುಂಡಿ ನಂಜನಗೂಡು ತಾ.

ಎಂ.ಸಿ.ಮಹೇಶ್
ಎಪಿಎಂಸಿ ಸದಸ್ಯರು ಹಾಗೂ ಬಿಜೆಪಿ ಮುಖಂಡರು

2ನೇ ವರ್ಷದ ಸವಿನೆನಪು



ಜನನ: 11/7/1977 ನಿಧನ: 14/08/2020

ಶ್ರೀ ಪ್ರಸನ್ನಕುಮಾರ್

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು

ದುಃಖತಪ್ತರು: ತಂದೆ–ನಾಗರಾಜು, ತಾಯಿ–ಲಕ್ಷ್ಮಮ್ಮ, ಪತ್ನಿ : ರತ್ನಕುಮಾರಿ ಮಕ್ಕಳಾದ: ಅಭಿಷೇಕ್ ಮತ್ತು ಅಮೂಲ್ಯ ಹಾಗೂ ತಮ್ಮ: ಶ್ರೀಮತಿ ರಶ್ಮಿ ಮತ್ತು ಆದರ್ಶ್ ಮತ್ತು ಅಕ್ಕ ರಮಾಮಣಿ ಹಾಗೂ ಕುಟುಂಬ ವರ್ಗದವರು

ಉದ್ಯೋಗ ಅವಕಾಶ ಬೇಕಾಗಿದ್ದಾರೆ

ಸೀಐ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. 2001
ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ, ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ ಮೇಲ್ಪಟ್ಟು, ವಯಸ್ಸು: 25 ವರ್ಷದಿಂದ 65 ವರ್ಷದವರೆಗೆ, ಅವಕಾಶ: ನಿರುದ್ಯೋಗಿಗಳು, ನಿವೃತ್ತರು, ಪಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಸೂರೆನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು ವೇತನ: 25,000 ರೂ ಮತ್ತು ಇತರೆ ಭತ್ಯೆಗಳು ಸಂದರ್ಶನ ದಿನಾಂಕ: 16–08–22, ಸಮಯ: 11.30ಕ್ಕೆ. ಸಂಪರ್ಕಿಸಿ:
7892303484 / 9483247455

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. Y/E. 29/2022-23/07
ದಿನಾಂಕ: 10.08.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನಂಜನಗೂಡು ಟೌನ್–ಚಾಮರಾಜನಗರ ವಿಭಾಗದ ನಡುವಿನ ಎಲ್‌ಸಿ ಗೇಟ್ ಸಂಖ್ಯೆ 40, 50, 51 ಮತ್ತು 52 ಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸರಬರಾಜು ವ್ಯವಸ್ಥೆ ಕಲ್ಪಿಸುವುದು.	ರೂ. 9,03,879.16/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01–09–2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನೀಯರ್ ಮೈಸೂರು
PUB/296/AAV/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ

ಇ –ಹರಾಜು ಸಂಖ್ಯೆ MYS-SLR-10, MYS-COML-VPH-1, MYS-ADVT-MA-1 & MYS-ADVT-NRF-6

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ 19.08.2022, 22.08.2022, 24.08.2022 ಮತ್ತು 25.08.2022 ರಂದು ನಿಗದಿಪಡಿಸಿದಂತೆ ಮೈಸೂರು ವಿಭಾಗದಲ್ಲಿ ಎಸ್‌ಎಲ್‌ಆರ್ ಮತ್ತು ವಿಪಿಎಚ್‌ನ ಪಾರ್ಸೆಲ್ ಜಾಗವನ್ನು ಗುತ್ತಿಗೆಗೆ ಪಡೆಯಲು ಮತ್ತು ರೈಲಿನ ಬೋಗಿಗಳ ಹೊರಭಾಗದಲ್ಲಿ ಮತ್ತು ವಿವಿಧ ನಿಲ್ದಾಣಗಳ ಓಹೆಚ್ ಪ್ರದೇಶಗಳಲ್ಲಿ ವಿನೈಲ್ ಹೊದಿಕೆಯ ಮೂಲಕ ಜಾಹೀರಾತು ಪ್ರದರ್ಶನಕ್ಕಾಗಿ ಇ–ಹರಾಜಿನಲ್ಲಿ ಭಾಗವಹಿಸಲು ಬಿಡ್‌ದಾರರನ್ನು ಆಹ್ವಾನಿಸುತ್ತಾರೆ.

ಕ್ರ.ಸಂ.	ಇ–ಹರಾಜು ಕ್ಯಾಟಲಾಗ್ ಸಂ.	ವರ್ಗ/ಉಪ–ವರ್ಗ	ಇ–ಹರಾಜು ದಿನಾಂಕ ಮತ್ತು ಸಮಯ
1	ಎಂವೈಎಸ್–ಎಸ್‌ಎಲ್‌ಆರ್–10	ಪಾರ್ಸೆಲ್/ಎಸ್‌ಎಲ್‌ಆರ್	19.08.2022 & 10:00
2	ಎಂವೈಎಸ್–ಸಿಓಎಂಎಲ್–ವಿಪಿಎಚ್–1	ಪಾರ್ಸೆಲ್/ವಿಪಿಎಚ್	22.08.2022 & 10:00
3	ಎಂವೈಎಸ್–ಎಡಿವಿಟಿ–ಎಂಎ–1	ಜಾಹೀರಾತು/ಮೊಬೈಲ್ ಸ್ವತ್ತುಗಳು	24.08.2022 & 11:00 ಗಂಟೆ
4	ಎಂವೈಎಸ್–ಎಡಿವಿಟಿ–ಎನ್‌ಆರ್‌ಎಫ್–6	ಜಾಹೀರಾತು/ಮೊಬೈಲ್ ಸ್ವತ್ತು & ಔಟ್ ಆಫ್ ಹೋಮ್	25.08.2022 & 11:00 ಗಂಟೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ
PUB/299/AAV/PRB/SWR/2022-23 ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು/ಮೈಸೂರು
S.W.Railways sw_rly SWRRLY southwesternrailway SWRRLY

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ವಿಭಾಗ, ಮೈಸೂರು

ಸಂ: ಕರಾಸಾ/ಮೈ.ವಿ/ಸಂ/ವಾ/1916/2022–23 ದಿನಾಂಕ: 13.08.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಸಂ: 02/2022–23 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮೈಸೂರು ವಿಭಾಗದ ವ್ಯಾಪ್ತಿಯ ಮೈಸೂರು ನಗರ ಬಸ್ ನಿಲ್ದಾಣ, ಚಾಮುಂಡಿ ಬೆಟ್ಟ ಬಸ್ ನಿಲ್ದಾಣ, ಕುವೆಂಪುನಗರ, ಆರ್.ಎಸ್.ನಾಯ್ಡು ನಗರ ಮತ್ತು ಜಯಪುರ ಬಸ್ ನಿಲ್ದಾಣಗಳ ಆವರಣ ಮತ್ತು ಶೌಚಾಲಯಗಳು ಹಾಗೂ ಸಾತಗಳ್ಳಿ, ಕುವೆಂಪುನಗರ ಮತ್ತು ವಿಜಯನಗರ ಬಸ್ ಘಟಕದಲ್ಲಿರುವ ಶೌಚಾಲಯಗಳು ಮತ್ತು ವಿಶ್ರಾಂತಿಗೃಹಗಳ ಸ್ವಚ್ಛತಾ ನಿರ್ವಹಣೆ ಕಾರ್ಯದ ಗುತ್ತಿಗೆಯನ್ನು ಯಾಂತ್ರೀಕೃತ/ ಯಾಂತ್ರೀಕೃತ ರಹಿತ ಹೌಸ್ ಕೀಪಿಂಗ್ ಪದ್ಧತಿಗನುಗುಣವಾಗಿ ನಿರ್ವಹಿಸಲು ಆಸಕ್ತ ಸ್ವಚ್ಛತಾ ಗುತ್ತಿಗೆದಾರ ರಿಂದ **ದಿನಾಂಕ 16.08.2022** ರಿಂದ **ದಿನಾಂಕ: 25.08.2022** ರಂದು ಬೆಳಿಗ್ಗೆ **11:00** ಗಂಟೆಯವರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಗಳನ್ನು ಕರೆಯಲಾಗಿದೆ.

(1) ಇ–ಟೆಂಡರ್ ವಿಚಾರಣೆಗೆ/ಆಕ್ಷೇಪಣೆ ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ: **20.08.2022 ಸಮಯ 11:00 ಗಂಟೆ.** (2) ಇ–ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ: **25.08.2022 ಸಮಯ 11:00 ಗಂಟೆ.** (3) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **26.08.2022 ಸಮಯ 12:00 ಗಂಟೆ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **29.08.2022 ಸಮಯ 11:00 ಗಂಟೆ.**

ಹೆಚ್ಚಿನ ಮಾಹಿತಿಗಾಗಿ / ವಿವರಗಳಿಗಾಗಿ ಸಂಪರ್ಕಿಸಿ: ಸಹಾಯವಾಣಿ ಸಂಖ್ಯೆ: 0821–2493885 / 7760990802, / 7760990811 / 9916722462. ಇ–ಮೇಲ್ ವಿಳಾಸ: **https://www.eproc.karnataka.gov.in, hphelpdesk.blr@intarvo.com** ಅಥವಾ **hphelpdesk.blr@gmail.com**

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು ವಿಭಾಗ
ವಾಸಾಸಂಇ/ವಾಪ್ರ/ಎಲ್‌ಸಿ/1806/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1
ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಟೆಂಡರ್ ಮುಂದೂಡಿಕೆ ದಿನಾಂಕ 11.08.2022

ಉಲ್ಲೇಖ: 1.ಮೂಲ ಟೆಂಡರ್ ಪ್ರಕಟಣೆ ಸಂಖ್ಯೆ 13/2022–23 ದಿನಾಂಕ 06.08.2022 ಈ ಕಛೇರಿಯ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 13/2022–23 ದಿನಾಂಕ 06.08.2022 ರ ಟೆಂಡರ್ ಪ್ರಕ್ರಿಯೆ ಮುಂದೂಡಿಕೆ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿದೆ. ಉಳಿದಂತೆ ಟೆಂಡರ್ ನ ಎಲ್ಲಾ ನಿಬಂಧನೆಗಳು ಹಾಗೆಯೇ ಮುಂದುವರಿಯುತ್ತವೆ. ಟೆಂಡರ್ ಮುಂದೂಡಿಕೆ ದಿನಾಂಕ ಟೆಂಡರ್ ಪ್ರಕಟಣೆ ಸಂಖ್ಯೆ 13/2022–23 ದಿನಾಂಕ 06.08.2022 ಹಿಂದೆ ಉಲ್ಲೇಖ (1) ರಲ್ಲಿ ನಿಗದಿಪಡಿಸಿದಂತೆ ಗುತ್ತಿಗೆದಾರರು ಇ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ 23.08.2022 ಸಂಜೆ 4:00 ಮುಂದೂಡಿದ ಪ್ರಕಟಣೆ ಯಂತೆ ಗುತ್ತಿಗೆದಾರರು ಇ–ಟೆಂಡರ್ ಸಲ್ಲಿಸಲು ದಿನಾಂಕ ಮತ್ತು ಸಮಯ 19.08.22 ಸಮಯ: 11.30 ರಿಂದ 29.08.2022 ಸಮಯ:ಗಂಟೆ 17.00 ವರೆಗೆ. ಭರ್ತಿ ಮಾಡಿದ ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ: 30–08–2022 ಸಂಜೆ 5:00 ಗಂಟೆ

ಸಹಿ/– ಎಕ್ಸಿಕ್ಯೂಟಿವ್ ಇಂಜಿನಿಯರ್, ನಂ.1 ಹೇಮಾವತಿ, ಬಲ ಮೇಲ್ದಂಡೆ ನಾಲಾವಿಭಾಗ, ಗೊರೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/411/2022–23